# ಅಖಿಲ ಭಾರತ ಪತ್ರಿಕೆ

## ಜೂನ್ – 2013



# “ನಿಜವಾದ ವಿನಮ್ರತೆ ಹಾಗೂ ಪ್ರಾರ್ಥನೆಯ ಪರಿಣಾಮಕಾರಿತ್ವ”



*"Thou art thyself the author of thy pain."*

- Sri Aurobindo

# ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ|| ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ|| ಗುರುಲಿಂಗ ಕಾಪಸೆ
ಡಾ|| ಪಾರ್ವತಿ ನಾರಾಯಣರಾವ್
ಡಾ|| ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

**ಬೆಲೆ : 15/–**

## ಪರಿವಿಡಿ

### "ನಿಜವಾದ ವಿನಮ್ರತೆ ಹಾಗೂ ಪ್ರಾರ್ಥನೆಯ ಪರಿಣಾಮಕಾರಿತ್ವ"

**(ಶ್ರೀ ಅರವಿಂದರ ಹಾಗೂ ಶ್ರೀ ಮಾತೆಯವರ ನುಡಿಗಳು)**

**ಭಾಗ – 1 : ನಿಜವಾದ ವಿನಮ್ರತೆ**

**ಅನು : ಡಾ. ಕೆ.ಎಸ್. ಆಮೂರ**

ನಿಜವಾದ ವಿನಮ್ರತೆ 3
ನಮ್ರರಾಗಿರುವುದಕ್ಕೆ ಸರಿಯಾದ ಹಾಗೂ ತಪ್ಪಾದ ರೀತಿ 5
ಸ್ವಾರ್ಥರಹಿತ ಪ್ರಶಂಸೆ – ನಿಜವಾದ ವಿನಮ್ರತೆಯ ಒಂದು ಅಂಶ 7
ವಿನಮ್ರತೆ – ಎಲ್ಲ ಸಿದ್ಧಿಗಳಿಗಾಗಿ ಇರುವ ನಿಬಂಧನೆ 10
ದೇವ (ಕವಿತೆ) 13
ವಿನಮ್ರತೆಯನ್ನು ಕುರಿತು ಶ್ರೀ ಅರವಿಂದರು 13
ನಾಲ್ಕು ಚಿಕ್ಕ ಕತೆಗಳು 14

**ಭಾಗ – 2 : ಪ್ರಾರ್ಥನೆಯ ಪರಿಣಾಮಕಾರಿತ್ವ**

ಪ್ರಾರ್ಥನೆಯನ್ನೇಕೆ ಮಾಡಬೇಕು? 20
ಪ್ರಾರ್ಥನೆ ಮತ್ತು ಅದಕ್ಕೆ ಉತ್ತರ 21
ಪ್ರಾರ್ಥನೆ ಮತ್ತು ನಿಯತಿವಾದ 27
ಪ್ರಾರ್ಥನೆ ಮತ್ತು ಅಭೀಪ್ಸೆ ಇವುಗಳ ನಡುವಿರುವ ಭಿನ್ನತೆ 30
ಪ್ರಾರ್ಥನೆಯ ಯಶಸ್ಸಿಗಾಗಿ ನಿಬಂಧನೆ 36

**ಅನು : ಶ್ರೀ ಪುರುಷೋತ್ತಮ ಗಲಗಲಿ**

ಸಾಮೂಹಿಕ ಪ್ರಾರ್ಥನೆಯ ಪರಿಣಾಮ ಹಾಗೂ ಮೌಲ್ಯ 38

**ಅನು : ಶ್ರೀ ವೀರೇಂದ್ರ ಸಿಂಪಿ**

ಪ್ರಾರ್ಥನೆಗಳು – ಭಗವಂತನತ್ತ ಹೊರಳಿದ ಭಾವಗಳು 41

**ಅನು : ಡಾ. ಕೆ.ಎಸ್. ಆಮೂರ**

ಪ್ರಾರ್ಥನೆಯನ್ನು ಹೇಗೆ ಮಾಡಬೇಕು? 46
**ವಾರ್ತಾಪತ್ರ** 48

*

ದೈವೀ ಕೃಪೆಯನ್ನು ಸ್ವೀಕರಿಸುವುದಕ್ಕೆ ಮನುಷ್ಯನಲ್ಲಿ ಶ್ರೇಷ್ಠ ಅಭೀಪ್ಸೆ ಇರಬೇಕಷ್ಟೇ ಅಲ್ಲ, ಆದರೆ ಹಾಗೆಯೇ ನಿಷ್ಕಪಟವಾದ ವಿನಮ್ರತೆ ಮತ್ತು ಪರಿಪೂರ್ಣ ವಿಶ್ವಾಸವಿರಬೇಕು.

(16/232) – ಶ್ರೀಮಾತೆ

*

## ನಿಜವಾದ ವಿನಮ್ರತೆ

ನಮ್ಮ ಪ್ರಯತ್ನಗಳು, ಹೋರಾಟಗಳು ಏನೇ ಇರಲಿ, ವಿಜಯಗಳೂ ಕೂಡ ಏನೇ ಆಗಿರಲಿ, ಇನ್ನೂ ಸಾಗಿ ಹೋಗಬೇಕಾದ ಮಾರ್ಗಕ್ಕೆ ಹೋಲಿಸಿದರೆ ನಾವು ಈವರೆಗೆ ಕೈಕೊಂಡ ಪ್ರಯಾಣ ಏನೂ ಅಲ್ಲ ಎಂಬುದನ್ನು ಕಲಿತುಕೊಳ್ಳಬೇಕು.

*

ಮಾರ್ಗದಲ್ಲಿ ನಾವು ಹೆಚ್ಚಿನ ರೀತಿಯಲ್ಲಿ ಮುಂದುವರಿದ ಹಾಗೆ ಹೆಚ್ಚು ಹೆಚ್ಚಾಗಿ ವಿನಯಶೀಲರಾಗುತ್ತೇವೆ ಮತ್ತು ಇನ್ನೂ ಕೈಕೊಳ್ಳಬೇಕಾದುದಕ್ಕೆ ಹೋಲಿಸಿದರೆ ನಾವೇನನ್ನೂ ಕೈಕೊಂಡಿಲ್ಲ ಎಂಬುದನ್ನು ಕಂಡುಕೊಳ್ಳುತ್ತೇವೆ.

*

ನಮ್ರರಾಗಿರುವುದರ ಅರ್ಥ ಮನಸ್ಸು, ಪ್ರಾಣ ಹಾಗೂ ದೇಹಗಳಿಗೆ ಭಗವಂತನಿಲ್ಲದೆ ಏನೂ ತಿಳಿದಿರುವುದಿಲ್ಲ, ಅವುಗಳೇನೂ ಅಲ್ಲವೇ ಅಲ್ಲ. ಅವುಗಳೇನನ್ನೂ ಕೈಕೊಳ್ಳಲಾರವು, ಆದರೆ ಅಜ್ಞಾನ, ಅಸ್ತವ್ಯಸ್ತತೆ ಮತ್ತು ನಿರ್ವೀರ್ಯತೆ ಇವುಗಳಿಂದ ಕೂಡಿರುತ್ತವೆ ಎಂಬುದನ್ನು ಎಂದಿಗೂ ಮರೆಯದೆ ಇರುವುದಾಗಿದೆ. ಭಗವಂತ ಮಾತ್ರ ದೈವೀ ಸತ್ಯ, ಪ್ರಾಣ, ಸಾಮರ್ಥ್ಯ, ಪ್ರೇಮ ಹಾಗೂ ಪರಮಸುಖ ಇವೆಲ್ಲವೂ ಆಗಿದ್ದಾನೆ.

ಹಾಗಾಗಿ ಭಗವಂತನನ್ನು ಸಾರದಲ್ಲಿ ಅಷ್ಟೇ ಅಲ್ಲ, ಆದರೆ ಅವನ ಕ್ರಿಯೆ ಹಾಗೂ ಪ್ರಕಟಣೆಯಲ್ಲಿ ಮನಸ್ಸು, ಪ್ರಾಣಿಕ ಹಾಗೂ ದೇಹಗಳು ಅವನನ್ನು ಅರಿತುಕೊಳ್ಳುವ, ತೀರ್ಮಾನಕ್ಕೊಳಪಡಿಸುವ ಕ್ಷಮತೆ ಹೊಂದಿರುವುದಿಲ್ಲ ಎಂಬುದನ್ನು ಅವು ಕಲಿತುಕೊಳ್ಳಬೇಕು.

ಇದು ಮಾತ್ರ ನಿಜವಾದ ವಿನಮ್ರತೆ ಮತ್ತು ಅದರೊಂದಿಗೆ ಅಚಂಚಲತೆ ಮತ್ತು ಶಾಂತಿ ಬರುತ್ತವೆ.

ಹಾಗೆಯೇ ಇದು ಎಲ್ಲ ವಿರೋಧೀ ಆಕ್ರಮಣಗಳ ವಿರುದ್ಧ ಅತಿ ನಿಶ್ಚಿತ ಗುರಾಣಿ (shield) ಇದ್ದ ಹಾಗೆ. ನಿಜವಾಗಿ ಮಾನವ ಸತ್ತೆಯಲ್ಲಿ ವಿರೋಧಿ ಶಕ್ತಿ (ಶತ್ರು) ಯಾವಾಗಲೂ ಗರ್ವದ ಬಾಗಿಲನ್ನು ತಟ್ಟುತ್ತದೆ, ಏಕೆಂದರೆ ಈ ಬಾಗಿಲು ಅವನ ಪ್ರವೇಶಕ್ಕಾಗಿ ತೆರೆದಿರುತ್ತದೆ.

*



ಪರಮೋಚ್ಚ ದೈವೀ ಪ್ರಜ್ಞೆ ಮತ್ತು ಪರಮೋಚ್ಚ ಸಂಕಲ್ಪವಾದದ್ದು ಮಾತ್ರ ಅಸ್ತಿತ್ವದಲ್ಲಿದೆ ಮತ್ತು 'ನಾನು' ಎಂಬುದು ಅಲ್ಲ ಎಂದು ತಿಳಿದುಕೊಳ್ಳುವುದರಲ್ಲಿ ನಿಜವಾದ ವಿನಮ್ರತೆ ಒಳಗೊಂಡಿದೆ.

*

ನಾವು ಏನೂ ಆಗಿಲ್ಲ, ನಮಗೇನೂ ತಿಳಿದಿಲ್ಲ ಮತ್ತು ನಾವೇನನ್ನೂ ಕೈಕೊಳ್ಳಲಾರೆವು, ಕೇವಲ ಪರಮೋಚ್ಚನಾದ ಭಗವಂತ ತಿಳಿದಿದ್ದಾನೆ, ಕೈಕೊಳ್ಳುತ್ತಾನೆ ಮತ್ತು ಅಸ್ತಿತ್ವದಲ್ಲಿದ್ದಾನೆ ಎಂಬ ಸಿದ್ಧಿಯನ್ನು ಸಮೀಪಿಸುತ್ತ ನೀನು ಬಹಳ ಜಾಣನಾಗುತ್ತ ಹೋಗುವಿ.

*

ದೊಡ್ಡವನೆಂದಾಗಲಿ ಇಲ್ಲವೆ ಚಿಕ್ಕವನೆಂದಾಗಲಿ, ಮಹಿಮಾನ್ವಿತನೆಂದಾಗಲಿ, ಇಲ್ಲವೆ ಯಾವ ಮಹತ್ವವೂ ಇಲ್ಲದವನೆಂದಾಗಲಿ ನೀನು ಯೋಚಿಸಬೇಡ, ಏಕೆಂದರೆ ನಮ್ಮಲ್ಲಿಯೇ ನಾವು ಏನೂ ಆಗಿರುವುದಿಲ್ಲ, ಭಗವಂತ ನಮಗಾಗಿ ಏನನ್ನು ಸಂಕಲ್ಪಿಸಿದ್ದಾನೋ ಅದಾಗುವುದಕ್ಕಾಗಿ ಮಾತ್ರ ಜೀವಿಸಬೇಕು.

*

ನಿಜವಾದ, ನಿಷ್ಕಪಟದ್ದಾದ ವಿನಮ್ರತೆ ನಮ್ಮ ರಕ್ಷಣೋಪಾಯವಾಗಿರುತ್ತದೆ – ಅಹಂಕಾರವನ್ನು ಕರಗಿಸಲು ಅದು ಅತ್ಯವಶ್ಯವಾದ ಅತ್ಯಂತ ನಿಶ್ಚಿತ ಮಾರ್ಗ.

*

ವಿನಮ್ರತೆ ಮತ್ತು ನಿಷ್ಕಾಪಟ್ಯ ಇವು ಅತ್ಯಂತ ಒಳ್ಳೆಯ ರಕ್ಷಣೋಪಾಯಗಳು. ಇವುಗಳಿಲ್ಲದೆ ಇರಿಸಿದ ಪ್ರತಿಯೊಂದು ಹೆಜ್ಜೆ ಒಂದು ಅಪಾಯ, ಇವುಗಳಿದ್ದಾಗ ವಿಜಯ ನಿಶ್ಚಿತ.

*

ನಿಮ್ಮ ವೈಯಕ್ತಿಕ ಮೌಲ್ಯ ಇಲ್ಲವೆ ವ್ಯಕ್ತಿಗತ ಸಿದ್ಧಿ ಏನೇ ಆಗಿರಲಿ, ಯೋಗದಲ್ಲಿ ಅವಶ್ಯವಾದ ಮೊದಲ ಗುಣ ವಿನಮ್ರತೆಯಾಗಿರುತ್ತದೆ.

*

ಎಲ್ಲ ಖಿನ್ನತೆ ಮತ್ತು ನಿರಾಶೆ ಇವುಗಳ ಸೃಷ್ಟಿ ವಿರೋಧಿ ಶಕ್ತಿಗಳಿಂದಾಗಿರುತ್ತದೆ. ನಿಮ್ಮನ್ನು ವಿಷಣ್ಣತೆಯ ಮನೋಭಾವದಲ್ಲಿ ಚೆಲ್ಲಿಕೊಡುವುದರಿಂದ ಅವುಗಳಿಗೆ ಆಗುವ ಸಂತಸ ಬೇರಾವುದರಿಂದ ಆಗುವುದಿಲ್ಲ. ವಿನಮ್ರತೆ ನಿಜವಾಗಿ ಒಂದು ವಿಷಯ, ಖಿನ್ನತೆ ಬೇರೆ ಇನ್ನೊಂದು ವಿಷಯ. ಮೊದಲನೆಯದು ದೈವಿಕವಾದದ್ದು ಮತ್ತು ನಂತರದ್ದು ಅಂಧಕಾರದ ಶಕ್ತಿಗಳ ಬಹಳ ಒರಟಾದ ಅಭಿವ್ಯಕ್ತಿ.

**(14/159–61, 3/139)** **– ಶ್ರೀಮಾತೆ**

*

## ನಮ್ರರಾಗಿರುವುದಕ್ಕೆ ಸರಿಯಾದ ಹಾಗೂ ತಪ್ಪಾದ ರೀತಿ

ಒಂದು ವಿಷಯವನ್ನು ಎಂದರೆ ವಿನಮ್ರತೆಯ ಆವಶ್ಯಕತೆಯನ್ನು ಕುರಿತು ಯಾವಾಗಲೂ ಹೇಳಲಾಗುತ್ತದೆ, ಆದರೆ ಅದನ್ನು ಯಾವಾಗಲೂ ತಪ್ಪಾದ ರೀತಿಯಲ್ಲಿ ತಿಳಿದುಕೊಳ್ಳಲಾಗಿರುತ್ತದೆ. ಅದನ್ನು ತಪ್ಪಾದ ರೀತಿಯಲ್ಲಿ ಗ್ರಹಿಸಲಾಗಿರುತ್ತದೆ, ತಪ್ಪು ಅರ್ಥಮಾಡಿಕೊಳ್ಳಲಾಗಿರುತ್ತದೆ ಮತ್ತು ತಪ್ಪಾದ ರೀತಿಯಲ್ಲಿ ಉಪಯೋಗಿಸಲಾಗುತ್ತದೆ. ಸರಿಯಾದ ರೀತಿಯಲ್ಲಿ ವರ್ತಿಸಲು ಸಾಧ್ಯವಾದರೆ ನಮ್ರರಾಗಿರಿ. ಎಲ್ಲಕ್ಕೂ ಮಿಗಿಲಾಗಿ ತಪ್ಪಾದ ರೀತಿಯಲ್ಲಿ ಅದನ್ನು ಕೈಕೊಳ್ಳಬೇಡಿರಿ, ಏಕೆಂದರೆ ಅದು ನಿಮ್ಮನ್ನು ಎಲ್ಲಿಗೂ ಕರೆದೊಯ್ಯಲಾರದು. ಆದರೆ ಒಂದು ವಿಷಯವಿದೆ: ಒಣ ಜಂಬವೆಂದು ಕರೆಯಲಾದ ಕಳೆ(weed)ಯನ್ನು ನಿಮ್ಮಿಂದ ಕಿತ್ತಿ ಎಸೆದು ಬಿಡಲು ನೀವು ಸಮರ್ಥರಾದರೆ, ಆಗ ನೀವು ಏನೋ ಒಂದನ್ನು ಸರಿಯಾಗಿ ಕೈಕೊಂಡಿರುತ್ತೀರಿ. ಆದರೆ ಅದನ್ನು ಕೈಕೊಳ್ಳುವುದು ಅದೆಷ್ಟು ಕಷ್ಟಕರ ಎಂಬುದನ್ನು ನೀವು ತಿಳಿದುಕೊಂಡಿದ್ದರೆ! ಒಣ ಜಂಬವಿರುವ ಸ್ವ–ಸಂತೃಪ್ತಿಯಿಂದ ಅಂತರಂಗದಲ್ಲಿ ಉಬ್ಬಿಕೊಳ್ಳದೆ ಇದ್ದು (ನಿಮಗೆ ಅದರ ಅರಿವಾಗದೆ ಇರಬಹುದು) ನೀವು ಯಾವ ಕಾರ್ಯವನ್ನೂ ಚೆನ್ನಾಗಿ ಮಾಡಲಾರಿರಿ, ಒಳ್ಳೆಯ ವಿಚಾರವನ್ನು ಹೊಂದಲಾರಿರಿ, ಸರಿಯಾದ ಚಲನೆಯನ್ನು ಕೈಕೊಳ್ಳಲಾರಿರಿ, ಚಿಕ್ಕ ಪ್ರಗತಿಯನ್ನೂ ಸಾಧಿಸಲಾರಿರಿ. ಒಣ ಜಂಬವನ್ನು ಮುರಿದು ಹಾಕುವುದಕ್ಕೆ ಅದರ ಮೇಲೆ ಸುತ್ತಿಗೆಯ ಪೆಟ್ಟನ್ನು ಕೊಡುವ ನಿರ್ಬಂಧಕ್ಕೊಳಗಾಗುವಿರಿ. ಆದಾಗ್ಯೂ ಮುರಿದು ಹೋದ ತುಂಡುಗಳು ಉಳಿದುಕೊಂಡಿರುತ್ತವೆ ಮತ್ತು ಅವು ಚಿಗುರಿಕೊಳ್ಳಲು ಪ್ರಾರಂಭಿಸುತ್ತವೆ. ಮನುಷ್ಯ ತನ್ನ ಜೀವನದುದ್ದಕ್ಕೂ ಅದಕ್ಕಾಗಿ ಕಾರ್ಯಮಾಡಬೇಕಾಗುತ್ತದೆ, ಮತ್ತೆ ಮತ್ತೆ ಚಿಗುರಿಕೊಂಡು ಮೇಲೆದ್ದು ಬರುವ ಈ



ಕಳೆಯನ್ನು ಬೇರು ಸಹಿತ ಕಿತ್ತಿ ಹಾಕಬೇಕೆಂಬುದನ್ನು ಎಂದೂ ಮರೆಯಬಾರದು. ಆ ಕಳೆ ಎಷ್ಟೊಂದು ಸತತವಾಗಿ ಬೆಳೆಯುತ್ತದೆಂದರೆ ಅದು ಹೋಗಿಬಿಟ್ಟಿದೆ ಎಂದು ನೀವು ನಂಬುತ್ತೀರಿ ಮತ್ತು ಬಹಳ ವಿನಯಶೀಲರಾಗಿ ಹೇಳುತ್ತೀರಿ: "ಕೈಕೊಂಡವನು ನಾನಲ್ಲ, ಅದನ್ನು ಭಗವಂತನೇ ಕೈಕೊಂಡಿದ್ದಾನೆ ಎಂಬ ಭಾವನೆ ನನಗೆ ಬರುತ್ತಿದೆ, ಅವನಿಲ್ಲದೆ ನಾನೇನೂ ಅಲ್ಲ" ಮತ್ತು ಮುಂದಿನ ಕ್ಷಣದಲ್ಲಿ ಅದನ್ನು ಯೋಚಿಸಿದ್ದಕ್ಕಾಗಿ ನೀವು ನಿಮ್ಮೊಂದಿಗೆ ತೃಪ್ತಿಯಿಂದಿರುತ್ತೀರಿ.

**ಪ್ರಶ್ನೆ :** *ಸರಿಯಾದ ರೀತಿಯಲ್ಲಿ ಹಾಗೂ ತಪ್ಪಾದ ರೀತಿಯಲ್ಲಿ ವಿನಮ್ರರಾಗಿರುವುದೆಂದರೆ ಏನು?*

**ಶ್ರೀಮಾತೆ :** ಅದು ಬಹಳ ಸರಳವಾಗಿದೆ. "ವಿನಮ್ರರಾಗಿರಿ" ಎಂದು ಜನರಿಗೆ ಹೇಳಿದಾಗ ಅವರು ಕೂಡಲೆ "ಇತರ ಮನುಷ್ಯರೆದುರಿಗೆ ವಿನಮ್ರರಾಗಿರುವುದು" ಎಂದು ಯೋಚಿಸುತ್ತಾರೆ, ಮತ್ತು ಆ ವಿನಮ್ರತೆ ತಪ್ಪಾದದ್ದು, ವಿನಮ್ರತೆ ಎಂದರೆ ಭಗವಂತನ ಎದುರಿನಲ್ಲಿ ವಿನಮ್ರರಾಗಿರುವುದಾಗಿದೆ, ಎಂದರೆ ಭಗವಂತನಿಲ್ಲದೆ ಮನುಷ್ಯ ಏನೂ ಅಲ್ಲ, ಅವನೇನನ್ನೂ ಕೈಕೊಳ್ಳಲಾರ, ಏನನ್ನೂ ತಿಳಿದುಕೊಳ್ಳಲಾರ ಎಂಬ ನಿಖರವಾದ, ಕರಾರುವಾಕ್ಕಾದ, ಜೀವಂತವಿರುವ ಅರ್ಥ ಮಾಡಿಕೊಂಡಿರುವುದಾಗಿದೆ. ಮನುಷ್ಯ ಅಸಾಧಾರಣ ಬುದ್ಧಿವಂತನಾದವನು, ಕ್ಷಮತೆಯುಳ್ಳವನು ಆಗಿದ್ದರೂ ಕೂಡ ಅದೆಲ್ಲವನ್ನು ಭಗವಂತನ ಪ್ರಜ್ಞೆಗೆ ಹೋಲಿಸಿದರೆ ಅದೇನೂ ಅಲ್ಲವೇ ಅಲ್ಲ, ಮತ್ತು ಈ ಅರ್ಥವನ್ನು ಅವನು ಯಾವಾಗಲೂ ಕಾಪಾಡಿಕೊಂಡು ಬರಬೇಕು, ಏಕೆಂದರೆ ಆಗ ಮನುಷ್ಯ ಯಾವಾಗಲೂ ಸ್ವೀಕೃತಿಯ ನಿಜವಾದ ಮನೋಭಾವ ಹೊಂದಿರುತ್ತಾನೆ – ಅದು ವಿನಮ್ರತೆ ಇರುವ ಸ್ವೀಕೃತಿ, ಅದು ವೈಯಕ್ತಿಕ ಆಡಂಬರಗಳನ್ನು ಭಗವಂತನ ವಿರುದ್ಧ ಇರಿಸುವುದಿಲ್ಲ.

*

ಬಹಳ ಶ್ರಮವಹಿಸಿ ಪ್ರಗತಿ ಸಾಧಿಸಿದ ನಿಜವಾದ ವಿಜ್ಞಾನಿಯನ್ನು ನೀವು ಭೇಟಿ ಮಾಡಿದಾಗ ಅವನು "ನಮಗೇನೂ ತಿಳಿದಿಲ್ಲ, ಇಂದು ನಮಗೆ ತಿಳಿದುಬಂದದ್ದನ್ನು ನಾಳೆ ನಾವು ತಿಳಿದುಕೊಳ್ಳಬೇಕಾದುದಕ್ಕೆ ಹೋಲಿಸಿದರೆ ಅದೇನೂ ಅಲ್ಲವೇ ಅಲ್ಲ. ಈ ವರ್ಷದ ಸಂಶೋಧನೆಗಳು ಮುಂದಿನ ವರ್ಷ ಆಗಲಿರುವ ಸಂಶೋಧನೆಗಳ ಹಿಂದೆ ಉಳಿದುಬಿಡುತ್ತವೆ" ಎಂದು ಹೇಳುತ್ತಾನೆ. ನಿಜವಾದ ವಿಜ್ಞಾನಿ ತಾನು

ತಿಳಿದುಕೊಂಡಿರುವುದಕ್ಕಿಂತ ಇನ್ನೂ ಹೆಚ್ಚಿನ ರೀತಿಯಲ್ಲಿ ತಿಳಿದುಕೊಂಡಿರದೆ ಇದ್ದ ವಿಷಯಗಳು ಅನೇಕವಾಗಿವೆ ಎಂಬುದನ್ನು ತಿಳಿದುಕೊಂಡಿರುತ್ತಾನೆ. ಮಾನವ ಚಟುವಟಿಕೆಯ ಎಲ್ಲ ಶಾಖೆಗಳಲ್ಲಿ ಇದು ಸತ್ಯ ಸಂಗತಿಯಾಗಿರುತ್ತದೆ. ನಾನು ಭೇಟಿ ಮಾಡಿದ, ವಿಜ್ಞಾನಿ ಎಂಬ ಹೆಸರಿಗೆ ಯೋಗ್ಯನಾದ ಮನುಷ್ಯ ಗರ್ವಿಷ್ಠನಾಗಿರುವುದು ನನಗೆ ಕಂಡುಬರಲಿಲ್ಲ. "ನನಗೆಲ್ಲವೂ ತಿಳಿದಿದೆ" ಎಂದು ಹೇಳಿದ, ವಿಜ್ಞಾನಿ ಹೆಸರಿಗೆ ಯೋಗ್ಯನಾದ, ಮನುಷ್ಯನನ್ನು ನಾನಿನ್ನೂ ಭೇಟಿ ಮಾಡಿಲ್ಲ. ನಾನು ಭೇಟಿ ಮಾಡಿದವರೆಲ್ಲರೂ, ಯಾವಾಗಲೂ, "ಸ್ವಲ್ಪದರಲ್ಲಿ ಹೇಳುವುದಾದರೆ ನನಗೇನೂ ತಿಳಿದಿಲ್ಲ" ಎಂದು ಒಪ್ಪಿಕೊಂಡರು. ಅವನು ಕೈಕೊಂಡ ಎಲ್ಲದರ ಬಗ್ಗೆ, ಸಿದ್ಧಿಸಿಕೊಂಡ ಎಲ್ಲದರ ಬಗ್ಗೆ ಮಾತನಾಡಿದ ನಂತರ, ಶಾಂತ ರೀತಿಯಲ್ಲಿ "ಒಟ್ಟಿನಲ್ಲಿ ನನಗೇನೂ ತಿಳಿಯದು" ಎಂದು ನಿಮಗೆ ಹೇಳುತ್ತಾನೆ.

**ಪ್ರಶ್ನೆ :** *ಕೆಲವೊಂದು ಸಮಯದಲ್ಲಿ, ವಿನಯಶೀಲರೆಂದು ತೋರಿಸಿಕೊಳ್ಳುವುದಕ್ಕಾಗಿ ತಮಗೇನೂ ತಿಳಿದಿಲ್ಲ ಎಂದು ಹೇಳುವ ಜನರಿದ್ದಾರೆ, ಆದರೆ ಅವರು ಹೇಳುವುದರಲ್ಲಿ ಅವರಿಗೆ ನಂಬಿಕೆ ಇರುವುದಿಲ್ಲ.*

**ಶ್ರೀಮಾತೆ :** ಜಗತ್ತಿನ ಎಲ್ಲೆಡೆಯಲ್ಲಿ ಕಪಟಿಗಳಾದ, ಆಷಾಢಭೂತಿತನದ ಜನರಿರುತ್ತಾರೆ. ಅಷ್ಟರಮಟ್ಟಿಗೆ ಅದು ಅವರಿಗೆ ಅತಿ ಕೆಟ್ಟದಾದದ್ದು. ಅವರು ಎಲ್ಲ ಪ್ರಗತಿಗೆ ದ್ವಾರವನ್ನು ಮುಚ್ಚಿಡುತ್ತಾರೆ, ಅಷ್ಟೆ.

**(5/45–46, 30–31)** **– ಶ್ರೀಮಾತೆ**

*

ಪ್ರಜ್ಞಾರಹಿತನಾಗಿದ್ದಾಗ ಮಾತ್ರ ನೀನು ಉಚ್ಚನಾದವನೆಂದು ಯೋಚನೆ ಮಾಡುವಿ.

**(7/393)** **– ಶ್ರೀಮಾತೆ**

*

## ಸ್ವಾರ್ಥರಹಿತ ಪ್ರಶಂಸೆ – ನಿಜವಾದ ವಿನಮ್ರತೆಯ ಒಂದು ಅಂಶ

ಭಗವಂತನನ್ನು ಅಭಿವ್ಯಕ್ತಗೊಳಿಸುವ ಏನನ್ನಾದರೂ ಗುರುತಿಸಲು ಜನರು ಎಷ್ಟೊಂದು ಅನಾಸಕ್ತರಾಗಿರುತ್ತಾರೆಂದರೆ ಅವರು ಅದರಲ್ಲಿ ದೋಷವನ್ನು



ಹುಡುಕಲು, ತೋರಿಕೆಯ ಕೊರತೆಗಳನ್ನು ಶೋಧಿಸಲು ಮತ್ತು ಹಾಗಾಗಿ ಉಚ್ಚವಾದವುಗಳನ್ನು ತಮ್ಮ ಮಟ್ಟಕ್ಕಿಳಿಸಲು ಜಾಗರೂಕರಾಗಿರುತ್ತಾರೆ. ತಮ್ಮನ್ನು ಅತಿಶಯಿಸಿ ಹೋಗುವುದನ್ನು ಕುರಿತು ಕ್ರೋಧೋದ್ರಿಕ್ತರಾಗಿರುತ್ತಾರೆ ಮತ್ತು ಮೇಲ್ಮೈಯಲ್ಲಿ ಕಂಡುಬರುವ ಕೊರತೆಗಳನ್ನು ಕಂಡುಹಿಡಿಯಲು ಶಕ್ತರಾದಾಗ ಅವರಿಗೆ ಬಹಳ ಸಂತೋಷವಾಗುತ್ತದೆ. ಆದರೆ ಭಗವಂತನ ಸಾನ್ನಿಧ್ಯ ಪೃಥ್ವಿಯ ಮೇಲಿದ್ದಾಗ ಅದನ್ನು ತಮ್ಮ ಒರಟಾದ ಭೌತಿಕ ಮನಸ್ಸಿನಿಂದ ಎದುರಿಸಿದ ಜನರು ಕೇವಲ ಒರಟಾದುದನ್ನು ಭೇಟಿ ಮಾಡುತ್ತಾರೆ ಎಂಬುದನ್ನು ಮರೆಯುತ್ತಾರೆ. ನೋಡಲು ತಮ್ಮಲ್ಲಿ ಕ್ಷಮತೆಯಿಲ್ಲದ್ದನ್ನು ಇಲ್ಲವೆ ನೋಡಲು ಇಷ್ಟಪಡದ್ದನ್ನು ಅವರು ನೋಡುವ ಭರವಸೆ ಹೊಂದಿರಲಾರರು. ಅವರು ಭಗವಂತನ ಕ್ರಿಯೆಗಳ ಮೇಲ್ಮೈ ಮುಖವನ್ನಷ್ಟೆ ಪರಿಗಣಿಸಿದರೆ ಅವನನ್ನು ತಪ್ಪು ತೀರ್ಮಾನಕ್ಕೊಳಪಡಿಸುವುದು ನಿಶ್ಚಿತ, ಏಕೆಂದರೆ ಯಾವುದು ಮಾನವ ಚಟುವಟಿಕೆಗೆ ಸಮಾನವಾಗಿದೆ ಎಂದು ಅವರು ತಿಳಿದುಕೊಳ್ಳುತ್ತಾರೋ ಅದು ಬೇರೆಯಾಗಿರುತ್ತದೆ, ಮಾನವರದಲ್ಲದ ಮೂಲದಿಂದ ಹೊರಹೊಮ್ಮಿ ಹೋಗುತ್ತದೆ.

ಪೃಥ್ವಿಯ ಮೇಲಿನ ಕಾರ್ಯಕ್ಕಾಗಿ ತನ್ನನ್ನು ಪ್ರಕಟಪಡಿಸುವ ಭಗವಂತ ಜನರು ಕೈಕೊಳ್ಳುವ ರೀತಿಯಲ್ಲಿ ಅದನ್ನು ಕೈಕೊಳ್ಳುತ್ತಿರುವಂತೆ ತೋರಿಬರುತ್ತದೆ, ಆದರೆ ನಿಜವಾಗಿ ಅದು ಹಾಗಿರುವುದಿಲ್ಲ. ಅಂತಹ ಸ್ಪಷ್ಟ ಹಾಗೂ ತೋರಿಕೆಯ ಮಾನದಂಡಗಳಿಂದ ಆ ರೀತಿ ಅದನ್ನು ಮೌಲ್ಯಮಾಪನಕ್ಕೆ ಒಳಪಡಿಸುವುದು ಸಾಧ್ಯವಿಲ್ಲ. ಆದರೆ ಜನರು ತಮ್ಮದೇ ನಿಕೃಷ್ಟತೆ (ಕೀಳಾಗಿರುವಿಕೆ) ಕುರಿತು ಒಲವುಳ್ಳವರಾಗಿರುತ್ತಾರೆ, ತಮ್ಮನ್ನು ಉಚ್ಚತರ ನೈಜತೆಗೆ ಅಧೀನಗೊಳಿಸುವುದನ್ನಾಗಲಿ, ಅದನ್ನು ಒಪ್ಪಿಕೊಳ್ಳುವುದನ್ನಾಗಲಿ ಅವರು ಸಹಿಸುವುದಿಲ್ಲ. ಮನುಷ್ಯನಲ್ಲಿರುವ ಏನೋ ಒಂದು ಉಚ್ಚತರ ನೈಜತೆ ಇದೆ ಎಂದು ಹೇಳಿದಾಗ ಅದರಲ್ಲಿ ದೋಷವನ್ನು ಕಂಡುಹಿಡಿಯುವ ಈ ಆಸೆ, ಅದನ್ನು ಟೀಕೆ ಮಾಡುವ, ಸಂಶಯಪಡುವ ಮತ್ಸರದಿಂದ ಕೂಡಿದ ಈ ಭಾವೋದ್ರೇಕ ಇದೆಲ್ಲ ಮಾನವತೆಗೆ ವಿಶಿಷ್ಟವಾಗಿರುವ ಮುದ್ರೆಯಾಗಿದೆ – ಅದು ಕೇವಲ ಮಾನವನನ್ನು ಗುರುತಿಸುತ್ತದೆ. ಇನ್ನೊಂದೆಡೆಗೆ ಎಲ್ಲೆಲ್ಲಿ ನಿಜವಾದುದಕ್ಕೆ, ಸುಂದರವಾದುದಕ್ಕೆ, ಉದಾರವಾದುದಕ್ಕೆ ಸ್ವಯಂಪ್ರೇರಿತ ಪ್ರಶಂಸೆ ಇರುತ್ತದೆಯೋ ಅಲ್ಲಿ ದೈವಿಕವಾದ ಏನೋ ಒಂದು ಅಭಿವ್ಯಕ್ತವಾಗಿರುತ್ತದೆ. ದೈವೀ ಮೂಲದ್ದೆಂದು ನೀವು ಭಾವನೆ ತಂದುಕೊಂಡಿದುದಕ್ಕೆ ನಿಮ್ಮ ಹೃದಯ ಪೂಜಿಸಲು ಹಾಗೂ ಪ್ರಶಂಸಿಸಲು

ಜಿಗಿದೆದ್ದು ಬಂದಾಗ, ನಿಮ್ಮ ಚೈತ್ಯ ಸತ್ತೆ, ನಿಮ್ಮೊಳಗಿರುವ ಆತ್ಮ ಇವುಗಳ ಮೂಲಕ ಅದರೊಡನೆ ಭೌತಿಕ ಸಂಪರ್ಕದಲ್ಲಿ ಬಂದದ್ದು ನಿಶ್ಚಿತ ಎಂದು ನೀವು ತಿಳಿದುಕೊಳ್ಳಬೇಕು.

ನಿಮ್ಮ ಎದುರಿಗೆ ಬಂದದ್ದು ಇಂತಹದೆಂದು ನಿಮಗೆ ಭಾವನೆ ಬಂದ ಕ್ಷಣದಲ್ಲಿ ನೀವು ಸಂತೋಷದಿಂದ ಕಣ್ಣೀರು ಸುರಿಸುವಂತಾಗಬೇಕು. ಕೀಳಾದ ಜೀವಿಯು: "ಹೌದು, ಅದು ಶ್ರೇಷ್ಠವಾದ ಏನೋ ಒಂದು, ಅದು ನನ್ನ ಪಾಲಿಗೆ ಬಂದರೆ ಅದನ್ನು ಪ್ರಶಂಸಿಸಬಹುದು. ಈ ಗುಣಮಟ್ಟದ್ದನ್ನು ನಾನು ವಶದಲ್ಲಿಟ್ಟು-ಕೊಳ್ಳಬಲ್ಲೆನಾದರೆ, ಈ ಅಸಾಧಾರಣ ಪ್ರಕಟಣೆಯ ಉಪಕರಣವಾಗಬಲ್ಲೆನಾದರೆ ಸಂತೋಷಪಡುವೆ" ಎಂದು ಹೇಳುತ್ತಾನೆ. ಭಗವಂತ ತನಗೆ ಬೇಕಾದಲ್ಲಿ, ಬೇಕಾದ ರೀತಿಯನ್ನು ಆಯ್ದುಕೊಂಡು ತನ್ನನ್ನು ತೆರೆದುತೋರಿಸುವುದು ಮುಖ್ಯ ವಿಷಯವಾಗಿರುವಾಗ ನೀವು ಅಹಂಕಾರ ಕುರಿತು ತಲೆಕೆಡಿಸಿಕೊಳ್ಳುವುದೇಕೆ? ಅವನು ಆ ರೀತಿ ಅಭಿವ್ಯಕ್ತನಾದಾಗ ನೀವು ನೆರವೇರಿಕೆ ಕಂಡುಕೊಂಡ ಭಾವನೆ ತಂದುಕೊಳ್ಳಬೇಕು, ನಿಮ್ಮ ಸಂಕುಚಿತ, ದುಃಖದಾಯಕ ವ್ಯಕ್ತಿವಿಶಿಷ್ಟತೆಯ ಬಂಧನಗಳನ್ನು ತೊಡೆದುಹಾಕಲು ಮತ್ತು ಸ್ವಾರ್ಥರಹಿತ ಆನಂದದಿಂದ ಮೇಲಕ್ಕೇರಿ ಹೋಗಲು ಶಕ್ತರಾಗಬೇಕು. ನಿಮ್ಮ ಆತ್ಮ ಎಚ್ಚತ್ತುಕೊಂಡಿದೆ, ಸತ್ಯದ ಭಾವನೆ ತೆಗೆದುಕೊಂಡಿದೆ ಎಂಬುದಕ್ಕೆ ಈ ಸಂತೋಷ ನಿಜವಾದ ಕುರುಹು. ಆಗ ಮಾತ್ರ ಅವರೋಹಣ ಮಾಡಿ ಬರುತ್ತಿರುವ ಸತ್ಯಕ್ಕೆ ನಿಮ್ಮನ್ನು ತೆರೆದಿರಿಸಿಕೊಳ್ಳಬಲ್ಲಿರಿ ಮತ್ತು ಅದರಿಂದ ಆಕಾರ ಪಡೆಯಬಲ್ಲಿರಿ. ಮಕ್ಕಳು ಹಾಗೂ ಶಿಶುಗಳು ದೈವಿಕವಾಗಿ ಸುಂದರವಾಗಿರುವ ಹಾಗೂ ಸರಳವಾಗಿರುವ ಏನೋ ಒಂದನ್ನು ಕೈಕೊಳ್ಳುತ್ತಿರುವುದನ್ನು ಕಂಡು ನನ್ನ ಕಣ್ಣಲ್ಲಿ ನೀರು ಸುರಿದ ಕ್ಷಣಗಳು ನನ್ನ ನೆನಪಿಗೆ ಬರುತ್ತವೆ. ಆ ಸಂತೋಷದ ಭಾವನೆ ತಂದುಕೊಳ್ಳಿರಿ, ನಿಮ್ಮ ಮಧ್ಯದಲ್ಲಿರುವ ದೈವೀ ಸಾನ್ನಿಧ್ಯದಿಂದ ಲಾಭ ಪಡೆಯಲು ಶಕ್ತರಾಗುವಿರಿ.

*

ನಿಮ್ಮ ಸಿದ್ಧಿಯೇನೇ ಆಗಿರಲಿ, ಅನಂತವನ್ನು ತಲುಪಲು ನೀವು ಇನ್ನೂ ಮುಂದೆ ಸಾಗಬೇಕಾಗುತ್ತದೆ ಎಂದು ತಿಳಿದುಕೊಳ್ಳುವ ಪ್ರಜ್ಞೆ ವಿನಮ್ರತೆಯದಾಗಿರುತ್ತದೆ. ವಿರಳವಾಗಿ ಕಂಡುಬರುವ, ನಾನೀಗಾಗಲೆ ಹೇಳಿದ ಸ್ವಾರ್ಥರಹಿತ ಪ್ರಶಂಸೆಯಿರುವ ಗುಣ ನಿಜವಾದ ವಿನಮ್ರತೆಯ ಇನ್ನೊಂದು ಮುಖವಾಗಿರುತ್ತದೆ, ಏಕೆಂದರೆ ಪ್ರಶಂಸಿಸದೆ ಇರುವುದು ಮತ್ತು ತನ್ನದೇ ಚಿಕ್ಕಪುಟ್ಟ



ಸಿದ್ಧಿಗಳೊಂದಿಗೆ ಸ್ವ-ಸಂತೃಪ್ತಿಯಿಂದಿರುವುದು, ತನ್ನಿಂದ ಯಾವಾಗಲೂ ಇನ್ನೂ ದೂರದಲ್ಲಿರುವ ಅನಂತವನ್ನು ಮರೆತು ಬಿಟ್ಟಿರುವುದು ಕೇವಲ ದುರಹಂಕಾರ. ನಿಮ್ಮಲ್ಲಿ ಸತ್ಯವುಳ್ಳದ್ದು ಇಲ್ಲವೆ ದೈವಿಕವಾದದ್ದು ಏನೋ ಇರದೆ ಇದ್ದಾಗ ನೀವು ವಿನಮ್ರರಾಗಿರಬೇಕಷ್ಟೆ ಅಲ್ಲ, ಆದರೆ ಪರಿವರ್ತನೆಯ ಮಾರ್ಗದಲ್ಲಿದ್ದಾಗಲೂ ಕೂಡ ವಿನಮ್ರರಾಗಿರಬೇಕು.

**(3/158–59, 175)** **– ಶ್ರೀಮಾತೆ**

*

## ವಿನಮ್ರತೆ – ಎಲ್ಲ ಸಿದ್ಧಿಗಳಿಗಾಗಿ ಇರುವ ನಿಬಂಧನೆ

ಎಲ್ಲ ಸಿದ್ಧಿಗಾಗಿ ವಿನಮ್ರತೆ, ಅದರಲ್ಲಿಯೂ ವಿಶೇಷವಾಗಿ ಪರಿಪೂರ್ಣ ವಿನಮ್ರತೆ ಇರಬೇಕೆಂಬ ನಿಬಂಧನೆ ಇದೆ. ಮನಸ್ಸು ಅತಿಯಾಗಿ ಪೂರ್ಣ ಭರವಸೆಯಿಂದಿರುತ್ತದೆ, ತನಗೆ ಪ್ರತಿಯೊಂದೂ ತಿಳಿದಿದೆ, ತಾನು ಪ್ರತಿಯೊಂದನ್ನು ಅರ್ಥ ಮಾಡಿಕೊಳ್ಳಬಲ್ಲೆ ಎಂದು ಯೋಚಿಸುತ್ತದೆ. ತನಗೆ ಉದಾರವಾದದ್ದೆಂದು ಕಂಡುಬರುವ ನಿಮಿತ್ತ(cause)ಕ್ಕೆ ಸೇವೆ ಸಲ್ಲಿಸುವ ಆದರ್ಶವನ್ನಿಟ್ಟುಕೊಂಡು ಅದು ಕಾರ್ಯ ಕೈಕೊಂಡಾಗ್ಯೂ ಅದು ಇನ್ನೂ ಹೆಚ್ಚು ದುರಹಂಕಾರದ್ದು ಮತ್ತು ಛಲವಾದಿ ಆಗುತ್ತದೆ. ಅದರ ಉದಾರ ಕಲ್ಪನೆಗಳಾಚೆಗೆ ಮತ್ತು ಅದರ ಪರೋಪಕಾರ ಬುದ್ಧಿ ಇಲ್ಲವೆ ಇತರ ಆದರ್ಶಗಳು ಇವುಗಳಾಚೆಗೆ ಇನ್ನೂ ಉಚ್ಚತರವಾದದ್ದು ಏನೋ ಒಂದು ಇದೆಯೆಂದು ಅದಕ್ಕೆ ಕಂಡುಬರುವಂತೆ ಮಾಡುವುದು ಬಹುಮಟ್ಟಿಗೆ ಅಸಾಧ್ಯವಾದದ್ದು. ವಿನಮ್ರತೆಯೊಂದೇ ಉಪಾಯ. ಕೆಲವು ಧರ್ಮಗಳು ಕಲ್ಪಿಸಿಕೊಂಡ ರೀತಿಯ ವಿನಮ್ರತೆಯನ್ನು ಕುರಿತು ನಾನು ಹೇಳುತ್ತಿಲ್ಲ, ಅವುಗಳ ದೇವ ತಾನು ಸೃಷ್ಟಿಸಿದ ಜೀವಿಗಳನ್ನು ಕನಿಷ್ಠವಾದವುಗಳೆಂದು ನೋಡುತ್ತಾನೆ, ಆ ಜೀವಿಗಳು ಯಾವಾಗಲೂ ಮೊಳಕಾಲೂರಿ ಅವನಿಗೆ ನಮಿಸುತ್ತಿರಬೇಕೆಂದು ಬಯಸುತ್ತಾನೆ. ಚಿಕ್ಕವಳಾಗಿದ್ದಾಗ ಈ ಬಗೆಯ ವಿನಮ್ರತೆಯನ್ನು ಕಂಡು ನಾನು ಬಂಡಾಯವೇಳುವಂತಾಯಿತು. ಮತ್ತು ತಾನು ಸೃಷ್ಟಿಸಿದ ಜೀವಿಗಳನ್ನು ಕನಿಷ್ಠವಾಗಿ ನೋಡುವ ಇಂತಹ ದೇವನನ್ನು ನಂಬುವುದನ್ನು ನಾನು ತಿರಸ್ಕರಿಸುತ್ತೇನೆ. ನಾನು ಹೇಳಿದ ವಿನಮ್ರತೆ ಆ ಬಗೆಯದಲ್ಲ, ಆದರೆ ಅದಕ್ಕೂ ಹೆಚ್ಚಾಗಿ ಮನುಷ್ಯ ತಾನೇನು ಅರಿತಿಲ್ಲವೆಂಬುದನ್ನು, ಸದ್ಯ ನಮಗೆ ಅತ್ಯಂತ ಸತ್ಯವೆಂದು, ಉದಾರವಾದದ್ದೆಂದು, ಅನಾಸಕ್ತವಾದದ್ದೆಂದು

ತೋರಿಬರುವುದರಾಚೆಗೆ ಏನೋ ಒಂದಿದೆ ಎಂಬುದನ್ನು ಗುರುತಿಸುವುದಾಗಿದೆ, ನಿಜವಾದ ವಿನಮ್ರತೆ ಮನುಷ್ಯ ತನ್ನನ್ನು ಪ್ರಭುವಿಗೆ ವಹಿಸಿಕೊಡುವುದನ್ನು ಒಳಗೊಂಡಿದೆ, ಎಲ್ಲವನ್ನೂ ಅವನೆದುರಿಗೆ ಇರಿಸುವುದಾಗಿದೆ. ನಾನೊಂದು ಹೊಡೆತವನ್ನು ಸ್ವೀಕರಿಸಿದಾಗ (ನನ್ನ ಸಾಧನೆಯಲ್ಲಿ ಹಲವಾರು ಹೊಡೆತಗಳಿರುತ್ತವೆ) ಪುಟಿದೇಳುವ ರೀತಿಯಲ್ಲಿ ಕೂಡಲೇ ತೋರಿಸಬೇಕಾದ ಸ್ವಯಂಪ್ರೇರಿತ ಪ್ರತಿಕ್ರಿಯೆ ಎಂದರೆ ನಾನು ಪ್ರಭುವಿನ ಎದುರು ಅಡ್ಡಬಿದ್ದು "ಪ್ರಭು ನೀನು" ಎಂದು ಹೇಳುವುದಾಗಿದೆ. ಹೇಳಿದ್ದು ಅರ್ಥವಾಗಲಿ ಎಂದು ಅದರೊಂದಿಗೆ 'ನಾನು' ಎಂಬುದನ್ನು ಜೋಡಿಸಬೇಕಾಗುತ್ತದೆ, ಆದರೆ ವಾಸ್ತವದಲ್ಲಿ 'ನಾನು' ಎಂಬುದರ ಅರ್ಥ ಉಪಕರಣ ರೂಪದ ಮೂಲಕ ಹೇಳುವ ಪ್ರಭು ಎಂದಿರುತ್ತದೆ. ನೀವು ಈ ಬಗೆಯ ವಿನಮ್ರತೆಯನ್ನು ಜೀವಿಸಲು ಪ್ರಾರಂಭಿಸಿದಾಗ, ಸಿದ್ಧಿಗೆ ಹತ್ತಿರವಾಗುವಿರಿ ಎಂದು ಅದರ ಅರ್ಥವಾಗಿರುತ್ತದೆ. ಅದು ನಿಬಂಧನೆ, ಪ್ರಾರಂಭ ಬಿಂದು.

**(Dec. 1957)**

ಒಂದು ಮೂಲಭೂತ ಆವಶ್ಯಕತೆ ಏನಾದರೂ ಇದ್ದರೆ ಅದು ವಿನಮ್ರತೆ, ವಿನಮ್ರರಾಗಿರುವುದು. ಸಾಮಾನ್ಯ ರೀತಿಯಲ್ಲಿ ಅರ್ಥಮಾಡಿಕೊಂಡು ಹೇಳುವಂತೆ "ನಾನು ಎಷ್ಟೊಂದು ಅಲ್ಪನಾಗಿದ್ದೇನೆ, ನಾನು ಏನೂ ಅಲ್ಲ" ಎಂದು ಹೇಳುವುದಲ್ಲ – ಅದಲ್ಲ ಅದು ಇನ್ನೂ ಬೇರೆ ಏನೋ ಒಂದು.

ಹಳ್ಳಗುಂಡಿಗಳು ಅನೇಕವಾಗಿರುವುದರಿಂದ, ಯೋಗದಲ್ಲಿ ನಾವು ಮುಂದುವರಿಯುತ್ತಿದ್ದ ಹಾಗೆ ಅವು ಹೆಚ್ಚು ಸೂಕ್ಷ್ಮವಾಗುತ್ತ ಹೋಗುತ್ತವೆ ಮತ್ತು ಅದ್ಭುತ ಹಾಗೂ ಸಾಧುತ್ವದ ತೋರಿಕೆಗಳ ಹಿಂದೆ ಅಹಂಕಾರ ತನ್ನನ್ನು ಹೆಚ್ಚಿನ ರೀತಿಯಲ್ಲಿ ಮುಸುಕಿನಲ್ಲಿರಿಸುತ್ತದೆ. ಹಾಗಾಗಿ ಯಾರಾದರೂ "ನಾನು ಭಗವಂತನನ್ನಲ್ಲದೆ ಬೇರೆ ಯಾರನ್ನೂ ನೆಚ್ಚಿಕೊಳ್ಳುವುದಿಲ್ಲ, ಕಣ್ಣುಮುಚ್ಚಿಕೊಂಡು ಅವನಲ್ಲಿ ಮಾತ್ರ ವಿಶ್ರಾಂತಿ ಪಡೆಯಲು ಬಯಸುತ್ತೇನೆ ಎಂದು ಹೇಳಿದಾಗ, ನೀವು ಬಯಸಿದ ಹಾಗೆ ಇರಬೇಕಾದ, ಸೌಖ್ಯದಾಯಕ ಈ "ದೈವೀ ಅವನು" ಅಹಂಕಾರವಾಗಿರುತ್ತದೆ ಇಲ್ಲವೆ ಭಯಾನಕ ಅಸುರ ಅಥವಾ ರಾಕ್ಷಸನಾಗಿರುತ್ತಾನೆ. (ಅದು ಪ್ರತಿಯೊಬ್ಬನ ಕ್ಷಮತೆಯ ಮೇಲೆ ಅವಲಂಬಿಸಿರುತ್ತದೆ.) ಅವರೆಲ್ಲರೂ ಪೃಥ್ವಿಯ ಮೇಲಿದ್ದಾರೆ, ಪೃಥ್ವಿ ಅವರ ರಾಜ್ಯವಾಗಿದೆ. ಹಾಗಾಗಿ ಮೊದಲು ಕೈಕೊಳ್ಳಬೇಕಾದುದೆಂದರೆ ಅಹಂಕಾರವನ್ನು ಜೇಬಿಗೆ ಸೇರಿಸುವುದಾಗಿದೆ – ಅದನ್ನು



ಸಾಧ್ಯವಿದ್ದಷ್ಟು ಬೇಗನೇ ತೊಡೆದು ಹಾಕುವುದಕ್ಕಾಗಿ, ರಕ್ಷಿಸುವುದಕ್ಕಾಗಿ ಅಲ್ಲ!

ನಿಮ್ಮಲ್ಲಿರುವ ಏನೋ ಒಂದು: "ನನ್ನ ಭಾವನೆಗೆ ಬರುತ್ತಿರುವುದು ಇದು, ನಾನು ಯೋಚಿಸುತ್ತಿರುವುದು ಇದು, ಕಾಣುತ್ತಿರುವುದು ಇದು, ಅದು ನನ್ನ ರೀತಿ, ಕೇವಲ ನನ್ನದೇ ಆದದ್ದು – ಅದು ನಾನಿರುವ ರೀತಿ, ಅರಿತುಕೊಳ್ಳುವ ರೀತಿ, ಭಗವಂತನೊಡನೆ ಹೊಂದಿರುವ ರೀತಿ" ಎಂದೆಲ್ಲ ಒತ್ತಾಯ ತಂದಾಗ ನೀವು ಸೃಷ್ಟಿಸಿದ ದೇವ ಅಹಂಕಾರದ ದೇವನಾಗಿರುತ್ತಾನೆಂಬುದು ನಿಶ್ಚಿತ.

ಮತ್ತು ನಂತರ ಅವರು "ಕಣ್ಣು ಮುಚ್ಚಿಕೊಂಡು ನಾನು ಕೇವಲ ಭಗವಂತನನ್ನು ನೋಡಲು ಬಯಸುತ್ತೇನೆ, ಬಾಹ್ಯ ಜಗತ್ತಿನದೇನೂ ನನಗೆ ಬೇಕಾಗಿಲ್ಲ" ಎಂದು ಹೇಳುತ್ತಾರೆ. ದೈವೀ ಪ್ರೇಮವನ್ನು ಅವರು ಮರೆತು ಬಿಟ್ಟಿರುತ್ತಾರೆ. ಅದು ಶ್ರೇಷ್ಠ ರಹಸ್ಯ. ಅದು ಅಸ್ತಿತ್ವದಲ್ಲಿ ಇರುವುದರ ಹಿಂದೆ, ಇಲ್ಲದೆ ಇರುವುದರ ಹಿಂದೆ ಇದೆ, ವೈಯಕ್ತಿಕ ಹಾಗೆಯೇ ಅವೈಯಕ್ತಿಕವಾದುದರಲ್ಲಿಯೂ ಇದೆ – ಅದು ದೈವೀ ಪ್ರೇಮ. ಎರಡು ವಸ್ತು–ವಿಷಯಗಳ ನಡುವಿನ ಇಲ್ಲವೆ ಎರಡು ಸತ್ತೆಗಳ ನಡುವಿನ ಪ್ರೇಮ ಅದಲ್ಲ, ಎಲ್ಲವನ್ನೂ ಒಳಗೊಂಡಿರುವ ಪ್ರೇಮ.

ಈ ಶತಮಾನ(20 ನೆಯ ಶತಮಾನ)ದ ಮೊದಲ ದಿನಗಳಲ್ಲಿ ನಾನು "ಪ್ರಾರ್ಥನೆಗಳು ಹಾಗೂ ಧ್ಯಾನಗಳು" ಇವುಗಳನ್ನು ಕುರಿತು ಬರೆದಿದ್ದೆ. ಅವುಗಳಲ್ಲಿ ನಾನೂ ಕೂಡ ಭಗವಂತನನ್ನು ಕುರಿತು ಹೇಳಿದ್ದೆ. ಆದರೆ ಅದನ್ನು ನನ್ನ ಎಲ್ಲ ಅಭೀಪ್ಸೆಯಿಂದ ಮತ್ತು ನಿಷ್ಕಾಪಟ್ಯದಿಂದ (ಕನಿಷ್ಠ ಪಕ್ಷ ನನ್ನ ಸತ್ತೆಯ ಪ್ರಜ್ಞಾಪೂರ್ಣ ಭಾಗಗಳ ಎಲ್ಲ ನಿಷ್ಕಾಪಟ್ಯದಿಂದ) ಬರೆದಿದ್ದೆ ಮತ್ತು ಅದನ್ನು ಮೇಜಿನ ಡ್ರಾ ಅರನಲ್ಲಿಟ್ಟು ಅದಕ್ಕೆ ಕೀಲಿ ಹಾಕಿದ್ದೆ, ಅದರಿಂದಾಗಿ ಅದನ್ನು ಬೇರೆ ಯಾರೂ ನೋಡಲು ಸಾಧ್ಯವಾಗುವಂತಿರಲಿಲ್ಲ. ನಂತರದ ದಿನಗಳಲ್ಲಿ ಶ್ರೀ ಅರವಿಂದರು ಅದನ್ನು ಪ್ರಕಟಿಸೆಂದು ಹೇಳಿದರು, ಏಕೆಂದರೆ ಅದು ಉಪಯುಕ್ತವಾಗಬಹುದಾಗಿತ್ತು. ನನಗೆ ಈಗ ತಿಳಿದದ್ದು ಐವತ್ತು ವರ್ಷಗಳ ಹಿಂದೆ ತಿಳಿದಿದ್ದರೆ ನಾನು ಚೂರುಚೂರಾಗಿ ಹೋಗುತ್ತಿದ್ದೆ!

ಒಟ್ಟಿನಲ್ಲಿ ಕ್ರಮೇಣ ತಿಳಿದುಕೊಳ್ಳುವುದು ಒಳ್ಳೆಯದು, ಕೆಲವೊಂದು ಭ್ರಮೆಗಳನ್ನು ಹೊಂದಿರುವುದು ಒಳ್ಳೆಯದು – ಭ್ರಮೆಗಳ ಸಲುವಾಗಿಯೇ ಎಂದಲ್ಲ, ಆದರೆ ಮಾರ್ಗದಲ್ಲಿ ಅವು ಅವಶ್ಯವಾಗಿರುವುದರ ಕಾರಣದಿಂದಾಗಿ.

ಪ್ರತಿಯೊಂದೂ ಸರಿಯಾದ ಸಮಯದಲ್ಲಿ ಬರುತ್ತದೆ.

ಅಹಂಕಾರ, ಲಜ್ಜೆ, ಅಲ್ಪತನ ಇವೆಲ್ಲವುಗಳಿದ್ದಾಗ್ಯೂ ಇವುಗಳ ಮಧ್ಯೆ ಪ್ರತಿಯೊಂದು ಕ್ಷಣ ದೈವಾನುಗ್ರಹ, ದೈವೀ ಸಂತೋಷ, ದೈವೀ ಪ್ರಕಾಶ, ದೈವೀ ಪ್ರೇಮ ಸುರಿದು ಬರುವುದು ನಿಂತು ಹೋಗುವುದಿಲ್ಲ. ಇದೆಲ್ಲ ಅದ್ಭುತವಾದ ವಿಷಯ. ವಿನಮ್ರವಾಗಿರುವುದು, ....

**ಮೇ 16, 1960** – ಶ್ರೀಮಾತೆ

ಸತ್ಪ್ರೇಮನೊಂದಿಗೆ ಶ್ರೀಮಾತೆಯವರ ಮಾತುಕತೆಗಳು: Mother India - August 2012

*

## ದೇವ (ಕವಿತೆ)

ಕೆಳಗಿರುವ ಎಲ್ಲ ಲೋಕಗಳನು ವ್ಯಾಪಿಸಿರುವ ನೀನು
ಮೇಲ್ಗಡೆಯಲ್ಲೂ ಕುಳಿತಿರುವಿ
ಕಾರ್ಯವೆಸಗುವ, ಆಳುವ, ಅರಿತುಕೊಳ್ಳುವ ಎಲ್ಲರ ಪ್ರಭುವಾದ ನೀನು
ದೈವೀ ಪ್ರೇಮದ ಆಳಾಗಿರುವಿ

ಕ್ರಿಮಿ ಹಾಗೆಯೇ ಮಂಕ ಅಸ್ತಿತ್ವದಲ್ಲಿರುವುದನು
ಅಸಡ್ಡೆ ಮಾಡದಿರುವಿ ನೀನು
ಆ ವಿನಮ್ರತೆಯಿಂದಾಗಿಯೇ ದೇವನಾಗಿರುವಿ
ಎಂದು ತಿಳಿದಿರುವೆವು ನಾವು.

**(CWSA 2: 218)** **– ಶ್ರೀ ಅರವಿಂದರು**

*

## ವಿನಮ್ರತೆಯನ್ನು ಕುರಿತು ಶ್ರೀ ಅರವಿಂದರು

ಭಗವಂತನ ಮುಂದೆ ವಿನಮ್ರರಾಗಿರುವುದು ಆಧ್ಯಾತ್ಮಿಕ ಜೀವನಕ್ಕೆ ಅತ್ಯಗತ್ಯವಾದ ಒಂದು ನಿಬಂಧನೆ. ದುರಹಂಕಾರ ಇಲ್ಲವೆ ಜಂಬ ಮತ್ತು ಸ್ವ–ದೃಢೀಕರಣ ಇವು ಮನುಷ್ಯ ಕೆಳಸ್ತರಕ್ಕೆ ಇಳಿದು ಹೊಗುವಂತೆ ಒತ್ತಾಯ ತರುತ್ತವೆ. ಆದರೆ ಭಗವಂತನಲ್ಲಿ ಗಾಢ ವಿಶ್ವಾಸ ಮತ್ತು ತನ್ನ ಆಧ್ಯಾತ್ಮಿಕ ಅದೃಷ್ಟದಲ್ಲಿ ಮನುಷ್ಯ ನಂಬಿಕೆಯನ್ನಿಟ್ಟುಕೊಂಡಿರುವುದು (ಎಂದರೆ ನನ್ನ ಹೃದಯ ಹಾಗೂ



ಆತ್ಮ ಭಗವಂತನನ್ನು ಅರಸುತ್ತವೆ, ಹಾಗಾಗಿ ಒಂದಿಲ್ಲೊಂದು ದಿನ ಅವನನ್ನು ಕಾಣುವುದರಲ್ಲಿ ಸಫಲನಾಗುತ್ತೇನೆ ಎಂಬ ನಂಬಿಕೆಯಿರುವುದು) ಇವು, ಮಾರ್ಗದಲ್ಲಿರುವ, ತೊಂದರೆಗಳನ್ನು ಲಕ್ಷ್ಯದಲ್ಲಿರಿಸಿಕೊಂಡಾಗ, ಬಹಳ ಅವಶ್ಯವಾಗಿವೆ. ವಿಶೇಷವಾಗಿ ಭಗವಂತ ಎಲ್ಲದರಲ್ಲಿ ಇರುವುದರಿಂದ ಇತರರನ್ನು ಕುರಿತು ತಿರಸ್ಕಾರ ಹೊಂದಿರುವುದಕ್ಕೆ ಇಲ್ಲಿ ಸ್ಥಾನವಿರುವುದಿಲ್ಲ.

*

ಕೈಕೊಳ್ಳಲಾಗಿದ್ದನ್ನು ಇನ್ನೂ ಕೈಕೊಳ್ಳಬೇಕಾದುದಕ್ಕೆ ಹೋಲಿಸಿದರೆ ಕಂಡುಬರುವ ಸಾಪೇಕ್ಷತೆಯ ಬಗೆಗೆ ಅರಿವು ಹೊಂದಿರುವುದನ್ನು ಬಹುಶಃ ಆಧ್ಯಾತ್ಮಿಕ ವಿನಮ್ರತೆ ಎಂದು ಹೇಳಬಹುದು – ಮತ್ತು ಹಾಗೆಯೇ ಭಗವಂತನ ಅನುಗ್ರಹವಿಲ್ಲದೆ ಮನುಷ್ಯನ ಸತ್ತೆ ಏನೂ ಆಗಿರುವುದಿಲ್ಲ ಎಂಬ ಪ್ರಜ್ಞೆ ಹೊಂದಿರುವುದೂ ವಿನಮ್ರತೆಯಾಗಿದೆ.

*

. . . ವಿನಮ್ರತೆ ಮೊದಲ ಆವಶ್ಯಕತೆ, ಏಕೆಂದರೆ ಅಹಂಕಾರ ಮತ್ತು ಗರ್ವವಿದ್ದವನು ಅತ್ಯುಚ್ಚವಾದದ್ದನ್ನು ಸಿದ್ಧಿಸಿಕೊಳ್ಳಲಾರನು. ಆದರೆ ಬಾಹ್ಯದಲ್ಲಿರುವ ವಿನಮ್ರತೆ ಸೂಕ್ತವಾದದ್ದು ಎಂದು ನನಗನಿಸುವುದಿಲ್ಲ (ಗರ್ವ ಇಲ್ಲವೆ ದುರಹಂಕಾರ ಇಲ್ಲವೆ ಜಂಬ ಇರದೆ ಇರುವುದು ಇತರರೊಡನೆ ಕೈಕೊಳ್ಳುವ ವ್ಯವಹಾರದಲ್ಲಿ ಅತ್ಯಗತ್ಯದ್ದಾಗಿದೆ) – ಅದು ಬಹಳಷ್ಟು ಸಲ ಗರ್ವವನ್ನು ಸೃಷ್ಟಿಸುತ್ತದೆ, ಕೆಲ ಸಮಯದ ನಂತರ ಅದು ಔಪಚಾರಿಕ ಇಲ್ಲವೆ ನಿಷ್ಫಲವಾಗುತ್ತದೆ.

**(23/553, 24/1387–88; 25/504, 24/1387)** **– ಶ್ರೀ ಅರವಿಂದರು**

*

## ನಾಲ್ಕು ಚಿಕ್ಕ ಕತೆಗಳು

### [1]

ಕಾಯಿ ಕೌಸ್ (Kai Kaus) ಹೆಸರಿನ ಪರ್ಶಿಯಾ ದೇಶದ ರಾಜ ಹಲವಾರು ಯುದ್ಧಗಳನ್ನು ಮಾಡಿದ್ದ, ಮತ್ತು ಬಹಳಷ್ಟು ಯುದ್ಧಗಳಲ್ಲಿ ಜಯ ಸಾಧಿಸಿದ್ದ. ತನ್ನ ಶತ್ರುಗಳ ಮೇಲೆ ದಬ್ಬಾಳಿಕೆ ಮಾಡಿ ಸಂಪಾದಿಸಿದ ಸಂಪತ್ತಿನಿಂದ ಅವನು ಬಹಳ ಶ್ರೀಮಂತನಾಗಿದ್ದ. ಆ ಸಂಪತ್ತಿನಿಂದ ಎಲ್ಬುರ್ಝ್ (Elburz) ಪರ್ವತಗಳಲ್ಲಿ

ಎರಡು ಅರಮನೆಗಳನ್ನು ಕಟ್ಟಿಸಿದ್ದ. ಅವನ ಕೋಣೆಗಳಲ್ಲಿ ಬೆಳ್ಳಿ, ಬಂಗಾರ ಎಷ್ಟೊಂದು ಅಪರಿಮಿತವಾಗಿತ್ತೆಂದರೆ ಅವುಗಳನ್ನು ಉಜ್ಜಿದಾಗ ಹೊರಹೊಮ್ಮುವ ಹೊಳಪು ದಿನದ ಪ್ರಕಾಶದೊಡನೆ ಸ್ಪರ್ಧೆ ನಡೆಸುತ್ತಿದ್ದ ಹಾಗಿರುತ್ತಿತ್ತು.

ಕಾಯಿ ಕೌಸ್ ಅತಿ ಭರವಸೆಯಿರುವ ಗರ್ವದಿಂದ ತುಂಬಿಕೊಂಡಿದ್ದ. ತಾನು ಪೃಥ್ವಿಯ ಮೇಲಿರುವ ಅತಿ ಶ್ರೇಷ್ಠ ರಾಜ ಎಂದು ಯೋಚಿಸುತ್ತಿದ್ದ.

ಇಬ್ಲಿಸ್ (Iblis) ಹೆಸರಿನ ದುಷ್ಟ ಸೈತಾನ ಆ ರಾಜ ತನ್ನ ಬಗ್ಗೆ ಹೊಂದಿರುವ ಉಚ್ಚ ಅಭಿಪ್ರಾಯವನ್ನು ಅವಲೋಕಿಸಿ ಅವನಿಗೆ ಮೋಸ ಮಾಡಲು ನಿರ್ಧರಿಸಿದ. ಸೇವಕನ ರೂಪ ಧರಿಸಿದ ರಾಕ್ಷಸನೊಬ್ಬನನ್ನು ಅರಮನೆಗೆ ಕಳಿಸಿಕೊಟ್ಟ. ರಾಜನಿಗೆ ಅರ್ಪಿಸಲು ಆ ರಾಕ್ಷಸನ ಕೈಯಲ್ಲಿ ಹೂಗೊಂಚಲಿತ್ತು.

ಆ ಸೇವಕ ಕಾಯಿ ಕೌಸನ ಮುಂದಿದ್ದ ನೆಲಕ್ಕೆ ಬಾಗಿ ಮುದ್ದುಕೊಟ್ಟು ಹೇಳಿದ:

"ಮಹಾರಾಜರೇ ಜಗತ್ತಿನಲ್ಲಿ ಯಾವ ರಾಜನೂ ನಿಮ್ಮ ಹಾಗಿಲ್ಲ. ಆದಾಗ್ಯೂ ನೀವು ಜಯಿಸಬೇಕಾದ ಒಂದು ಲೋಕವಿದೆ. ಅದು ಮೇಲಿರುವ ಜಗತ್ತು. ಸೂರ್ಯ, ಚಂದ್ರ, ಗ್ರಹಗಳು ಮತ್ತು ಸ್ವರ್ಗದ ರಹಸ್ಯ ಮೂಲೆಗಳು ಇರುವ ಸ್ಥಳ ಅದು. ಓ ರಾಜ, ಪಕ್ಷಿಗಳನ್ನು ಅನುಸರಿಸಿ ಹೋಗಿ ಆಕಾಶದಲ್ಲಿ ಏರುತ್ತ ಸಾಗಿ ಹೋಗು."

"ರೆಕ್ಕೆಗಳಿಲ್ಲದೆ ನಾನು ಮೇಲೇರಿ ಹೋಗುವುದು ಹೇಗೆ?" ಎಂದು ರಾಜ ಕೇಳಿದ.

"ಮಹಾರಾಜರೇ, ನಿಮ್ಮ ರಾಜ್ಯದಲ್ಲಿರುವ ಪಂಡಿತೋತ್ತಮರು ನಿಮಗೆ ಅದನ್ನು ಹೇಳುವರು."

ಹಾಗಾಗಿ ರಾಜ ಕಾಯಿ ಕೌಸ್ ತಾನು ಮೇಲೆ ಹೇಗೆ ಹಾರಿ ಹೋಗಬಹುದೆಂಬುದನ್ನು ಕುರಿತು ಜ್ಯೋತಿಷಿಗಳನ್ನು ಕೇಳಿದ. ಅವರು ಹೊಸ ಯೋಜನೆಯೊಂದನ್ನು ಅನ್ವೇಷಿಸಿದರು. ಅವರು ಸಾಧಾರಣ ವಿಧಾನಗಳನ್ನು ಸೂಚಿಸಿದಾಗ ರಾಜ ಅವುಗಳನ್ನು ಸ್ವೀಕರಿಸಲು ಸಿದ್ಧನಾಗಲಿಲ್ಲ.

ಅವರು ನಾಲ್ಕು ಚಿಕ್ಕ ವಯಸ್ಸಿನ ಗರುಡ ಪಕ್ಷಿಗಳನ್ನು ಆಯ್ದುಕೊಂಡು ಅವುಗಳಿಗೆ ಆಹಾರ, ತರಬೇತು ನೀಡಿ ಅವು ದೊಡ್ಡವಾಗುವಂತೆ ಮತ್ತು ಬಲಿಷ್ಠವಾಗುವಂತೆ ಮಾಡಿದರು.



ಅವರು ಚೌಕಾಕಾರದ ಕಟ್ಟಿಗೆಯ ಚೌಕಟ್ಟನ್ನು ತಯಾರಿಸಿದರು, ಅದರ ಪ್ರತಿಯೊಂದು ಮೂಲೆಯಲ್ಲಿ ಮರದ ಕಂಬವನ್ನು ಗಟ್ಟಿಯಾಗಿರುವ ಹಾಗೆ ಜೋಡಿಸಿದರು. ಮತ್ತು ಪ್ರತಿಯೊಂದು ಕಂಬದ ಮೇಲೆ ಆಡಿನ ಮಾಂಸದ ತುಂಡನ್ನು ಕಟ್ಟಿ ಇಟ್ಟರು. ಪ್ರತಿಯೊಂದು ಮೂಲೆಗೆ ಒಂದೊಂದರಂತೆ ಆ ನಾಲ್ಕು ಗರುಡಗಳನ್ನು ಕಟ್ಟಿ ಹಾಕಿದರು.

ರಾಜನ ಸಿಂಹಾಸನವನ್ನು ಆ ಚೌಕಟ್ಟಿಗೆ ಕಟ್ಟಿ ಇಟ್ಟರು, ಮತ್ತು ಮದ್ಯ ತುಂಬಿದ ಜಾಡಿ (Jar) ಯನ್ನು ಸಿಂಹಾಸನದ ಒಂದು ಮೂಲೆಯಲ್ಲಿ ಇರಿಸಿದರು. ರಾಜ ಸಿಂಹಾಸನದ ಮೇಲೆ ಕುಳಿತುಕೊಂಡ.

ಆ ನಾಲ್ಕು ಗರುಡಗಳು ಆಡಿನ ಮಾಂಸದ ತುಂಡನ್ನು ಹಿಡಿದುಕೊಳ್ಳಲು ಪ್ರಯತ್ನಿಸಿದವು. ಹಾಗೂ ಅವು ಪ್ರಯತ್ನಿಸುತ್ತಿದ್ದಂತೆ ಹಾರತೊಡಗಿದವು. ಅದೇ ವೇಳೆಗೆ ಸಿಂಹಾಸನವಿದ್ದ ಚೌಕಟ್ಟನ್ನು ಮೇಲ್ಗಡೆ ಎತ್ತಿ ಒಯ್ಯತೊಡಗಿದವು. ಆ ದೃಶ್ಯವನ್ನು ನೋಡಿ ಅಲ್ಲಿ ನೆರೆದಿದ್ದ ಜನರು ಆಶ್ಚರ್ಯಚಕಿತರಾದರು. ಗರುಡ ಪಕ್ಷಿಗಳು ಮೇಲ್ಗಡೆ ಹಾರುತ್ತ ಚಂದ್ರನನ್ನು ಸಮೀಪಿಸುವವರೆಗೆ ಸಾಗಿ ಹೋದವು, ಅವು ದಣಿದುಕೊಂಡಾಗ ತಮ್ಮ ರೆಕ್ಕೆ ಬಡಿತವನ್ನು ನಿಲ್ಲಿಸಿಬಿಟ್ಟವು. ಆಗ ಆ ಚೌಕಟ್ಟು, ಸಿಂಹಾಸನ, ರಾಜ, ಮದ್ಯದ ಜಾಡಿ ಇವೆಲ್ಲವೂ ಚಾಯಿನಾ ದೇಶದ ಕಾಡು ಪ್ರದೇಶವೊಂದರಲ್ಲಿ ಥಟ್ಟನೆ ನೆಲಕ್ಕೆ ಅಪ್ಪಳಿಸಿ ಬಿದ್ದುಬಿಟ್ಟವು. ಸಂದೇಶವಾಹಕರು ಬಂದು ರಾಜನನ್ನು ಅರಮನೆಗೆ ಕರೆದೊಯ್ಯುವವರೆಗೆ ಅವನು ಗಾಯಗೊಂಡು, ಏಕಾಕಿಯಾಗಿ, ಹಸಿದುಕೊಂಡು, ಶೋಚನೀಯ ಸ್ಥಿತಿಯಲ್ಲಿ ಬಿದ್ದುಕೊಂಡಿದ್ದ.

ಈಗ ರಾಜನೇ ಸ್ವತಃ ತಾನು ಎಷ್ಟೊಂದು ಮೂಢನಾಗಿದ್ದನೆಂಬುದನ್ನು ಹಾಗೂ ವ್ಯರ್ಥ ಸಾಹಸ ಕೈಕೊಂಡಿದ್ದನೆಂಬುದನ್ನು ಕಂಡುಕೊಂಡ. ತನ್ನ ಸಾಮರ್ಥ್ಯದ ಅಳವಿಗೆ ಮೀರಿದ ಇಂತಹ ಯಾವುದೇ ಹೆಚ್ಚಿನ ಹಾರಾಟಗಳನ್ನು ಕೈಕೊಳ್ಳುವುದು ಬೇಡ ಎಂಬ ನಿರ್ಧಾರ ಕೈಕೊಂಡ. ತನ್ನ ರಾಜ್ಯದ ಕಾರ್ಯವನ್ನು ಕೈಕೊಳ್ಳುವುದರಲ್ಲಿ ನಿರತನಾದ, ಅದನ್ನು ನ್ಯಾಯಯುತವಾಗಿ ಆಳಿ ತನ್ನ ಪ್ರಜೆಗಳ ಪ್ರಶಂಸೆಗೆ ಪಾತ್ರನಾದ.

ಈ ರೀತಿಯಲ್ಲಿ ಅವನು ಜಂಬದ ಉಚ್ಚತರ ಸ್ಥಾನಗಳಿಂದ ಒಳ್ಳೆಯ ಹಾಗೂ ದೃಢವಾದ ಪೃಥ್ವಿಯ ಪ್ರಾಮಾಣಿಕತನದತ್ತ ಇಳಿದು ಬಂದ.

## [2]

ಬಹಳ ವರ್ಷಗಳ ಹಿಂದೆ ಇಸ್ರಾಯಿಲ್ ದೇಶದ ಶ್ರೇಷ್ಠ ರಾಜನಾಗಿದ್ದ ಸೊಲೋಮನ್‌ನ ಹೆಸರನ್ನು ಕೇಳಿದ್ದೀರಿ. ಬೈಬಲ್ಲಿನಲ್ಲಿ ಮತ್ತು ಇನ್ನಿತರ ಪುಸ್ತಕಗಳಲ್ಲಿ ಅವನ ಕೀರ್ತಿಯನ್ನು ಹಾಗೂ ಮಹಿಮೆಯನ್ನು ವರ್ಣಿಸುವ ಹಲವಾರು ಕತೆಗಳಿವೆ. ಅವುಗಳಲ್ಲಿಯ ಒಂದು ಕತೆಯನ್ನು ನಾನು ನಿಮಗೆ ಹೇಳುವೆ.

ಅವನು ಬಹಳ ಶ್ರೀಮಂತನಾಗಿದ್ದ, ಅವನ ಸಿಂಹಾಸನ ಅತ್ಯದ್ಭುತವಾಗಿತ್ತು. ಅವನ ತಟ್ಟೆಗಳೆಲ್ಲ ಬಂಗಾರದವಾಗಿದ್ದವು. ಅವನ ಅರಮನೆಯಲ್ಲಿದ್ದ ಬೆಳ್ಳಿ ಜೆರೂಸಲೇಮ ನಗರದಲ್ಲಿರುವ ಕಲ್ಲುಗಳಷ್ಟು ಸಾಮಾನ್ಯ ರೀತಿಯಲ್ಲಿ ತುಂಬಿಕೊಂಡಿದ್ದಿತು. ವರ್ತಕರು ಅವನಿಗೆ ಮೇಲಿಂದ ಮೇಲೆ ಬಂಗಾರ, ಬೆಳ್ಳಿ, ಹಸ್ತಿದಂತ, ನವಿಲುಗಳು, ಮಂಗಗಳು, ಸುಂದರ ವಸ್ತುಗಳು, ಯುದ್ಧದಲ್ಲಿ ಬಳಸುವ ಕವಚ, ಮಸಾಲೆ ಸಾಮಾನುಗಳು, ಕುದುರೆಗಳು, ಹೇಸರಗತ್ತೆಗಳು ಮತ್ತು ಇನ್ನಿತರ ಸಂಪತ್ತನ್ನು ತಂದುಕೊಡುತ್ತಿದ್ದರು. ರಾಜ ಸೊಲೋಮನ್ ಭವ್ಯವಾದ ಮಂದಿರವನ್ನು ನಿರ್ಮಿಸಿದ. ಅದು ಅವನ ಪಿತೃಗಳ ದೇಶದ ದೇವನಿಗೆ ಗೌರವ ಸಲ್ಲಿಸುವುದಕ್ಕಾಗಿತ್ತು. ಆದರೆ ಮಂದಿರ ನಿರ್ಮಾಣಗೊಳ್ಳುವುದಕ್ಕಿಂತ ಮೊದಲು ಅದಕ್ಕೆ ಕಟ್ಟಿಗೆ ಒದಗಿಸುವ ದಾರು ವೃಕ್ಷ, ದೇವದಾರು ಬಳಗದ ಮರಗಳ ರೂಪದಲ್ಲಿ, ಬೆಳೆಯುತ್ತಿದ್ದಾಗ ಸೊಲೋಮನ್‌ನಿಗೆ ಒಂದು ಕನಸು ಬಿತ್ತು. ಅದರಲ್ಲಿ ಅವನ ದೇವ ಕಾಣಿಸಿಕೊಂಡು ಹೇಳಿದ: "ನಿನಗೆ ಬೇಕಾದುದನ್ನು ನನ್ನಿಂದ ಕೇಳಿಕೋ."

ಸೊಲೋಮನ್ ಉತ್ತರ ನೀಡಿದ:

"ನನ್ನ ತಂದೆ ಡೇವಿಡ್ ನ್ಯಾಯಪಕ್ಷಪಾತಿಯಾಗಿದ್ದ, ಸತ್ಯವಂತನಾಗಿದ್ದ ಮತ್ತು ನಾನು ಈಗ ಅವನ ಸಿಂಹಾಸನಕ್ಕೆ ವಾರಸುದಾರನಾಗಿದ್ದೇನೆ. ನನ್ನೆದುರಿಗೆ ಇರುವ ಕಾರ್ಯ ಭವ್ಯವಾಗಿದೆ. ನಾನೊಬ್ಬ ಚಿಕ್ಕಮಗುವಾಗಿರುವ ಹಾಗೆ ಭಾಸವಾಗುತ್ತದೆ. ಹೊರಗೆ ಹೇಗೆ ಹೋಗಬೇಕು, ಒಳಗೆ ಹೇಗೆ ಬರಬೇಕು ಎಂಬುದು ನನಗೆ ತಿಳಿಯುತ್ತಿಲ್ಲ. ಈ ಜನರ ಮೇಲೆ ರಾಜ್ಯಾಧಿಪತ್ಯ ಹೇಗೆ ನಡೆಸಬೇಕೆಂಬುದು ನನಗೆ ತಿಳಿಯದು. ಆದ್ದರಿಂದ ಅದಕ್ಕಾಗಿ ಅವಶ್ಯವಿರುವ ಜ್ಞಾನ ನನಗೆ ಬೇಕಾಗಿದೆ.



ಅದರಿಂದಾಗಿ ದುಷ್ಟವಾದದ್ದು ಯಾವುದು, ಒಳ್ಳೆಯದು ಯಾವುದು ಎಂಬುದನ್ನು ತಿಳಿದುಕೊಳ್ಳುವಂತಾಗಬಹುದು."

ದೇವ ಉತ್ತರ ನೀಡಿದ:

"ದೀರ್ಘಾಯುಷ್ಯವನ್ನಾಗಲಿ, ಸಿರಿಸಂಪತ್ತನ್ನಾಗಲಿ ನೀನು ಕೇಳಿಕೊಂಡಿಲ್ಲ, ಆದರೆ ಜ್ಞಾನವನ್ನು ಮತ್ತು ನ್ಯಾಯ, ಅನ್ಯಾಯಗಳ ನಡುವಿನ ಭಿನ್ನತೆಯನ್ನು ಅರಿತುಕೊಳ್ಳುವ ಹೃದಯವನ್ನು ಬಯಸಿರುವಿ. ನಾನು ನಿನಗೆ ವಿವೇಕದಿಂದ ಕೂಡಿದ ಮನಸ್ಸನ್ನು ಕೊಡುತ್ತೇನೆ, ಅದರಿಂದಾಗಿ ತಿಳಿವಳಿಕೆಯಲ್ಲಿ ಯಾರೂ ನಿನ್ನನ್ನು ಸರಿಗಟ್ಟುವಂತಾಗುವುದಿಲ್ಲ, ಹಾಗೆಯೇ ದೀರ್ಘಾಯುಷ್ಯ ಮತ್ತು ಸಿರಿಸಂಪತ್ತು ನಿನ್ನವಾಗುತ್ತವೆ."

"ನಾನು ಕೇವಲ ಒಂದು ಮಗು" ಎಂದು ರಾಜ ಮಾತನಾಡಿದ್ದರಲ್ಲಿ ವಿನಮ್ರತೆ ಇರುವುದು ಗಮನಾರ್ಹವಾದದ್ದು.

ಸೊಲೋಮನ್ ಹಾಗೆ ನಮ್ರವಾಗಿ ಮಾತನಾಡಿದನೆಂದು ನಾವು ಅವನಿಗೆ ಕಡಿಮೆ ಗೌರವ ತೋರಿಸುತ್ತೇವೆಯೇ?

ತದ್ವಿರುದ್ಧವಾಗಿ ವಿನಮ್ರವಾಗಿರುವುದರಲ್ಲಿ ಶ್ರೇಷ್ಠತೆಯನ್ನು ಕಂಡುಕೊಳ್ಳುವುದು ನಿಜವಾಗಿ ಸಂತೋಷದಾಯಕವಾಗಿರುತ್ತದೆ.

## [3]

ಈ ಕತೆಗಳ ನಂತರ ಸುಪ್ರಸಿದ್ಧ ವಿಜ್ಞಾನಿ, ಇಂಗ್ಲೀಷ ಮನುಷ್ಯ ಐಜಾಕ್ ನ್ಯೂಟನ್‌ನನ್ನು ಕುರಿತಾಗಿರುವ ಕತೆಯನ್ನು ಹೇಳುವೆ.

ನ್ಯೂಟನ್ ಜನ್ಮ ತಾಳಿದ್ದು 1642 ರಲ್ಲಿ ಮತ್ತು ಮರಣ ಹೊಂದಿದ್ದು 1727 ರಲ್ಲಿ. ಈ ದೀರ್ಘ ಜೀವನ ಕಾಲದಲ್ಲಿ ಅವನು ಪ್ರಕೃತಿಯ ರಹಸ್ಯಗಳನ್ನು ಕುರಿತು ಅಭ್ಯಾಸ ಮಾಡಿದ್ದ: ಗುರುತ್ವಾಕರ್ಷಣ ಎಂಬ ವಿಶ್ವಂಭರ ಆಕರ್ಷಣ ಶಕ್ತಿ, ಸಮುದ್ರದ ತೆರೆಗಳ ಮೇಲೆ ಆಗುವ ಸೂರ್ಯ, ಚಂದ್ರರ ಗುರುತ್ವಾಕರ್ಷಣ ಶಕ್ತಿಯ ಪ್ರಭಾವ, ಸೂರ್ಯನ ಬೆಳಕಿನ ಬಿಳಿ ಬಣ್ಣ ಕಾಮನ ಬಿಲ್ಲಿನ ಏಳು ಬಣ್ಣಗಳಲ್ಲಿ ವಿಭಜನೆಗೊಳ್ಳುವ ರೀತಿ, ಇನ್ನೂ ಇತರ ವಿಷಯಗಳನ್ನು ಕುರಿತು ಅವನು ಅಭ್ಯಾಸ ಮಾಡಿದ್ದ. ಪ್ರತಿಯೊಬ್ಬನೂ ಅವನ ಪ್ರತಿಭೆಯನ್ನು ಕಂಡು ಆಶ್ಚರ್ಯಚಕಿತನಾಗುತ್ತಿದ್ದ,

ಏಕೆಂದರೆ ಈ ಮನುಷ್ಯ ಪ್ರಕೃತಿಯ ಕಾರ್ಯಗಳನ್ನು, ಅದ್ಭುತಗಳನ್ನು ಗುರುತಿಸಿ ನೋಡುವುದರಲ್ಲಿ ಅತ್ಯಂತ ಕುಶಲನಾಗಿದ್ದ. ಒಂದು ದಿನ ಒಬ್ಬ ಮಹಿಳೆ ನ್ಯೂಟನ್‌ನ ಹತ್ತಿರ ಅವನ ಕಲಿತುಕೊಳ್ಳುವಿಕೆ ಹಾಗೂ ಜ್ಞಾನ ಕುರಿತು ಪ್ರಶಂಸೆಯ ಮಾತನಾಡಿದಳು. ಆಗ ಅವನು: "ಅಯ್ಯೋ ನಾನು ಸತ್ಯದ ಸಾಗರದ ದಂಡೆಯ ಮೇಲೆ ನುಣುಪಾದ, ದುಂಡಗಿರುವ ಹರಳು (pebbles) ಗಳನ್ನು ಆಯ್ದುಕೊಳ್ಳುವ ಮಗುವಿದ್ದ ಹಾಗೆ" ಎಂದು ಹೇಳಿದ.

'ಸತ್ಯದ ಸಾಗರ'ದ ಅರ್ಥ ಪ್ರಕೃತಿಯ ನಿಮಯಗಳು ಎಂಬುದನ್ನು ನೀವು ತಿಳಿದುಕೊಳ್ಳಬೇಕು. ಅವುಗಳನ್ನು ಪಂಡಿತೋತ್ತಮರೂ ಕೂಡ ತಿಳಿದುಕೊಂಡಿರುವುದು ಅಲ್ಪ. ಚಿಕ್ಕ ಮಗುವೊಂದು ಸಮುದ್ರದ ದಂಡೆಯ ಮೇಲಿನ ಕಲ್ಲು ಹರಳುಗಳನ್ನು ಆಯ್ದುಕೊಳ್ಳುತ್ತದೆ, ಆದರೆ ಮಗು ಯೋಚಿಸುವುದಕ್ಕಿಂತ ಸಮುದ್ರ ಎಷ್ಟೊಂದು ವಿಸ್ತಾರವಾಗಿದೆ! ಮತ್ತು ನಮ್ಮ ಯೋಚನೆಗಳಿಗೆ ಹೋಲಿಸಿದರೆ ವಿಶ್ವ ಇನ್ನೂ ಎಷ್ಟು ಹೆಚ್ಚು ವಿಸ್ತಾರವಾಗಿದೆ!

ನ್ಯೂಟನ್ ತನ್ನನ್ನು ಚಿಕ್ಕ ಮಗುವಿನೊಂದಿಗೆ ಹೋಲಿಸಿಕೊಂಡ ಎಂಬ ಕಾರಣದಿಂದ ಅವನನ್ನು ಅಲ್ಪನನ್ನಾಗಿರಿಸುವಂತೆ ಪರಿಗಣಿಸುತ್ತೇವೆಯೇ? ನಿಶ್ಚಿತವಾಗಿ ಇಲ್ಲ. ಅವನ ವಿನಮ್ರತೆಗಾಗಿ ಅವನನ್ನು ಗೌರವಿಸುತ್ತೇವೆ.

[4]

ಬಹಳ ವರ್ಷಗಳ ಹಿಂದೆ, ತನ್ನ ಅದ್ಭುತ ಕಂಠ ಹಾಗೂ ಪ್ರತಿಭೆಯಿಂದ ಜಗತ್ತಿನಾದ್ಯಂತ ಕೀರ್ತಿಗಳಿಸಿದ ಮಹಿಳೆಯೊಬ್ಬಳು ಸಂತೋಷಕೂಟ (party) ವೊಂದರಲ್ಲಿ ಉಪಸ್ಥಿತಳಿದ್ದಳು. ಅಲ್ಲಿ ಮಧುರ ಕಂಠವಿರುವ ಬಾಲಿಕೆಯೊಬ್ಬಳಿಗೆ ಹಾಡಲು ಕೇಳಿಕೊಳ್ಳಲಾಗಿತ್ತು. ಅವಳು ಹಾಡಬೇಕಾಗಿದ್ದುದು ಇಬ್ಬರು ಕೂಡಿ ಹಾಡುವಂತಹದಾಗಿತ್ತು, ಅದು ಇಬ್ಬರಿಗೆ ಸರಿ ಹೋಗುವ ಸಂಗೀತದ ಪ್ರಕಾರದ್ದಾಗಿತ್ತು. ಆ ಸಂಗೀತದ ಮುಖ್ಯ ಭಾಗವನ್ನು ಆ ಮಗು ಹಾಡಬೇಕಾಗಿತ್ತು, ಆದರೆ ಅವಳ ಜೊತೆಗೆ ಹಾಡಲು ಯಾರೂ ಮುಂದೆ ಬರಲಿಲ್ಲ. ವಯಸ್ಕರಾದ ಎಲ್ಲರೂ ಆ ಮಗುವಿನ ಜೊತೆಗೆ ಎರಡನೆಯವರಾಗಿ ಹಾಡುವುದು ತಮ್ಮ ಘನತೆಗೆ ಸರಿ ಹೋಗುವುದಿಲ್ಲ ಎಂದು ಯೋಚಿಸಿದರು. ಒಂದು ಕ್ಷಣ ಮೌನವಾವರಿಸಿತು. ಮಗುವಿನ ಜೊತೆಗೆ ಹಾಡಲು ಯಾರೂ ಮುಂದೆ ಬರಲಿಲ್ಲ.



ಆಗ ಆ ಸುಪ್ರಸಿದ್ಧ ಗಾಯಕಿ "ಮಗು, ನೀನು ಇಷ್ಟಪಟ್ಟರೆ ನಾನು ನಿನ್ನ ಜೊತೆಗೆ ಹಾಡುವೆ" ಎಂದು ಹೇಳಿದಳು.

ಮತ್ತು ಅವಳು ಹಾಗೆ ಮಾಡಿದಳು. ಸಭಿಕರೆದುರು ದ್ವಂದ್ವ ಗೀತೆಯನ್ನು ಹಾಡಲಾಯಿತು. ತನ್ನ ಕಾಲದ ಅತ್ಯಂತ ಶ್ರೇಷ್ಠ ಗಾಯಕಿಯ ಧ್ವನಿಯ ಜೊತೆಗೆ ಆ ಚಿಕ್ಕ ಬಾಲಿಕೆಯ ಧ್ವನಿ ಸ್ಪಷ್ಟವಾಗಿ, ಮಧುರವಾಗಿ ಎತ್ತರಕ್ಕೇರಿ ಹೋಯಿತು, ಅದು ಸುಂದರ ಸಾಮರಸ್ಯದಿಂದ ಕೂಡಿತ್ತು.

ಮಗುವಿಗೆ ತನ್ನ ಸೇವೆಯನ್ನು ಸಲ್ಲಿಸಲು ಇಷ್ಟಪಟ್ಟ ಆ ವಿನಮ್ರ ಮಹಿಳೆಯ ಹೃದಯ ಉದಾರವಾಗಿತ್ತು.

**(2/249–54)** **– ಶ್ರೀಮಾತೆ**

*

## ಪ್ರಾರ್ಥನೆಯನ್ನೇಕೆ ಮಾಡಬೇಕು?

ಭಗವಂತನೊಡನೆ ಸಂಬಂಧಗಳಲ್ಲಿ ಪ್ರವೇಶಿಸುವುದು ಯೋಗ, ಅತ್ಯುಚ್ಚ ಪರಮಾನಂದ, ಮಹೋನ್ನತ ಗುಣವುಳ್ಳ ಉಪಯುಕ್ತತೆ.

ಮಾನವತೆಯ ಅಳವಿನಲ್ಲಿರುವ ಸಂಬಂಧಗಳನ್ನು ನಾವು ಅಭಿವೃದ್ಧಿ ಪಡಿಸಿದ್ದೇವೆ. ಇವುಗಳನ್ನು ಪ್ರಾರ್ಥನೆ, ಪೂಜೆ, ಆರಾಧನೆ, ಯಜ್ಞ, ಯೋಚನೆ, ನಂಬಿಕೆ, ವಿಜ್ಞಾನ, ತತ್ವಜ್ಞಾನ ಎಂದು ಕರೆಯುತ್ತೇವೆ. ನಾವು ಅಭಿವೃದ್ಧಿಪಡಿಸಿಕೊಂಡ ಕ್ಷಮತೆಯಾಚೆಗೆ ಇರುವ ಸಂಬಂಧಗಳಿವೆ, ಆದರೆ ನಾವು ಇನ್ನೂ ಅಭಿವೃದ್ಧಿಪಡಿಸಬೇಕಾದ ಮಾನವತೆಯಲ್ಲಿ ಅವುಗಳಿವೆ. ನಾವು ಸಾಮಾನ್ಯವಾಗಿ ಯೋಗ ಎಂದು ಕರೆಯುವ ಆಚರಣೆಗಳ ಮೂಲಕ ಅವುಗಳನ್ನು ಸಿದ್ಧಿಸಿಕೊಳ್ಳಲಾಗುತ್ತದೆ.

**(17/2)** **– ಶ್ರೀ ಅರವಿಂದರು**

ಅತಿ ಕಟ್ಟುನಿಟ್ಟಾಗಿ ತರ್ಕ ಮಾಡುವವರು ನಿಮಗೆ ಹೇಳುತ್ತಾರೆ: "ಪ್ರಾರ್ಥನೆಯನ್ನೇಕೆ ಮಾಡಬೇಕು? ಅಭೀಪ್ಸೆ ಏತಕ್ಕೆ ಬೇಕು? ಕೇಳಿಕೊಳ್ಳುವುದೇಕೆ? ಪ್ರಭು ತನಗೆ ಬೇಕಾದುದನ್ನಷ್ಟೇ ಮಾಡುತ್ತಾನೆ." ಅದು ಬಹಳ ಸ್ಪಷ್ಟವಿದೆ, ಅದನ್ನು ಹೇಳುವ ಆವಶ್ಯಕತೆ ಇಲ್ಲ, ಆದರೆ "ಓ ಪ್ರಭು ಪ್ರಕಟನಾಗು" ಎಂಬ ಪ್ರಚೋದನೆ

ಅವನ ಪ್ರಕಟಣೆಗೆ ಹೆಚ್ಚು ಗಾಢ ಕಂಪನವನ್ನು ಕೊಡುತ್ತದೆ.

ಹಾಗಿಲ್ಲದಿದ್ದರೆ ಭಗವಂತ ಜಗತ್ತನ್ನು ಅದಿದ್ದ ಹಾಗೆ ಮಾಡುತ್ತಿರಲಿಲ್ಲ. ಮತ್ತೊಮ್ಮೆ ತಾನೇನಿದ್ದೇನೆ ಅದಾಗಬೇಕೆಂಬ ಜಗತ್ತಿನ ಅಭೀಪ್ಸೆಯಲ್ಲಿ ಒಂದು ವಿಶೇಷ ಸಾಮರ್ಥ್ಯವಿದೆ, ದಿವ್ಯಾನಂದವಿದೆ, ವಿಶೇಷ ಕಂಪನವಿದೆ.

ಮತ್ತು ಆ ಕಾರಣದಿಂದಾಗಿ ಅಲ್ಲಿ – ಭಾಗಶಃ, ಅಪೂರ್ಣ (fragmentarily) – ಉತ್ಕ್ರಾಂತಿ ಇದೆ.

ಶಾಶ್ವತವಾಗಿ ಪರಿಪೂರ್ಣವಾದ ವಿಶ್ವ, ಶಾಶ್ವತವಾಗಿ ಪರಿಪೂರ್ಣತೆಯನ್ನು ಪ್ರಕಟಿಸುತ್ತಿದ್ದರೆ ಅದರಲ್ಲಿ ಪ್ರಗತಿಯ ಸಂತೋಷದ ಕೊರತೆ ಇರುತ್ತದೆ.

**(10/165–66)** **– ಶ್ರೀಮಾತೆ**

*

## ಪ್ರಾರ್ಥನೆ ಮತ್ತು ಅದಕ್ಕೆ ಉತ್ತರ

**ಪ್ರಶ್ನೆ :** *ಮಧುರ ಮಾತೆಯವರೆ, ಮನುಷ್ಯ ಏನನ್ನಾದರೂ ತಿಳಿದುಕೊಳ್ಳಬೇಕೆಂದು ಬಯಸಿದಾಗ, ಅವನಿಗೆ ಮಾರ್ಗದರ್ಶನ ಇಲ್ಲವೆ ಬೇರೇನೋ ಬೇಕಾದಾಗ ಅವನು ತನ್ನ ಆವಶ್ಯಕತೆಗೆ ತಕ್ಕಂತೆ ಅದನ್ನು ಭಗವಂತನಿಂದ ಹೇಗೆ ಪಡೆಯಬಲ್ಲ?*

**ಶ್ರೀಮಾತೆ :** ಭಗವಂತನಲ್ಲಿ ಅದನ್ನು ಬೇಡಿಕೊಳ್ಳುವುದರ ಮೂಲಕ ದೊರಕಿಸಬಹುದು. ನೀವು ಅವನನ್ನು ಕೇಳದಿದ್ದರೆ ನಿಮಗೆ ಅದು ದೊರಕುವುದಾದರೂ ಹೇಗೆ?

ನೀವು ಭಗವಂತನೆಡೆಗೆ ಹೊರಳಿದರೆ, ಮತ್ತು ಅವನಲ್ಲಿ ಪೂರ್ಣ ವಿಶ್ವಾಸವನ್ನಿರಿಸಿ ಅವನನ್ನು ಕೇಳಿದರೆ ನಿಮಗೆ ಅವಶ್ಯವಿರುವುದನ್ನು ದೊರಕಿಸುತ್ತೀರಿ. ಆದರೆ ನೀವು ಅವನಲ್ಲಿ ಅದಕ್ಕಾಗಿ ಕೇಳುವುದು ಅವಶ್ಯವಾಗಿದೆ.

ನೀವು ಆ ಪ್ರಯೋಗವನ್ನು ನಿಷ್ಕಾಪಟ್ಯದಿಂದ ಕೈಕೊಳ್ಳಬೇಕು, ಅದನ್ನು ಎಲ್ಲ ಬಗೆಯ ಬಾಹ್ಯ ಸಾಧನಗಳಿಂದ ದೊರಕಿಸಲು ಪ್ರಯತ್ನಿಸಬಾರದು, ಮತ್ತು ನಂತರ ನೀವು ಅವನನ್ನು ಕೇಳದೆ ಇದ್ದಾಗಲೂ ಕೂಡ ಅವನು ನಿಮಗೆ ಕೊಡುವನೆಂದು ನಿರೀಕ್ಷಿಸಬಾರದು. ಯಾರಾದರೊಬ್ಬರು ನಿಮಗೆ, ನಿಜವಾಗಿ, ಏನನ್ನಾದರೂ ನೀಡಲಿ ಎಂದು ಬಯಸಿದಾಗ ನೀವು ಅವರಿಂದ ಬೇಡುತ್ತೀರಲ್ಲವೆ? ಮತ್ತು ನೀವು



ಕೇಳದೆ ಇದ್ದಾಗ ಅವರು ಅದನ್ನು ನಿಮಗೆ ನೀಡಲಿ ಎಂದು ನಿರೀಕ್ಷಿಸುವುದೇಕೆ?

ಸಾಮಾನ್ಯ ಪ್ರಜ್ಞೆಯಲ್ಲಿ ಚಲನೆ ತದ್ವಿರುದ್ಧವಾಗಿರುತ್ತದೆ. ನೀವು "ನನಗೆ ಇದು ಬೇಕು, ಈ ಸಂಬಂಧ ಬೇಕು, ಈ ಮಮತೆ ಬೇಕು, ಈ ಜ್ಞಾನ ಬೇಕು ಇತ್ಯಾದಿ. ಸರಿ, ಭಗವಂತ ಇದನ್ನು ನನಗೆ ಕೊಡಬೇಕು, ಹಾಗಿಲ್ಲದಿದ್ದರೆ ಅವನು ಭಗವಂತನೇ ಅಲ್ಲ" ಎಂದು ಏನನ್ನೋ ಭಾವಿಸಿಕೊಂಡು ಹೇಳುತ್ತೀರಿ. ಎಂದರೆ ನೀವು ಸಮಸ್ಯೆಯನ್ನು ಸಂಪೂರ್ಣವಾಗಿ ತಿರುವು ಮುರುವು ಮಾಡುತ್ತೀರಿ.

ಮೊಟ್ಟ ಮೊದಲಿಗೆ "ನನಗೆ ಅವಶ್ಯವಿದೆ" ಎಂದು ಹೇಳುತ್ತೀರಿ. ನಿಮಗೆ ನಿಜವಾಗಿಯೂ ಅವಶ್ಯವಿದೆ ಎಂಬುದು ತಿಳಿದಿರುತ್ತದೆಯೆ? ಇಲ್ಲವೆ ಅದು ನಿಮ್ಮ ಭಾವನೆಗೆ ಬಂದ ವಿಷಯ ಇಲ್ಲವೆ ಒಂದು ಆಸೆ ಇಲ್ಲವೆ ಅಜ್ಞಾನದ ಚಲನೆಯಾಗಿರುತ್ತದೆಯೆ? ನಿಮಗೆ ಅದರ ಬಗ್ಗೆ ಏನೂ ತಿಳಿದಿರುವುದಿಲ್ಲ ಎಂಬುದು ಮೊದಲನೆಯ ಲಕ್ಷಣ.

ಎರಡನೆಯ ಲಕ್ಷಣ: ನಿಖರವಾಗಿ "ನನಗೆ ಇದು ಬೇಕು" ಎಂದು ಭಗವಂತನಿಗೆ ಹೇಳುತ್ತ ನಿಮ್ಮ ಸಂಕಲ್ಪವನ್ನು ಅವನ ಮೇಲೆ ಹೇರಲು ಪ್ರಯತ್ನಿಸುತ್ತೀರಿ. ಮತ್ತು ನಂತರ "ಇದನ್ನು ನನಗೆ ಕೊಡು" ಎಂದು ನೀವು ಅವನನ್ನು ಕೇಳುವುದೂ ಇಲ್ಲ. "ನನಗೆ ಅವಶ್ಯವಿದೆ, ಆದ್ದರಿಂದ, ಅದು ನನಗೆ ಅವಶ್ಯವಾಗಿರುವುದರಿಂದ, ಅದು ನನ್ನ ಬಳಿ ಬಹಳ ಸ್ವಾಭಾವಿಕವಾಗಿ, ಸ್ವಯಂಪ್ರೇರಿತವಾಗಿ ಬರಬೇಕು, ನನಗೆ ಅವಶ್ಯವಿದ್ದುದೆಲ್ಲವನ್ನೂ ಕೊಡುವುದು ಭಗವಂತ ಮಾಡಬೇಕಾದ ಕಾರ್ಯವಾಗಿದೆ," ಎಂದು ಹೇಳುತ್ತೀರಿ.

ಆದರೆ ನಿಜವಾಗಿ ಏನು ಬೇಕಾಗಿದೆ ಎಂಬುದು ನಿಮಗೆ ತಿಳಿದಿರದಿದ್ದರೆ, ಮತ್ತು ಅದು ಸತ್ಯವಾದದ್ದಾಗಿರದೆ ಕೇವಲ ಒಂದು ಭ್ರಮೆಯಾಗಿದ್ದರೆ ಮತ್ತು ಅದಕ್ಕೆ ಅಧಿಕವಾಗಿ ನಿಮ್ಮ ಸುತ್ತಲಿರುವ ಜೀವನದಿಂದ ಅದನ್ನು ಬೇಡುತ್ತಿದ್ದರೆ, ಭಗವಂತನೆಡೆಗೆ ಹೊರಳಿರದಿದ್ದರೆ, ನಿಮ್ಮ ಹಾಗೂ ಅವನ ನಡುವೆ ಯಾವ ಸಂಬಂಧವನ್ನೂ ಸೃಷ್ಟಿಸಿರದಿದ್ದರೆ, ನಿಮ್ಮ ಮನೋಧರ್ಮದಲ್ಲಿ ಕನಿಷ್ಠ ಮಟ್ಟದ ನಿಷ್ಕಾಪಟ್ಯವಿಲ್ಲದೆ ಅವನ ಬಗ್ಗೆ ಯೋಚಿಸಿರದಿದ್ದರೆ, ಇಲ್ಲವೆ ಅವನೆಡೆಗೆ ಹೊರಳಿರದಿದ್ದರೆ, ನೀವು ಅವನಿಂದ ಏನನ್ನೂ ಕೇಳಿರದಿದ್ದರೆ ನಿಮಗೆ ಏನನ್ನಾದರೂ ಕೊಡುವುದಕ್ಕೆ ಅವನಿಗೆ ಕಾರಣ ಕಂಡುಬರುವುದಿಲ್ಲ.

ನೀವು ಅವನಲ್ಲಿ ಬೇಡಿಕೊಂಡಿರಾದರೆ, ಅವನು ಭಗವಂತನಾಗಿರುವುದರಿಂದ, ನಿಮಗೆ ಅವಶ್ಯವಿದ್ದುದರ ಬಗ್ಗೆ ಅವನಿಗೆ ನಿಮಗಿಂತ ಹೆಚ್ಚು ತಿಳಿದಿರುತ್ತದೆ, ನಿಮಗೆ ಅವಶ್ಯವಾದದ್ದನ್ನು ಅವನು ನಿಮಗೆ ಕೊಡುತ್ತಾನೆ

ಹಾಗೆ ಮಾಡದೆ ನೀವು ಒತ್ತಾಯ ತರಲು, ನಿಮ್ಮ ಸಂಕಲ್ಪವನ್ನು ಅವನ ಮೇಲೆ ಹೇರಲು ಬಯಸಿದರೆ, ನೀವು ಬೇಡಿದ್ದನ್ನು ಅವನು ಕೊಡಬಹುದು. ಅದು ನಿಮ್ಮ ತಪ್ಪಿನ ಬಗ್ಗೆ ನಿಮ್ಮಲ್ಲಿ ಅರಿವನ್ನುಂಟುಮಾಡಿ, ನಿಜವಾಗಿ ನಿಮಗೆ ಅವಶ್ಯವಾದದ್ದು ಅದಲ್ಲವೆಂದು ತಿಳಿದುಕೊಳ್ಳುವಕ್ಕೆ ಜ್ಞಾನೋದಯವನ್ನು ಉಂಟುಮಾಡುವ ಕಾರಣಕ್ಕಾಗಿ ಇರುತ್ತದೆ.

ಮತ್ತು ಆಗ ನೀವು ಆಕ್ಷೇಪಿಸಲು ಪ್ರಾರಂಭಿಸುತ್ತೀರಿ – ನೀವು ಎಂದರೆ ವೈಯಕ್ತಿಕವಾಗಿ ಇಲ್ಲಿದ್ದವರು ಎಂದು ನಾನು ಹೇಳುತ್ತಿಲ್ಲ – ಎಲ್ಲ ಮಾನವರನ್ನು ಕುರಿತು ಹೇಳುತ್ತಿದ್ದೇನೆ, ನೀವು ಹೇಳುತ್ತೀರಿ: "ಹಾನಿಯನ್ನುಂಟು ಮಾಡುವಂತಹದನ್ನು ದೇವರು ನನಗೇಕೆ ಕೊಟ್ಟಿದ್ದಾನೆ?" – ಹಾಗೆ ಹೇಳುವಾಗ ಅದನ್ನು ಬೇಡಿದವರು ನೀವೇ ಎಂಬುದನ್ನು ಮರೆಯುತ್ತೀರಿ.

ಇವೆರಡೂ ಸಂದರ್ಭಗಳಲ್ಲಿ ನಿಮ್ಮ ಆಕ್ಷೇಪವಿದ್ದೇ ಇರುತ್ತದೆ. ನೀವು ಬೇಡಿದ್ದನ್ನು ಅವನು ಕೊಟ್ಟಾಗ ಮತ್ತು ಅದು ನಿಮಗೆ ಒಳ್ಳೆಯದನ್ನು ಮಾಡುವುದಕ್ಕಿಂತ ಹೆಚ್ಚು ಕೆಟ್ಟದ್ದಾಗುವಂತೆ ಮಾಡಿದಾಗ ನೀವು ಆಕ್ಷೇಪಿಸುತ್ತೀರಿ. ಮತ್ತೆ ನೀವು ಕೇಳಿದ್ದನ್ನು ನಿಮಗೆ ಕೊಡದಿದ್ದರೆ "ಏನು! ನನಗೆ ಅವಶ್ಯವಿದೆ ಎಂದು ಅವನಿಗೆ ಹೇಳಿದ್ದೆ, ಅವನು ಅದನ್ನು ನನಗೆ ಕೊಟ್ಟಿಲ್ಲ" ಎಂದು ಆಕ್ಷೇಪಿಸುತ್ತೀರಿ.

ಇವೆರಡೂ ಸಂದರ್ಭಗಳಲ್ಲಿ ನೀವು ಆಕ್ಷೇಪಿಸುತ್ತೀರಿ, ಬಡ ಭಗವಂತ ಆಪಾದನೆಗೊಳಗಾಗಿರುತ್ತಾನೆ.

ಅದೆಲ್ಲದರ ಬದಲಾಗಿ, ಕೇವಲ ಸರಳರಾಗಿ, ನಿಮ್ಮೊಳಗೆ ಅಭೀಪ್ಸೆಯನ್ನಿಟ್ಟುಕೊಂಡಿದ್ದರೆ, ಉತ್ಕಟೇಚ್ಛೆ ಹೊಂದಿದ್ದರೆ, ನಿಮ್ಮ ಸತ್ತೆಯ ದೈವೀ ಸತ್ಯವಾಗಿರುವ, ಎಲ್ಲ ವಸ್ತು–ವಿಷಯಗಳ ದೈವೀ ಮೂಲವಾಗಿರುವ, ಪರಮೋಚ್ಚ ಒಳ್ಳೆಯದಾಗಿರುವ, ನಿಮ್ಮ ಎಲ್ಲ ಆಸೆಗಳಿಗೆ ಉತ್ತರ ನೀಡುವ, ಎಲ್ಲ ಸಮಸ್ಯೆಗಳ ದೈವೀ ಪರಿಹಾರವಾಗಿರುವ ಆ 'ತತ್'ನ್ನು ನೀವು ಹೆಚ್ಚು ಕಡಿಮೆ ಸ್ಪಷ್ಟವಾಗಿ ಕಲ್ಪಿಸಿಕೊಂಡಿದ್ದರೆ, ನಿಮ್ಮಲ್ಲಿ ಈ ಗಾಢ ಆವಶ್ಯಕತೆ ಇದ್ದರೆ, ಮತ್ತು ಅದನ್ನು ಸಿದ್ಧಿಸಿಕೊಳ್ಳಲು ಅಭೀಪ್ಸೆಪಟ್ಟರೆ, ನೀವು ಭಗವಂತನಿಗೆ "ನನಗೆ ಇದನ್ನು ಕೊಡು,



ಅದನ್ನು ಕೊಡು" ಇಲ್ಲವೆ "ನನಗೆ ಇದು ಬೇಕೇಬೇಕು, ನಾನದನ್ನು ದೊರಕಿಸಲೇಬೇಕು" ಎಂದು ಈ ನಂತರ ಭಗವಂತನಿಗೆ ಹೇಳುವುದಿಲ್ಲ. "ನನಗೆ ಅವಶ್ಯವಾಗಿರುವುದನ್ನು ಮಾಡು ಮತ್ತು ನನ್ನ ದೈವೀ ಸತ್ಯದತ್ತ ನನ್ನನ್ನು ಕರೆದುಕೊಂಡು ಹೋಗು. ನಿನ್ನ ಪರಮೋಚ್ಚ ದೈವೀ ವಿವೇಕದಿಂದ ಯಾವುದು ನನಗೆ ಅವಶ್ಯವಿದೆ ಎಂದು ಕಂಡುಕೊಳ್ಳುವೆಯೋ ಅದನ್ನು ನನಗೆ ಕೊಡು" ಎಂದು ಅವನಿಗೆ ಹೇಳುವಿರಿ.

ಆಗ ನೀವು ತಪ್ಪು ಮಾಡದಿರುವುದು ನಿಶ್ಚಿತ, ಮತ್ತು ಅವನು ನಿಮಗೆ ಹಾನಿಕಾರಕವಾಗುವಂತಹ ಏನನ್ನೂ ಕೊಡುವುದಿಲ್ಲ.

ಆದರೆ "ನನಗೆ ಇದು ಬೇಕಾಗಿದೆ, ಅದನ್ನು ನನಗೆ ಕೊಡು" ಎಂದು ಹೇಳುವುದಕ್ಕಿಂತ ಮೊದಲನೆಯ ಹೆಜ್ಜೆ ಅದಾಗಲೆ ನಿಜವಾದುದರ ಹತ್ತಿರ ಸಾಗುವುದಾಗಿದೆ. ಏಕೆಂದರೆ ಅತಿ ಕಡಿಮೆ ಜನರು ತಮಗೆ ನಿಜವಾಗಿ ಏನು ಬೇಕಾಗಿದೆ ಎಂಬುದನ್ನು ತಿಳಿದುಕೊಂಡಿರುತ್ತಾರೆ – ಅಂತಹರ ಸಂಖ್ಯೆ ಅತಿ ಕಡಿಮೆ. ಮತ್ತು ಅದಕ್ಕೆ ಪ್ರಮಾಣವೆಂದರೆ ಅವರು ಯಾವಾಗಲೂ ತಮ್ಮ ಆಸೆಗಳ ನೆರವೇರಿಕೆ ಕಂಡುಕೊಳ್ಳುವುದನ್ನು ಬೆಂಬತ್ತಿರುತ್ತಾರೆ, ಅವರ ಎಲ್ಲ ಪ್ರಯತ್ನ ಅದರತ್ತ ವಾಲಿರುತ್ತದೆ. ಮತ್ತು ಅವರ ಆಸೆ ನೆರವೇರಿದ ಪ್ರತಿಸಲ ಅವರಿಗೆ ನಿರಾಶೆ ಯಾಗುತ್ತದೆ, ಅವರು ಇನ್ನೊಂದು ಆಸೆಯ ನೆರವೇರಿಕೆಯತ್ತ ಸಾಗುತ್ತಾರೆ.

ಬಹಳಷ್ಟು ಅರಸಿದ ನಂತರ, ಹಲವಾರು ತಪ್ಪುಗಳನ್ನು ಮಾಡಿದ ನಂತರ, ಬಹಳಷ್ಟು ವೇದನೆ ಅನುಭವಿಸಿ ನಿರಾಶೆಗೊಳಗಾದ ನಂತರ, ಕೆಲವೊಮ್ಮೆ ಮನುಷ್ಯ ಜಾಣನಾಗಲು ಪ್ರಾರಂಭಿಸುತ್ತಾನೆ ಮತ್ತು ಇದೆಲ್ಲದರ ಹೊರಗೆ, ಎಂದರೆ ತನ್ನದೇ ಅಜ್ಞಾನದಿಂದ ಹೊರಗೆ ಬರಲು ಮಾರ್ಗವಿದೆಯೆ ಎಂಬ ಕುತೂಹಲದಿಂದ ಯೋಚಿಸುತ್ತಾನೆ.

ಮತ್ತು ಆಗ, ಆ ಕ್ಷಣದಲ್ಲಿ ಮನುಷ್ಯ ಹೀಗೆ ಮಾಡಬಲ್ಲ. (ಶ್ರೀಮಾತೆಯವರು ತಮ್ಮ ತೋಳುಗಳನ್ನು ತೆರೆದು ತೋರಿಸುತ್ತಾರೆ) "ನಾನಿಲ್ಲಿದ್ದೇನೆ, ನನ್ನನ್ನು ಕೈಗೆತ್ತಿಕೋ, ಮತ್ತು ನಿಜವಾದ ಮಾರ್ಗದಲ್ಲಿ ನನ್ನನ್ನು ಮುನ್ನಡೆಸಿಕೊಂಡು ಹೋಗು" ಎಂದು ಭಗವಂತನಿಗೆ ಹೇಳಬಲ್ಲ.

ಆಗ ಎಲ್ಲವೂ ಸುಸೂತ್ರವಾಗುತ್ತದೆ.

*

ಮನುಷ್ಯನಲ್ಲಿ ಯಾವ ಜ್ಞಾನವೂ ಇಲ್ಲದೆ ಇದ್ದಾಗಲೂ ಕೂಡ ದೈವೀ ಕೃಪೆಯಲ್ಲಿ ಅವನಿಗೆ ವಿಶ್ವಾಸವಿದ್ದರೆ, ದೈವೀಕೃಪೆಯೆಂಬ ಏನೋ ಒಂದು ಜಗತ್ತಿನಲ್ಲಿದೆ ಮತ್ತು ಅದೇ ಪ್ರಾರ್ಥನೆಗೆ, ಅಭೀಪ್ಸೆಗೆ, ಆವಾಹನಕ್ಕೆ ಉತ್ತರ ನೀಡುತ್ತದೆ ಎಂಬ ನಂಬಿಕೆಯಿದ್ದರೆ, ಆಗ ಮನುಷ್ಯ ಮಾನಸಿಕ ರಚನೆಯನ್ನು ಮಾಡಿಕೊಂಡು ದೈವೀಕೃಪೆಗೆ ಅರ್ಪಿಸಿದರೆ ಮತ್ತು ಅದರಲ್ಲಿ ವಿಶ್ವಾಸವಿರಿಸಿದರೆ, ಅದಕ್ಕೆ ಮಧ್ಯಸ್ಥಿಕೆ ವಹಿಸಲು ಕೇಳಿಕೊಂಡು ಅದು ಮಧ್ಯಸ್ಥಿಕೆ ವಹಿಸುತ್ತದೆ ಎಂಬ ನಂಬಿಕೆಯನ್ನು ಹೊಂದಿದ್ದರೆ, ಆಗ, ನಿಜವಾಗಿ ಆವನು ಯಶಸ್ಸು ಪಡೆಯುವ ಅವಕಾಶವಿರುತ್ತದೆ.

ಪ್ರಯತ್ನಪಡಿರಿ, ನೀವು ನಿಶ್ಚಿತವಾಗಿ ಪರಿಣಾಮ ಕಂಡುಕೊಳ್ಳುವಿರಿ.

**ಪ್ರಶ್ನೆ :** *ಆದರೆ, ಶ್ರೀಮಾತೆಯವರೆ, ನಿಷ್ಕಪಟನಾಗಿ ದೈವೀಕೃಪೆಯ ಮಧ್ಯಸ್ಥಿಕೆಗಾಗಿ ಪ್ರಾರ್ಥನೆ ಮಾಡಿದ ಮನುಷ್ಯ ಒಂದು ವಿಶಿಷ್ಟ ಪರಿಣಾಮವನ್ನು ನಿರೀಕ್ಷಿಸುವುದಿಲ್ಲವೆ?*

**ಶ್ರೀಮಾತೆ :** ಕ್ಷಮಿಸಬೇಕು, ಅದು ಪ್ರಾರ್ಥನೆಯ ಆಶಯ(tenor)ದ ಮೇಲೆ ಅವಲಂಬಿಸಿರುತ್ತದೆ. ಮನುಷ್ಯ ದೈವೀಕೃಪೆಯನ್ನು ಇಲ್ಲವೆ ಭಗವಂತನನ್ನು ಸರಳವಾಗಿ ಆವಾಹನೆ ಮಾಡಿದಾಗ ಮತ್ತು ತನ್ನನ್ನು ಅವನ ಕೈಗಳಲ್ಲಿರಿಸಿದಾಗ, ಅವನು ವಿಶಿಷ್ಟ ಪರಿಣಾಮವನ್ನು ನಿರೀಕ್ಷಿಸುವುದಿಲ್ಲ. ಒಂದು ವಿಶಿಷ್ಟ ಪರಿಣಾಮವನ್ನು ನಿರೀಕ್ಷಿಸುವುದಕ್ಕಾಗಿ ಅವನು ತನ್ನ ಪ್ರಾರ್ಥನೆಗೆ ಒಂದು ರೂಪ ಕೊಡಬೇಕು, ಏನೋ ಒಂದಕ್ಕಾಗಿ ಬೇಡಿಕೊಳ್ಳಬೇಕು. ದೈವೀಕೃಪೆಗಾಗಿ ನಿಮ್ಮಲ್ಲಿ ಕೇವಲ ಶ್ರೇಷ್ಠ ಅಭೀಪ್ಸೆಯಿದ್ದರೆ ಮತ್ತು ಅದನ್ನು ಆಹ್ವಾನಿಸಿದರೆ, ಅದಕ್ಕೆ ಮೊರೆಯಿಟ್ಟರೆ, ನಿಖರವಾಗಿ ಯಾವುದನ್ನೂ ಬೇಡದಿದ್ದರೆ, ತಾನು ಮಾಡಬೇಕಾದುದನ್ನು ದೈವೀಕೇಪೆಯೇ ಆಯ್ದುಕೊಳ್ಳುತ್ತದೆ, ಅದನ್ನು ಆಯ್ದುಕೊಳ್ಳುವವರು ನೀವಾಗಿರುವುದಿಲ್ಲ.

**ಪ್ರಶ್ನೆ :** *ಅದು ಹೆಚ್ಚು ಒಳ್ಳೆಯದಾಗಿರುತ್ತದೆಯಲ್ಲವೆ?*

**ಶ್ರೀಮಾತೆ :** ಅಹಾ! ಅದು ಬೇರೆ ಇನ್ನೊಂದು ಪ್ರಶ್ನೆ.

ಕಾರಣ ಅದು ಬಹುಶಃ ಗುಣಮಟ್ಟದಲ್ಲಿ ಉಚ್ಚತರವಾದದ್ದು. ಆದಾಗ್ಯೂ ಮನುಷ್ಯನಿಗೆ ಏನಾದರೂ ನಿಖರವಾಗಿ ಬೇಕಾಗಿದ್ದರೆ, ಅದಕ್ಕೆ ಒಂದು ರೂಪ ಕೊಡುವುದು ಹೆಚ್ಚು ಒಳ್ಳೆಯದು. ದೈವೀಕೃಪೆಯನ್ನು ಆವಾಹನ ಮಾಡುವುದಕ್ಕೆ



ವಿಶಿಷ್ಟ ಕಾರಣವಿದ್ದರೆ ಅದನ್ನು ನಿಖರವಾದ ಮತ್ತು ಸ್ಪಷ್ಟವಾದ ರೂಪದಲ್ಲಿರಿಸುವುದು ಹೆಚ್ಚು ಒಳ್ಳೆಯದು.

ಮನುಷ್ಯ ಸಂಪೂರ್ಣ ಶರಣಾಗತಿ ಮಾಡಿಕೊಂಡ ಸ್ಥಿತಿಯಲ್ಲಿದ್ದರೆ ಮತ್ತು ತನ್ನನ್ನು ಇಡಿಯಾಗಿ ಕೊಟ್ಟುಕೊಂಡರೆ, ಸರಳ ರೀತಿಯಲ್ಲಿ ತನ್ನನ್ನು ದೈವೀಕೃಪೆಗೆ ಅರ್ಪಿಸಿಬಿಟ್ಟರೆ ಮತ್ತು ಅದಕ್ಕೆ ಇಷ್ಟವಾದುದನ್ನು ಕೈಕೊಳ್ಳಲು ಅನುವು ಮಾಡಿಕೊಟ್ಟರೆ, ಅದು ಅತ್ಯಂತ ಒಳ್ಳೆಯದು. ಆದರೆ ನಂತರ ಅದು ಕೈಕೊಂಡದ್ದನ್ನು ಪ್ರಶ್ನಿಸಬಾರದು. "ಓ, ಇದನ್ನು ಹೊಂದುವ ವಿಚಾರವನ್ನಿಟ್ಟುಕೊಂಡು ನಾನದನ್ನು ಮಾಡಿದೆ" ಎಂದು ಹೇಳಕೂಡದು. ಏಕೆಂದರೆ ಮನುಷ್ಯ ನಿಜವಾಗಿ ಏನನ್ನಾದರೂ ದೊರಕಿಸುವ ವಿಚಾರವನ್ನಿಟ್ಟುಕೊಂಡಿದ್ದರೆ ಎಲ್ಲ ನಿಷ್ಕಾಪಟ್ಯದಿಂದ, ಸರಳ ರೀತಿಯಲ್ಲಿ, ತಾನು ಕಂಡುಕೊಂಡಂತೆ ಅದಕ್ಕೆ ರೂಪ ಕೊಡುವುದು ಹೆಚ್ಚು ಒಳ್ಳೆಯದು. ಅನಂತರ ಅದನ್ನು ಆ ರೀತಿಯಲ್ಲಿ ಕೈಕೊಳ್ಳಬೇಕೋ ಇಲ್ಲವೆ ಕೈಕೊಳ್ಳಬಾರದೋ ಎಂಬುದನ್ನು ದೈವೀಕೃಪೆ ಆಯ್ದುಕೊಳ್ಳುವುದು. ಆದರೆ ಯಾವುದೇ ಸಂದರ್ಭದಲ್ಲಿ ಮನುಷ್ಯ ತನಗೆ ಬೇಕಾದುದಕ್ಕೆ ಒಂದು ರೂಪ ಕೊಡುತ್ತಾನೆ, ಹಾಗೆ ಮಾಡುವುದರಲ್ಲಿ ಯಾವ ಹಾನಿಯೂ ಇಲ್ಲ.

ವಿನಂತಿಸಿಕೊಂಡದ್ದನ್ನು ಅನುಗ್ರಹಿಸದೆ ಹೋದ ಸಂದರ್ಭದಲ್ಲಿ ಮತ್ತು ಅದರಿಂದಾಗಿ ಮನುಷ್ಯ ಬಂಡಾಯವೆದ್ದಾಗ ಪರಿಸ್ಥಿತಿ ಕೆಟ್ಟದ್ದಾಗಿರುತ್ತದೆ. ಆಗ ಸ್ವಾಭಾವಿಕವಾಗಿ ಅದು ಕೆಟ್ಟದ್ದಾಗಿರುತ್ತದೆ. ಆ ಕ್ಷಣದಲ್ಲಿ ಮನುಷ್ಯ ತನ್ನಲ್ಲಿದ್ದ ಆಸೆ ಇಲ್ಲವೆ ಅಭೀಪ್ಸೆ ಬಹಳ ಜ್ಞಾನೋದಯ ಪಡೆದದ್ದಾಗಿರಲಿಕ್ಕಿಲ್ಲ ಮತ್ತು ಬಹುಶಃ ನಿಖರವಾಗಿ ತನಗೆ ಒಳ್ಳೆಯದಾದ್ದನ್ನು ಬೇಡಿರಲಿಕ್ಕಿಲ್ಲ ಎಂದು ತಿಳಿದುಕೊಳ್ಳಬೇಕು. ಆಗ ಅವನು ವಿವೇಕಿಯಾಗಬೇಕು ಮತ್ತು ಸರಳ ರೀತಿಯಲ್ಲಿ "ಸರಿ, ಭಗವಂತ, ನಿನ್ನ ಸಂಕಲ್ಪದಂತಾಗಲಿ" ಎಂದು ಹೇಳಬೇಕು. ಆದರೆ ಮನುಷ್ಯ ಆಂತರಿಕ ಗ್ರಹಿಕೆ ಹಾಗೂ ಆದ್ಯತೆ ನೀಡುವಿಕೆ ಹೊಂದಿರುವವರೆಗೆ ಅದಕ್ಕೆ ರೂಪಕೊಡುವುದರಲ್ಲಿ ಹಾನಿಯೇನಿಲ್ಲ. ಅದು ಬಹಳ ಸ್ವಾಭಾವಿಕ ಚಲನೆ.

ಉದಾಹರಣೆಗೆ ಮನುಷ್ಯ ಮೂರ್ಖತನದ ಕಾರ್ಯವನ್ನಾಗಲಿ, ಇಲ್ಲವೆ ತಪ್ಪನ್ನಾಗಲಿ ಮಾಡಿದಾಗ, ಮತ್ತೆ ಅಂತಹದನ್ನು ಎಂದೂ ಮಾಡದೆ ಇರಲು, ನಿಖರವಾಗಿ ನಿಷ್ಕಾಪಟ್ಯದಿಂದ ಬಯಸಿದರೆ ಮತ್ತು ಅದಕ್ಕಾಗಿ ಅವನು ಬೇಡಿಕೊಂಡರೆ ಅದರಲ್ಲಿ ಯಾವ ಹಾನಿಯೂ ಇರುವುದಿಲ್ಲ. ವಾಸ್ತವದಲ್ಲಿ,

ಮನುಷ್ಯ ಅದನ್ನು ನಿಜವಾದ ಆಂತರಿಕ ನಿಷ್ಕಾಪಟ್ಯದಿಂದ ಬೇಡಿದಾಗ ಅನುಗ್ರಹೀತನಾಗುವ ಅವಕಾಶ ಹೆಚ್ಚಾಗಿರುತ್ತದೆ.

ಭಗವಂತ ನಿಮ್ಮನ್ನು ವಿರೋಧಿಸಲು ಇಷ್ಟಪಡುತ್ತಾನೆಂದು ಯೋಚಿಸಕೂಡದು. ಅವನಿಗೆ ಅಂತಹದರಲ್ಲಿ ಎಳ್ಳಷ್ಟೂ ಆಸಕ್ತಿ ಇರುವುದಿಲ್ಲ! ನಿಮಗೆ ಯಾವುದರಿಂದ ಒಳ್ಳೆಯದಾಗುತ್ತದೆ ಎಂಬುದನ್ನು ಅವನು ನಿಮಗಿಂತ ಹೆಚ್ಚು ಒಳ್ಳೆಯ ರೀತಿಯಲ್ಲಿ ನೋಡಬಲ್ಲನು, ಆದರೆ ಸಂಪೂರ್ಣವಾಗಿ ಅತ್ಯಗತ್ಯದ್ದಾದಾಗ ಮಾತ್ರ ನಮ್ಮ ಅಭೀಪ್ಸೆಯನ್ನು ವಿರೋಧಿಸುತ್ತಾನೆ. ಹಾಗಿಲ್ಲದಿದ್ದರೆ ನೀವು ಬೇಡಿದ್ದನ್ನು ನೀಡಲು ಅವನು ಸದಾ ಸಿದ್ಧನಾಗಿರುತ್ತಾನೆ.

**(8/122–25, 254–55)** **– ಶ್ರೀಮಾತೆ**

*

## ಪ್ರಾರ್ಥನೆ ಮತ್ತು ನಿಯತಿವಾದ

ಸಾಕಷ್ಟು ನಿಷ್ಕಾಪಟ್ಯದ್ದಾದ ಹಾಗೂ ಗಾಢವಾದ ಪ್ರಾರ್ಥನೆ ತೆರೆದುಕೊಳ್ಳುತ್ತಿರುವ ಮಾರ್ಗವನ್ನು ಬದಲಿಸುವ ಕ್ಷಮತೆ ಹೊಂದಿಲ್ಲ ಎಂದು ಯಾರು ಹೇಳಬಲ್ಲರು?

ಇದರರ್ಥ ಎಲ್ಲವೂ ಸಾಧ್ಯವಿದೆ.

ಈಗ ಮನುಷ್ಯ ಸಾಕಷ್ಟು ಅಭೀಪ್ಸೆ ಹೊಂದಿರಬೇಕು ಮತ್ತು ಗಾಢ ಪ್ರಾರ್ಥನೆ ಮಾಡಬೇಕು. ಅದನ್ನು ಕೈಕೊಳ್ಳುವ ಅವಕಾಶವನ್ನು ಮನುಷ್ಯನ ಸ್ವಭಾವಕ್ಕೆ ಕೊಡಲಾಗಿದೆ. ಅದು ಮಾನವ ಸ್ವಭಾವಕ್ಕೆ ಕೊಡಲಾದ ದೈವೀಕೃಪೆಯ ಅದ್ಭುತ ಕಾಣಿಕೆಗಳಲ್ಲೊಂದು. ಮನುಷ್ಯ ಅದನ್ನು ಹೇಗೆ ಉಪಯೋಗಿಸಿಕೊಳ್ಳ–ಬೇಕೆಂಬುದನ್ನು ಮಾತ್ರ ತಿಳಿದಿಲ್ಲ.

ಅತ್ಯಂತ ಸಂಪೂರ್ಣ ನಿಯತಿವಾದಗಳು ಅಡ್ಡದಾರಿಯಲ್ಲಿ ಇರುವುದು ಕಂಡುಬಂದಾಗಲೂ ಅವುಗಳನ್ನು ಹೇಗೆ ದಾಟಿ ಹೋಗಬೇಕು ಮತ್ತು ಪ್ರಜ್ಞೆಯ ಅತ್ಯುಚ್ಚ ಬಿಂದುವನ್ನು ಹೇಗೆ ತಲುಪಬೇಕು ಎಂಬುದನ್ನು ಮನುಷ್ಯ ತಿಳಿದುಕೊಂಡಿದ್ದರೆ, ತೋರಿಕೆಗೆ ಪರಿಪೂರ್ಣವಾಗಿ ನಿರ್ಧಾರಿತವಾಗಿವೆ ಎಂಬ ವಿಷಯಗಳು ಬದಲಾಗುವಂತೆ ಮಾಡಬಲ್ಲನು ಎಂದು ಹೇಳಬಹುದಾಗಿದೆ. ಹಾಗಾಗಿ ಅದನ್ನು ನೀವು ನಿಮಗಿಷ್ಟವಾದ ಯಾವುದೇ ಹೆಸರಿನಿಂದ



ಕರೆಯಬಹುದು. ಆದರೆ ಅದೊಂದು ಬಗೆಯ ಪರಿಪೂರ್ಣ ಸ್ವಾತಂತ್ರ್ಯದಿಂದ ಕೂಡಿರುವ ಪರಿಪೂರ್ಣ ನಿಯತಿವಾದವಾಗಿದೆ. ನೀವು ಅದರೊಳಗಿಂದ ಯಾವುದೇ ರೀತಿಯಲ್ಲಿ ನಿಮ್ಮನ್ನು ಹೊರಗೆಳೆದುಕೊಳ್ಳಬಹುದು. ಆದರೆ ಅದಿರುವುದು ಹಾಗೆ . . .

ನೀವು ನಿಯತಿವಾದ (determinism) ಎಂದು ಹೇಳಿದಾಗ, ಹಾಗೆಯೇ ಸ್ವಾತಂತ್ರ್ಯ ಎಂದು ಹೇಳಿದಾಗ ಕೇವಲ ಶಬ್ದಗಳನ್ನು ಹೇಳುತ್ತೀರಿ. ಅದೆಲ್ಲವೂ ನಿಜವಾಗಿ ನಿಮ್ಮೊಳಗಿರುವುದರ, ನಿಮ್ಮ ಸುತ್ತಲಿರುವುದರ ಮತ್ತು ಎಲ್ಲೆಡೆಯಲ್ಲೂ ಇರುವುದರ ಬಹಳ ಅಪರಿಪೂರ್ಣ, ಬಹಳ ಅಂದಾಜಿನ, ಬಹಳ ದುರ್ಬಲ ವರ್ಣನೆ. ಮತ್ತು ವಿಶ್ವವೆಂದರೆ ಏನಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸುವುದಕ್ಕೆ ಶಕ್ತರಾದಾಗ, ನೀವು ನಿಮ್ಮ ಮಾನಸಿಕ ಸೂತ್ರಗಳಿಂದ ಹೊರಬರಬೇಕು, ಹಾಗಿಲ್ಲದೆ ಹೋದರೆ ನೀವು ಏನನ್ನೂ ತಿಳಿದುಕೊಳ್ಳಲಾರಿರಿ.

ಸತ್ಯ ಹೇಳುವುದಾದರೆ, ಈ ಪರಿಪೂರ್ಣ ನಿಷ್ಕಾಪಟ್ಯದ ಅಭೀಪ್ಸೆಯೊಂದಿಗೆ ಇಲ್ಲವೆ ಈ ಸಾಕಷ್ಟಾದ ಪ್ರಾರ್ಥನೆಯೊಂದಿಗೆ ನೀವು ಕೇವಲ ಒಂದೇ ಕ್ಷಣ ಜೀವಿಸಿದಾಗ, ಅತಿ ಚಿಕ್ಕ ಕ್ಷಣ ಮಾತ್ರದಲ್ಲಿಯಾದರೂ, ಧ್ಯಾನದಲ್ಲಿ ಗಂಟೆಗಳನ್ನು ಕಳೆದಾಗ ತಿಳಿದುಕೊಳ್ಳಬಹುದಾದುದಕ್ಕಿಂತ ಹೆಚ್ಚಿನದನ್ನು ತಿಳಿದುಕೊಳ್ಳುತ್ತೀರಿ.

**ಪ್ರಶ್ನೆ :** *ನೀವು ಇಲ್ಲಿ "ನಾವು ಕರ್ಮದ ಸರಪಳಿಗೆ ಕಟ್ಟಿಹಾಕಿಕೊಂಡಿದ್ದೇವೆ" ಎಂದು ಹೇಳಿರುವಿರಿ. ಆದರೆ ಕೆಲವೊಮ್ಮೆ ದೈವೀಕೃಪೆ ಕಾರ್ಯಕೈಕೊಂಡಾಗ ಅದನ್ನು ವಿರೋಧಿಸುತ್ತದೆ.*

**ಶ್ರೀಮಾತೆ :** ಸಂಪೂರ್ಣವಾಗಿ, ದೈವೀಕೃಪೆ ಕರ್ಮವನ್ನು ಸಂಪೂರ್ಣವಾಗಿ ವಿರೋಧಿಸುತ್ತದೆ, ತಿಳಿಯಿತೆ! ಸೂರ್ಯನ ಬಿಸಿಲಿನಲ್ಲಿಟ್ಟ ಬೆಣ್ಣೆಯ ಹಾಗೆ ಅದು ಕರಗಿ ಹೋಗುತ್ತದೆ.

. . . ನಿಮ್ಮಲ್ಲಿ ಸಾಕಷ್ಟು ನಿಷ್ಕಾಪಟ್ಯವಿರುವ ಅಭೀಪ್ಸೆ ಇಲ್ಲವೆ ಗಾಢವಾದ ಪ್ರಾರ್ಥನೆ ಇದ್ದರೆ ನೀವು ನಿಮ್ಮಲ್ಲಿ ದೈವಿಕವಾದ ಏನೋ ಒಂದನ್ನು ಕೆಳಗಿಳಿಸಿತರುತ್ತೀರಿ, ಅದು ಎಲ್ಲವನ್ನೂ ಬದಲಾಯಿಸುತ್ತದೆ – ನಿಜವಾಗಿ ಅದು ಎಲ್ಲವನ್ನೂ ಬದಲಾಯಿಸಿಬಿಡುತ್ತದೆ. ಅತಿ ಸೀಮಿತವಾದದ್ದೆನಿಸುವ ಉದಾಹರಣೆಯನ್ನು ಕೊಡಬಹುದು. ಅದು ಅತಿ ಚಿಕ್ಕದಾದದ್ದು, ಆದರೆ

ವಿಷಯಗಳನ್ನು ನೀವು ಸರಿಯಾಗಿ ತಿಳಿದುಕೊಳ್ಳುವಂತೆ ಮಾಡುವುದು. ಒಂದು ಕಲ್ಲು ಯಾಂತ್ರಿಕವಾಗಿ ಮೇಲಿನಿಂದ ಕೆಳಗೆ ಬೀಳುತ್ತದೆ ಅಥವಾ ಒಂದು ಹೆಂಟೆ ಬೀಳುತ್ತದೆ ಎಂದು ತಿಳಿಯುವ. ಸಡಿಲುಗೊಂಡಿದ್ದರೆ ಅದು ಬಿದ್ದುಬಿಡುತ್ತದೆಯಲ್ಲವೆ? ಆದರೆ ಅಲ್ಲಿ ಹಾದು ಹೋಗುತ್ತಿರುವ ಯಾರಾದರೊಬ್ಬರಿಂದ ಪ್ರಾಣಿಕ ಇಲ್ಲವೆ ಮಾನಸಿಕ ನಿಯತಿವಾದ ಬಂದರೆ, ಅವನು ಅದು ಕೆಳಗೆ ಬೀಳಬಾರದೆಂದು ತನ್ನ ಕೈಗಳನ್ನು ಚಾಚಿದಾಗ, ಅವನ ಕೈಗಳಲ್ಲಿ ಬೀಳುತ್ತದೆ, ನೆಲದ ಮೇಲೆ ಬೀಳುವುದಿಲ್ಲ. ಹೀಗೆ ಅವನು ಆ ಕಲ್ಲಿನ ಅಥವಾ ಹೆಂಟೆಯ ಅದೃಷ್ಟವನ್ನು ಬದಲಾಯಿಸಿರುತ್ತಾನೆ. ಅಲ್ಲಿ ಮತ್ತೊಂದು ನಿಯತಿವಾದ ಪ್ರವೇಶಿಸಿರುತ್ತದೆ. ಆ ಕಲ್ಲು ಯಾರೋ ಒಬ್ಬರ ತಲೆಯ ಮೇಲೆ ಬಿದ್ದು ಅವನನ್ನು ಸಾವಿಗೀಡು ಮಾಡುವುದರ ಬದಲಾಗಿ ಅದೃಷ್ಟ ಬದಲಾಯಿಸಿದವನ ಕೈಗಳಲ್ಲಿ ಬೀಳುತ್ತದೆ. ಹೆಚ್ಚು ಕಡಿಮೆ ಅಪ್ರಜ್ಞೆಯಿರುವ ಯಾಂತ್ರಿಕತೆಯಲ್ಲಿ ಪ್ರಜ್ಞಾಪೂರ್ಣ ಸಂಕಲ್ಪವಿರುವ ಮತ್ತೊಂದು ಸ್ತರದಿಂದ ಬಂದ ಮಧ್ಯಸ್ಥಿಕೆ ಇದಾಗಿರುತ್ತದೆ.

ನಾನು ಇದೀಗ ಹೇಳಿದ ಹಾಗೆ ಸಾಕಷ್ಟು ನಿಷ್ಕಾಪಟ್ಯದ್ದಾಗಿರುವ ಅಭೀಪ್ಸೆ ಇಲ್ಲವೆ ಸಾಕಷ್ಟು ಗಾಢವಾದ ಪ್ರಾರ್ಥನೆ ಬೀಗದ ಕೈಯಾಗಿರುತ್ತದೆ. ನಾನು 'ಇಲ್ಲವೆ' ಎಂದು ಹೇಳಿದೆ ಆದರೆ ಅಲ್ಲಿ 'ಇಲ್ಲವೆ' ಇರಲಿಕ್ಕಿಲ್ಲ ಎಂದು ಯೋಚಿಸುತ್ತೇನೆ. ಕೆಲವು ಜನರಿರುತ್ತಾರೆ, ಅವರು ಒಂದನ್ನು ಇನ್ನೊಂದಕ್ಕಿಂತ ಹೆಚ್ಚು ಇಷ್ಟಪಡುತ್ತಾರೆ ಆದರೆ ಅವೆರಡಕ್ಕೂ ಜಾದುವಿನ ಸಾಮರ್ಥ್ಯವಿದೆ, ಅದನ್ನು ಹೇಗೆ ಉಪಯೋಗಿಸಬೇಕು ಎಂಬುದನ್ನು ನೀವು ತಿಳಿದುಕೊಳ್ಳಬೇಕು.

ಅವೆರಡರಲ್ಲಿಯೂ ಬಹಳ ಸುಂದರವಾದದ್ದೇನೋ ಒಂದಿದೆ, ಅದನ್ನು ಕುರಿತು ನಾನು ಒಂದು ದಿನ ನಿಮಗೆ ಹೇಳುವೆ. ಅಭೀಪ್ಸೆಯಲ್ಲಿ ಏನಿದೆ, ಪ್ರಾರ್ಥನೆಯಲ್ಲಿ ಏನಿದೆ, ಅವೆರಡೂ ಏಕೆ ಸುಂದರವಾಗಿವೆ ಎಂಬುದನ್ನು ಕುರಿತು ಹೇಳುವೆ.

ಕೆಲವರಿಗೆ ಪ್ರಾರ್ಥನೆ ಇಷ್ಟವಾಗಿರುವುದಿಲ್ಲ. ಅವರು ತಮ್ಮ ಹೃದಯದಾಳದಲ್ಲಿ ಪ್ರವೇಶಿಸಿ ನೋಡಿದಾಗ ಅದು ಗರ್ವವಾಗಿರುತ್ತದೆಂಬುದನ್ನು ಕಂಡುಕೊಳ್ಳುತ್ತಾರೆ – ಅಲ್ಲಿ ಅದಕ್ಕಿಂತಲೂ ಕೆಟ್ಟದಾದ ಜಂಬವಿರುತ್ತದೆ. ಅವರು ಪ್ರಯತ್ನಿಸುತ್ತಾರೆ, ಆದರೆ, ಅಭೀಪ್ಸೆಪಡಲಾರರು, ಅದು ಏಕೆಂದರೆ ಅವರಲ್ಲಿ ವಿನಮ್ರತೆಯ ಜ್ವಾಲೆಯಾಗಲಿ, ಸಂಕಲ್ಪದ ಜ್ವಾಲೆಯಾಗಲಿ ಇರುವುದಿಲ್ಲ.



ಅವೆರಡೂ ಅವಶ್ಯವಾಗಿವೆ. ಕರ್ಮವನ್ನು ಬದಲಿಸಲು ಮನುಷ್ಯನಲ್ಲಿ ಬಹಳ ಶ್ರೇಷ್ಠ ವಿನಮ್ರತೆ ಮತ್ತು ಬಹಳ ಶ್ರೇಷ್ಠ ಸಂಕಲ್ಪಗಳಿರಬೇಕು.

(5/89–93) – **ಶ್ರೀಮಾತೆ**

*

## ಪ್ರಾರ್ಥನೆ ಮತ್ತು ಅಭೀಪ್ಸೆ ಇವುಗಳ ನಡುವಿರುವ ಭಿನ್ನತೆ

**ಪ್ರಶ್ನೆ :** *ಪ್ರಾರ್ಥನೆ ಮತ್ತು ಅಭೀಪ್ಸೆ ಇವುಗಳ ನಡುವಿರುವ ಭಿನ್ನತೆಯೇನು?*

**ಶ್ರೀಮಾತೆ :** ಹಲವಾರು ಬಗೆಯ ಪ್ರಾರ್ಥನೆಗಳಿರುತ್ತವೆ.

ಕೇವಲ ಲೌಕಿಕ ವಿಷಯಗಳಿಗಾಗಿ ಯಾಂತ್ರಿಕವಾದ ಪ್ರಾರ್ಥನೆಯಿದೆ, ಅದನ್ನು ಕಲಿತುಕೊಂಡ ಶಬ್ದಗಳನ್ನುಪಯೋಗಿಸಿ ಮಾಡಲಾಗುತ್ತದೆ ಮತ್ತು ಯಾಂತ್ರಿಕವಾಗಿ ಪುನರುಚ್ಚರಿಸಲಾಗುತ್ತದೆ. ಅದಕ್ಕೆ ಅಷ್ಟೊಂದು ಪ್ರಾಮುಖ್ಯತೆಯೇನೂ ಇಲ್ಲ. ಅದಕ್ಕೆ ಕೇವಲ ಒಂದು ಪರಿಣಾಮವಿದೆ: ಆ ರೀತಿ ಪ್ರಾರ್ಥನೆ ಮಾಡುವವನ ಮನಸ್ಸು ಅಚಂಚಲವಾಗುತ್ತದೆ, ಏಕೆಂದರೆ ಪ್ರಾರ್ಥನೆಯನ್ನು ಹಲವಾರು ಸಲ ಪುನರುಚ್ಚರಿಸುವುದಿಂದ ಅದು ನೀವು ಸ್ಥಿರರಾಗುವಂತೆ ಮಾಡುತ್ತದೆ.

ಮನುಷ್ಯ ಬೇಡಿಕೊಳ್ಳಬೇಕೆಂದು ಬಯಸುವುದನ್ನು ನಿಖರವಾಗಿ ಅಭಿವ್ಯಕ್ತಗೊಳಿಸಲು ಸ್ವಯಂಪ್ರೇರಿತ ಸೂತ್ರ ರೂಪದಲ್ಲಿರುವ ಪ್ರಾರ್ಥನೆ ಇದೆ. ಮನುಷ್ಯ ಅದಕ್ಕಾಗಿ, ಇದಕ್ಕಾಗಿ, ಒಂದು ವಸ್ತುವಿಗಾಗಿ ಇಲ್ಲವೆ ಇನ್ನೊಂದು ವಸ್ತುವಿಗಾಗಿ ಪ್ರಾರ್ಥನೆ ಮಾಡುತ್ತಾನೆ, ಅವನು ಇನ್ನೊಬ್ಬರಿಗಾಗಿ, ಪರಿಸ್ಥಿತಿಯೊಂದಕ್ಕಾಗಿ, ತನಗಾಗಿ ಪ್ರಾರ್ಥನೆ ಮಾಡಬಲ್ಲ.

ಅಭೀಪ್ಸೆ ಮತ್ತು ಪ್ರಾರ್ಥನೆ ಇವು ಸಂಧಿಸುವ ಬಿಂದುವೊಂದಿದೆ, ಏಕೆಂದರೆ ಜೀವನಾನುಭವದಿಂದ ರೂಪುಗೊಂಡ ಸ್ವಯಂಪ್ರೇರಿತ ಪ್ರಾರ್ಥನೆಗಳಿವೆ: ಇವು ಸತ್ತೆಯ ಅಂತರಂಗದಲ್ಲಿ ಸಿದ್ಧಗೊಂಡು ಪುಟಿದು ಬಂದವುಗಳಾಗಿರುತ್ತವೆ, ಗಹನವಾದ ಅನುಭವದ ಅಭಿವ್ಯಕ್ತಿಯಾದ ಏನೋ ಒಂದಾಗಿರುವ ರೀತಿಯವಾಗಿರುತ್ತವೆ, ಆ ಅನುಭವಕ್ಕಾಗಿ ಧನ್ಯವಾದ ಅರ್ಪಿಸುವಂತಹವಾಗಿರುತ್ತವೆ ಇಲ್ಲವೆ ಅದರ ಮುಂದುವರಿಕೆಗಾಗಿ ಬೇಡುವ ಇಲ್ಲವೆ ಅದರ ವಿವರಣೆಯನ್ನೂ ಕೂಡ ಕೇಳುವಂತಹವಾಗಿರುತ್ತವೆ, ಅದು ನಿಜವಾಗಿ ಅಭೀಪ್ಸೆಗೆ ಬಹಳ ಹತ್ತಿರವಾಗಿರುತ್ತದೆ. ಆದರೆ ಅಭೀಪ್ಸೆ, ಅವಶ್ಯವಾಗಿ, ಶಬ್ದಗಳಲ್ಲಿ ರೂಪ

ತಾಳಿರುವುದಿಲ್ಲ, ಇಲ್ಲವೆ ಶಬ್ದಗಳಲ್ಲಿ ರೂಪುಗೊಂಡಿದ್ದಾಗ್ಯೂ ಅದು ಬಹುಮಟ್ಟಿಗೆ ಆವಾಹನೆ ನೀಡುವ ಚಲನೆಯಾಗಿರುತ್ತದೆ. ನೀವು ಒಂದು ವಿಶಿಷ್ಟ ಸ್ಥಿತಿಗಾಗಿ ಅಭೀಪ್ಸೆ ಪಡುತ್ತೀರಿ, ಉದಾಹರಣೆಗೆ ನಿಮ್ಮಲ್ಲಿ ಏನೋ ಒಂದನ್ನು ಕಂಡುಕೊಂಡಿರುತ್ತೀರಿ, ಅದು ನಿಮ್ಮ ಆದರ್ಶಕ್ಕೆ ಯೋಗ್ಯವಾಗಿರುವುದಿಲ್ಲ, ಅಂಧಕಾರದ ಹಾಗೂ ಅಜ್ಞಾನದ ಚಲನೆಯಾಗಿರುತ್ತದೆ, ಬಹುಶಃ ಅಲ್ಲಿ ಕೆಟ್ಟ ಭಾವನೆಯೂ ಇರಬಹುದು, ನೀವು ಸಿದ್ಧಿಸಿಕೊಳ್ಳಬೇಕಾದುದರೊಂದಿಗೆ ಸಾಮರಸ್ಯದಲ್ಲಿರುವುದಿಲ್ಲ, ಆಗ ಅದಕ್ಕೆ ಶಬ್ದಗಳಲ್ಲಿ ಸೂತ್ರರೂಪ ಕೊಡಬೇಕಾಗಿರುವುದಿಲ್ಲ, ಅಲ್ಲಿರುವ ಅಭೀಪ್ಸೆ ಪುಟಿದೆದ್ದು ಬರುವ ಜ್ವಾಲೆಯ ಹಾಗಿರುತ್ತದೆ, ಜೀವಂತ ಅನುಭವವನ್ನು ಅರ್ಪಿಸಿದ ಹಾಗಿರುತ್ತದೆ, ವಿಶಾಲಗೊಳ್ಳಲು, ವಿಸ್ತಾರವಾಗಲು, ಹೆಚ್ಚು ಸ್ಪಷ್ಟ ಹಾಗೂ ನಿಖರವಾಗಲು ಬೇಡಿಕೆಯನ್ನು ಹೊಂದಿರುತ್ತದೆ. ನಂತರ ಮನುಷ್ಯ ಅದನ್ನು ನೆನಪಿಸಿಕೊಳ್ಳಲು ಹಾಗೂ ತನ್ನ ಅನುಭವವನ್ನು ದಾಖಲಿಸಲು ಪ್ರಯತ್ನಿಸಿದರೆ ಶಬ್ದಗಳ ರೂಪದಲ್ಲಿರಿಸಬಹುದು. ಆದರೆ ಅಭೀಪ್ಸೆ ಯಾವಾಗಲೂ ಮೇಲಕ್ಕೇರಿ ಹೋಗುವ ಮತ್ತು ಮನುಷ್ಯ ತಾನಾಗಲು, ಕೈಕೊಳ್ಳಲು ಹಾಗೂ ದೊರಕಿಸಲು ಹೊಂದಿರುವ ಆಸೆಯನ್ನು ತನ್ನಲ್ಲಿ ಕೊಂಡೊಯ್ಯುವ ಜ್ವಾಲೆಯ ಹಾಗೆ ಪುಟಿದೆದ್ದು ಬರುತ್ತದೆ. ಇಲ್ಲಿ ನಾನು 'ಆಸೆ' ಶಬ್ದವನ್ನು ಉಪಯೋಗಿಸಿದ್ದೇನೆ, ಆದರೆ ನಿಜವಾಗಿ ಉಪಯೋಗಿಸಬೇಕಾಗಿದ್ದ ಶಬ್ದ ಅಭೀಪ್ಸೆ, ಏಕೆಂದರೆ ಅದಕ್ಕೆ ಆಸೆಯ ರೂಪವಾಗಲಿ ಇಲ್ಲವೆ ಗುಣವಾಗಲಿ ಇರುವುದಿಲ್ಲ.

ಅದು, ನಿಜವಾಗಿ, ಶುದ್ಧೀಕರಣಗೊಳಿಸುವ ಸಂಕಲ್ಪದ ಜ್ವಾಲೆಯ ಹಾಗಿರುತ್ತದೆ, ಅದು ತನ್ನ ಅಂತಸ್ಸಾರದಲ್ಲಿ ಸಿದ್ಧಿಸಿಕೊಳ್ಳಬೇಕಾದುದನ್ನು ಕೊಂಡೊಯ್ಯುತ್ತದೆ.

ಉದಾಹರಣೆಗೆ ವಿಷಾದಪಟ್ಟುಕೊಳ್ಳುವಂತಹ ಏನೋ ಒಂದನ್ನು ನೀವು ಮಾಡಿದ್ದರೆ, ಅದಕ್ಕೆ ಅಸಂತೋಷಕರ ಪರಿಣಾಮಗಳಿದ್ದರೆ, ಆ ಪರಿಣಾಮಗಳು ವಿಷಯಗಳನ್ನು ಕ್ಷೋಭೆಗೊಳಪಡಿಸುತ್ತಿದ್ದರೆ ಮತ್ತು ಹಲವಾರು ಜನರು ಅದರಲ್ಲಿ ಸಿಕ್ಕಿಹಾಕಿಕೊಳ್ಳುವಂತಾಗಿದ್ದರೆ ಹಾಗೂ ಇತರರ ಪ್ರತಿಕ್ರಿಯೆಗಳ ಬಗ್ಗೆ ನಿಮಗೆ ತಿಳಿದಿರದಿದ್ದರೆ, ಆದರೆ ನೀವೇ ಸ್ವತಃ ಕೈಕೊಂಡದ್ದು ಒಳ್ಳೆಯದಾಗುವುದರತ್ತ ತಿರುವು ಪಡೆಯಲೆಂದು ಬಯಸುತ್ತಿದ್ದರೆ, ಮತ್ತು ತಪ್ಪೊಂದಾಗಿದ್ದರೆ, ಅದೆಂತಹದೇ ತಪ್ಪಾಗಿರಲಿ ಅದನ್ನು ಅರ್ಥಮಾಡಿಕೊಳ್ಳಬಹುದು, ಅದು ನಿಮಗೆ ಶ್ರೇಷ್ಠತರ ಪ್ರಗತಿಗೆ, ಹೆಚ್ಚಿನ ಶಿಸ್ತುಪಾಲನೆಗೆ, ಭಗವಂತನತ್ತ ಹೊಸ ಆರೋಹಣ ಮಾಡುವುದಕ್ಕೆ



ಅವಕಾಶ ಒದಗಿಸಬಹುದು. ಭವಿಷ್ಯತ್ತಿನಲ್ಲಿ ಹೆಚ್ಚು ಸ್ಪಷ್ಟತೆಯುಳ್ಳವರು, ಸತ್ಯವಂತರು ಹಾಗೂ ಗಾಢತೆಯುಳ್ಳವರು ಆಗಲು ಬಾಗಿಲೊಂದು ತೆರೆದುಕೊಳ್ಳುವುದು; ಹಾಗಾಗಿ ಇದೆಲ್ಲವೂ ಇಲ್ಲಿ (ಶ್ರೀಮಾತೆಯವರು, ಹೃದಯದತ್ತ ಬೆರಳು ಮಾಡಿ ತೋರಿಸುತ್ತಾರೆ) ಶಕ್ತಿಯ ರೂಪದಲ್ಲಿ ಒಟ್ಟುಗೂಡಬಹುದು, ನಂತರ ಉಕ್ಕೇರುತ್ತ ಆರೋಹಣದ ಶ್ರೇಷ್ಠ ಚಲನೆಯಲ್ಲಿ ಮೇಲಕ್ಕೇರುತ್ತದೆ ಮತ್ತು ಕೆಲವೊಮ್ಮೆ ಸೂತ್ರರೂಪ ಪಡೆಯುವ ಛಾಯೆಯಿಲ್ಲದೆ, ಶಬ್ದಗಳಿಲ್ಲದೆ, ಅಭಿವ್ಯಕ್ತಿಯಿಲ್ಲದೆ, ಆದರೆ ಪುಟಿದೆದ್ದು ಬರುವ ಜ್ವಾಲೆಯ ಹಾಗೆ ಮೇಲಕ್ಕೇರುತ್ತದೆ.

ಅದು ನಿಜವಾದ ಅಭೀಪ್ಸೆ. ಪ್ರಗತಿ ಹೊಂದಲು ಸತತ ಬಯಸುವ ಮತ್ತು ದೈವೀ ಸಂಕಲ್ಪ ನಮ್ಮಿಂದ ಬಯಸುವುದರೊಂದಿಗೆ ಹೆಚ್ಚು ಪೂರ್ತಿಯಾಗಿ ಸಾಮರಸ್ಯದಿಂದಿರುವ ಸ್ಥಿತಿಯಲ್ಲಿ ಮನುಷ್ಯ ಇದ್ದನಾದರೆ, ಅದು ದಿನಾಲು ನೂರು ಸಲ, ಸಾವಿರ ಸಲ ಸಂಭವಿಸಬಹುದು.

ಪ್ರಾರ್ಥನೆ ಹೆಚ್ಚು ಹೆಚ್ಚಾಗಿ ಬಾಹ್ಯದಲ್ಲಿರುವ ವಿಷಯ, ಒಂದು ನಿಖರ ವಸ್ತುಸ್ಥಿತಿಗಾಗಿ ಇರುವಂತಹದು. ಸೂತ್ರರೂಪದಲ್ಲಿರುವಂತಹದು, ಏಕೆಂದರೆ ಸೂತ್ರವೇ ಆ ಪ್ರಾರ್ಥನೆಗೆ ರೂಪ ಕೊಡುತ್ತದೆ. ಮನುಷ್ಯನಲ್ಲಿ ಅಭೀಪ್ಸೆಯಿರಬಹುದು ಮತ್ತು ಅದನ್ನು ಪ್ರಾರ್ಥನೆಯ ಪ್ರತಿರೂಪದ್ದನ್ನಾಗಿ ಮಾಡಬಹುದು. ಆದರೆ ಅಭೀಪ್ಸೆ ಪ್ರಾರ್ಥನೆಯಿಂದಾಚೆಗೆ ಪ್ರತಿಯೊಂದು ರೀತಿಯಲ್ಲಿ ಸಾಗಿ ಹೋಗುತ್ತದೆ. ಅದು ಹೆಚ್ಚು ಹತ್ತಿರವಾದದ್ದು, ಸ್ವ–ವಿಸ್ಮರಣೆಯುಳ್ಳದ್ದು, ತಾನು ಇರಬೇಕಾದ ಹಾಗೂ ಕೈಕೊಳ್ಳಬೇಕಾದ ವಿಷಯದಲ್ಲಿಯೇ ಇರುವಂತಹದು ಮತ್ತು ಮನುಷ್ಯ ಕೈಕೊಳ್ಳಬೇಕೆಂದು ಬಯಸಿದುದೆಲ್ಲವನ್ನೂ ಭಗವಂತನಿಗೆ ಅರ್ಪಿಸುವಂತಹದು. ಏನನ್ನೋ ಬೇಡಿಕೊಳ್ಳುವುದಕ್ಕಾಗಿ ಪ್ರಾರ್ಥನೆ ಮಾಡಬಹುದು, ಭಗವಂತ ನಿಮಗೆ ಕೊಟ್ಟಿರುವುದೆಲ್ಲದಕ್ಕಾಗಿ ಅವನಿಗೆ ಧನ್ಯವಾದಗಳನ್ನು ಅರ್ಪಿಸಲು ಪ್ರಾರ್ಥನೆ ಮಾಡಬಹುದು. ಆ ಪ್ರಾರ್ಥನೆ ಹೆಚ್ಚು ಶ್ರೇಷ್ಠವಾದದ್ದು. ಅದನ್ನು ಕೃತಜ್ಞತಾ ಸಮರ್ಪಣೆಯ ಕ್ರಿಯೆ ಎಂದು ಕರೆಯಬಹುದು. ಭಗವಂತ ನಿಮಗೆ ತೋರಿಸಿದ ಕರುಣೆಯ ಮುಖವನ್ನು ಕುರಿತು ಕೃತಜ್ಞತೆಯಿಂದ ಪ್ರಾರ್ಥನೆ ಮಾಡಬಹುದು. ಅವನು ನಿಮಗೆ ಮಾಡಿದುದೆಲ್ಲದಕ್ಕಾಗಿ, ಅವನಲ್ಲಿ ನೀವು ಕಂಡುಕೊಂಡದ್ದಕ್ಕಾಗಿ ಮತ್ತು ನೀವು ಅವನಿಗೆ ಅರ್ಪಿಸಬೇಕಾದ ಹೊಗಳಿಕೆಗಾಗಿ ಪ್ರಾರ್ಥನೆ ಮಾಡಬಹುದು. ಮತ್ತು ಇದೆಲ್ಲವೂ ಪ್ರಾರ್ಥನೆಯ ರೂಪ ತಳೆಯುವಂತಹದು. ಅದು ನಿರ್ಧಾರಿತವಾಗಿ ಅತ್ಯಂತ ಉಚ್ಚಮಟ್ಟದ ಪ್ರಾರ್ಥನೆ, ಏಕೆಂದರೆ ತನ್ನನ್ನು

ಕುರಿತು ಪೂರ್ವಮಗ್ನವಾಗಿರುವುದಿಲ್ಲ., ಅದು ಅಹಂಕಾರಯುಕ್ತ ಪ್ರಾರ್ಥನೆಯಲ್ಲ.

ನಿಶ್ಚಿತವಾಗಿ ಮನುಷ್ಯ ಎಲ್ಲ ಪ್ರಾಂತಗಳಲ್ಲಿ ಅಭೀಪ್ಸೆ ಹೊಂದಿರಬಹುದು, ಅಭೀಪ್ಸೆಯ ಕೇಂದ್ರ ಮಾತ್ರ ಚೈತ್ಯಸತ್ತೆಯೊಳಗಿದೆ. ಎಲ್ಲ ಪ್ರಾಂತಗಳಲ್ಲಿ ಪ್ರಾರ್ಥನೆ ಮಾಡಬಹುದು ಮತ್ತು ಆ ಪ್ರಾರ್ಥನೆ, ಪ್ರಾರ್ಥನೆಯನ್ನು ಮಾಡಿಕೊಂಡ ಪ್ರಾಂತಕ್ಕೆ ಸೇರಿರುತ್ತದೆ. ಮನುಷ್ಯ ಕೇವಲ ಲೌಕಿಕ, ಭೌತಿಕ, ಪ್ರಾಣಿಕ, ಮಾನಸಿಕ, ಚೈತ್ಯಾತ್ಮಿಕ, ಆಧ್ಯಾತ್ಮಿಕ ಪ್ರಾರ್ಥನೆಗಳನ್ನು ಮಾಡಬಹುದು ಮತ್ತು ಪ್ರತಿಯೊಂದಕ್ಕೆ ವಿಶಿಷ್ಟ ಗುಣಲಕ್ಷಣವಿರುತ್ತದೆ, ವಿಶಿಷ್ಟ ಮೌಲ್ಯವಿರುತ್ತದೆ.

ಒಮ್ಮೆಗೆ ಸ್ವಯಂಪ್ರೇರಿತವಾದ ಮತ್ತು ನಿಸ್ವಾರ್ಥದ ಪ್ರಾರ್ಥನೆಯಿದೆ, ಅದೊಂದು ದೊಡ್ಡ ಕರೆ ಕೊಟ್ಟಹಾಗಿರುತ್ತದೆ. ಸಾಮಾನ್ಯವಾಗಿ ವೈಯಕ್ತಿಕವಾಗಿ ತನ್ನ ಸಲುವಾಗಿ ಅಲ್ಲ, ಆದರೆ ಅದು ಭಗವಂತನೊಂದಿಗೆ ಮಧ್ಯಸ್ಥಿಕೆ (intercession) ಎಂದು ಕರೆಯಬಹುದಾದ ಏನೋ ಒಂದಾಗಿರುತ್ತದೆ. ಅದು ಅತ್ಯಂತ ಸಾಮರ್ಥ್ಯಪೂರ್ಣವಾಗಿರುತ್ತದೆ. ಈ ಬಗೆಯ ಪ್ರಾರ್ಥನೆಗಳಿಂದ ಬಹುಮಟ್ಟಿಗೆ ಕ್ಷಣ ಮಾತ್ರದಲ್ಲಿ ವಿಷಯಗಳನ್ನು ಸಿದ್ಧಿಸಿಕೊಂಡ ಅಸಂಖ್ಯಾತ ಉದಾಹರಣೆಗಳು ನನ್ನ ಬಳಿ ಇದ್ದವು. ಅದು ಶ್ರೇಷ್ಠ ನಂಬಿಕೆ, ಉತ್ಸಾಹ, ಹೃದಯದ ಶ್ರೇಷ್ಠ ನಿಷ್ಕಾಪಟ್ಯ, ಲೆಕ್ಕಾಚಾರ ಮಾಡದ, ಯೋಜನೆ ಹಾಕಿಕೊಂಡಿರದ, ಚೌಕಾಶಿ ಮಾಡದ, ಏನನ್ನಾದರೂ ಪ್ರತಿಯಾಗಿ ದೊರಕಿಸುವ ವಿಚಾರವನ್ನಿಟ್ಟುಕೊಳ್ಳದೆ ಕೊಡುವ ಏನೋ ಒಂದು ಇಂತಹದೆಲ್ಲವನ್ನೂ ಒಳಗೊಳ್ಳುತ್ತದೆ. ಏಕೆಂದರೆ ಬಹಳಷ್ಟು ಜನರು ಒಂದು ಕೈಯಿಂದ ಕೊಡುತ್ತಾರೆ ಮತ್ತು ಪ್ರತಿಯಾಗಿ ಏನನ್ನಾದರೂ ಪಡೆಯಲು ಇನ್ನೊಂದು ಕೈಯನ್ನು ಚಾಚುತ್ತಾರೆ, ಪ್ರಾರ್ಥನೆಗಳು, ಹೆಚ್ಚಿನ ಸಂಖ್ಯೆಯಲ್ಲಿ, ಇಂತಹವೇ ಆಗಿರುತ್ತವೆ. ಆದರೆ ನಾನು ವರ್ಣಿಸಿ ಹೇಳಿರುವಂತಹ ಇತರ ಪ್ರಾರ್ಥನೆಗಳಿವೆ, ಕೃತಜ್ಞತೆ ಅರ್ಪಿಸುವ ಕಾರ್ಯಗಳಿರುತ್ತವೆ, ಒಂದು ಬಗೆಯ ಗೀತೆಯಿರುತ್ತದೆ, ಇವೆಲ್ಲ ಬಹಳ ಒಳ್ಳೆಯವಾಗಿರುತ್ತವೆ.

ತಿಳಿಯಿತೆ! ನಾನು ಹೇಳಿದ್ದು ಸ್ಪಷ್ಟವಾಯಿತೋ ಇಲ್ಲವೋ ನನಗೆ ತಿಳಿಯದು. ಆದರೆ ಅದಿರುವುದು ಹಾಗೆ.

ಹೆಚ್ಚು ಸ್ಪಷ್ಟವಾಗಿ ಹೇಳುವುದಾದರೆ ಪ್ರಾರ್ಥನೆಯನ್ನು ಯಾವಾಗಲೂ ಶಬ್ದಗಳನ್ನು ಉಪಯೋಗಿಸಿ ಸೂತ್ರರೂಪದಲ್ಲಿ ಇರಿಸಲಾಗಿರುತ್ತದೆ. ಆದರೆ ಶಬ್ದಗಳು ಅವುಗಳನ್ನು ರೂಪಿಸುವಾಗಿನ ಸ್ಥಿತಿಯ ಮೇಲೆ ಭಿನ್ನ ಮೌಲ್ಯಗಳನ್ನು



ಹೊಂದಿರಬಹುದು. ಪ್ರಾರ್ಥನೆ ಸೂತ್ರರೂಪದಲ್ಲಿರಿಸಿದ ವಿಷಯ ಮತ್ತು ಮನುಷ್ಯ ಅಭೀಪ್ಸೆ ಪಡಬಹುದು. ಯಾರನ್ನಾದರೂ ಕುರಿತಾಗಿಯಲ್ಲದೆ ಪ್ರಾರ್ಥನೆ ಮಾಡುವುದು ಕಷ್ಟಕರವಾದದ್ದು. ಉದಾಹರಣೆಗೆ ಭಗವಂತನ ಬಗೆಗಿನ ವಿಚಾರವನ್ನು ಹೆಚ್ಚು ಕಡಿಮೆ ವಿಶ್ವದಿಂದ ಹೊರದೂಡಿದ ಜನರು (ಈ ಬಗೆಯ ಜನರು ಅನೇಕರಿದ್ದಾರೆ, ಈ ವಿಚಾರ ಅವರಿಗೆ ತೊಂದರೆ ಉಂಟು ಮಾಡುತ್ತದೆ. ಎಲ್ಲವನ್ನೂ ಬಲ್ಲವ, ಪ್ರತಿಯೊಂದನ್ನೂ ಕೈಕೊಳ್ಳಬಲ್ಲವ ಒಬ್ಬನಿದ್ದಾನೆ ಎಂಬ ವಿಚಾರ ಅವರಿಗೆ ತೊಂದರೆ ಉಂಟು ಮಾಡುತ್ತದೆ, ಅವರೊಡನೆ ಹೋಲಿಸಿದರೆ ಅವನು ದಿಗಿಲು ಹುಟ್ಟಿಸುವಷ್ಟು ಶ್ರೇಷ್ಠನಾಗಿದ್ದಾನೆ ಎಂಬ ವಿಚಾರ ಅವರಿಗೆ ಕಿರಿಕಿರಿಯನ್ನುಂಟು ಮಾಡುತ್ತದೆ; ಅದು ಅವರ ಸ್ವಾಭಿಮಾನಕ್ಕೆ ಸ್ವಲ್ಪ ತ್ರಾಸದಾಯಕ ಎನಿಸುವಂತಹದು, ಹಾಗಾಗಿ ಜಗತ್ತನ್ನು ಭಗವಂತನಿಲ್ಲದಂತೆ ಮಾಡಲು ಅವರು ಪ್ರಯತ್ನಿಸುತ್ತಾರೆ) ಪ್ರಾರ್ಥನೆ ಮಾಡಲಾರರು, ಏಕೆಂದರೆ ಅವರು ಯಾರನ್ನು ಕುರಿತು ಪ್ರಾರ್ಥನೆ ಮಾಡಬೇಕು? ತಮ್ಮನ್ನೇ ಕುರಿತು ಪ್ರಾರ್ಥನೆ ಮಾಡುವುದು ರೂಢಿಯಲ್ಲಿಲ್ಲ. ಆದರೆ ಭಗವಂತನಲ್ಲಿ ಯಾವ ನಂಬಿಕೆ ಇಲ್ಲದ ಮನುಷ್ಯ ಅಭೀಪ್ಸೆ ಪಡಬಹುದು. ಭಗವಂತನ ಅಸ್ತಿತ್ವದಲ್ಲಿ ನಂಬಿಕೆ ಇಲ್ಲದ ಜನರಿದ್ದಾರೆ, ಆದರೆ ಅವರು ಪ್ರಗತಿ ಸಾಧನೆಯಲ್ಲಿ ನಂಬಿಕೆ ಇಟ್ಟುಕೊಂಡಿರುತ್ತಾರೆ. ಜಗತ್ತು ಸತತ ಪ್ರಗತಿ ಸಾಧಿಸುತ್ತದೆ ಮತ್ತು ಈ ಪ್ರಗತಿ ತಡೆದು ನಿಲ್ಲದೆ ಅನಂತ ಕಾಲದ ವರೆಗೆ ಒಳ್ಳೆಯದರತ್ತ ಮುಂದುವರಿಯುತ್ತದೆ ಎಂಬ ವಿಚಾರ ಅವರಲ್ಲಿರುತ್ತದೆ. ಸರಿ, ಈ ಜನರು ಪ್ರಗತಿಗಾಗಿ ಶ್ರೇಷ್ಠ ಅಭೀಪ್ಸೆಯನ್ನು ಹೊಂದಿರಬಹುದಾಗಿದೆ ಮತ್ತು ಅದಕ್ಕಾಗಿ ಅವರಿಗೆ ದೈವೀ ಅಸ್ತಿತ್ವ ಕುರಿತು ಯಾವುದೇ ವಿಚಾರದ ಆವಶ್ಯಕತೆ ಇರುವುದಿಲ್ಲ. ಅಭೀಪ್ಸೆ ಅವಶ್ಯವಾಗಿ ನಂಬಿಕೆಯೊಂದನ್ನು ಒಳಗೊಂಡಿರುತ್ತದೆ, ಆದರೆ ಅದಕ್ಕೆ ದೈವೀ ಸತ್ತೆಯೊಂದರಲ್ಲಿ ನಂಬಿಕೆಯಿರಿಸುವ ಆವಶ್ಯಕತೆ ಇರುವುದಿಲ್ಲ. ಅದು ಹಾಗಿರುವಾಗ ದೈವೀ ಸತ್ತೆಯೊಂದನ್ನು ಕುರಿತು ಕೈಕೊಳ್ಳದೆ ಇರುವ ಪ್ರಾರ್ಥನೆಯಿರುವುದಿಲ್ಲ. ಯಾವುದನ್ನು ಕುರಿತು ಪ್ರಾರ್ಥನೆ ಮಾಡಬೇಕು? ವ್ಯಕ್ತಿವಿಶಿಷ್ಟತೆ ಇಲ್ಲದ ಯಾವುದೋ ಒಂದನ್ನು ಕುರಿತು ಪ್ರಾರ್ಥನೆ ಮಾಡಲಾಗುವುದಿಲ್ಲ. ಪ್ರಾರ್ಥನೆಯನ್ನು ಕೇಳಿಸಿಕೊಳ್ಳುವವನಿಗೆ ಮನುಷ್ಯ ಪ್ರಾರ್ಥನೆ ಮಾಡುತ್ತಾನೆ. ಹಾಗಾಗಿ ಮನುಷ್ಯ ಪ್ರಾರ್ಥನೆ ಮಾಡುವುದರ ಅರ್ಥ, ಅವನು ಗುರುತಿಸಿರದೇ ಇದ್ದರೂ, ಯಾರೋ ಒಬ್ಬರಲ್ಲಿ ಅವನಿಗೆ ನಂಬಿಕೆ ಇರುತ್ತದೆ, ಆ ಯಾರೋ ಒಬ್ಬರು ನಮಗಿಂತ ಅನಂತಪಟ್ಟು ಉಚ್ಚಸ್ಥಿತಿಯಲ್ಲಿರುತ್ತಾರೆ,

ಅನಂತಪಟ್ಟು ಸಾಮರ್ಥ್ಯಪೂರ್ಣರಾಗಿರುತ್ತಾರೆ. ನಮ್ಮ ಪ್ರಾರ್ಥನೆ ಅವನು ಕೇಳಿಸಿಕೊಳ್ಳುವಷ್ಟು ಗಾಢವಾಗಿದ್ದರೆ ನಮ್ಮ ಅದೃಷ್ಟವನ್ನು, ಹಾಗೆಯೇ ನಮ್ಮನ್ನೂ ಕೂಡ ಬದಲಿಸಬಲ್ಲನು. ಇರುವ ಸಾರಭೂತ ಭಿನ್ನತೆ ಇದು.

ಹೀಗೆ ಹೆಚ್ಚು ಬುದ್ಧಿವಂತರಾದ ಜನರು ಅಭೀಪ್ಸೆಪಡುವುದನ್ನು ಒಪ್ಪಿಕೊಳ್ಳುತ್ತಾರೆ ಮತ್ತು ಪ್ರಾರ್ಥನೆ ಸ್ವಲ್ಪ ಕಡಿಮೆಮಟ್ಟದ್ದು ಎಂದು ಹೇಳುತ್ತಾರೆ. ಅನುಭಾವಿಗಳು ಹೇಳುತ್ತಾರೆ: ಅಭೀಪ್ಸೆ ಒಳ್ಳೆಯದಾದದ್ದು, ಆದರೆ ಭಗವಂತ ನಿಮ್ಮ ಕರೆ ಕೇಳಿಸಿಕೊಳ್ಳುವಂತಾಗಲು ನೀವು ಪ್ರಾರ್ಥನೆ ಮಾಡಬೇಕು, ಆ ಪ್ರಾರ್ಥನೆ ಮಗುವಿನ ಸರಳತೆಯಿಂದ ಕೂಡಿರಬೇಕು, ಪರಿಪೂರ್ಣವಾಗಿ ಮುಚ್ಚುಮರೆ ಇಲ್ಲದಿರಬೇಕು, ಎಂದರೆ ಸಂಪೂರ್ಣ ವಿಶ್ವಾಸದಿಂದ "ನನಗೆ ಇದೋ, ಅದೋ ಬೇಕಾಗಿದೆ (ಅದು ನೈತಿಕ, ಭೌತಿಕ ಇಲ್ಲವೆ ಪ್ರಾಪಂಚಿಕ ಆವಶ್ಯಕತೆಯಾಗಿರ–ಬಹುದು), ಸರಿ, ನಾನು ಅದಕ್ಕಾಗಿ ನಿನ್ನನ್ನು ಕೇಳುತ್ತಿದ್ದೇನೆ, ಅದನ್ನು ನನಗೆ ಕೊಡು" ಎಂದು ಪ್ರಾರ್ಥನೆ ಮಾಡಬೇಕು. ಇಲ್ಲವೆ ಇನ್ನೊಂದು ರೀತಿಯಲ್ಲಿ ಹೀಗೆ ಹೇಳಬಹುದು: "ಭಗವಂತ, ನಾನು ಕೇಳಿದ್ದನ್ನು ದಯಪಾಲಿಸಿರುವಿ, ನನಗೆ ಅಪರಿಚಿತವಾದ ಅನುಭವಗಳನ್ನು ಮೂರ್ತರೂಪದಲ್ಲಿ ಸಿದ್ಧಿಸಿಕೊಳ್ಳುವಂತೆ ಮಾಡಿರುವಿ. ಈಗ ನಾನು ಸಂಕಲ್ಪಿಸಿದಾಗ ಸಿದ್ಧಿಸಿಕೊಳ್ಳಬಹುದಾದ ಅದ್ಭುತ ವಿಷಯಗಳು ಅವಾಗಿವೆ. ಹೌದು, ನಾನು ನಿನಗೆ ಅನಂತಪಟ್ಟು ಕೃತಜ್ಞನಾಗಿದ್ದೇನೆ. ನಿನ್ನ ಪ್ರಶಂಸೆ ಇರುವ, ನಿನ್ನ ಮಧ್ಯಸ್ಥಿಕೆಗಾಗಿ ಧನ್ಯವಾದಗಳಿರುವ ಕೃತಜ್ಞತಾ ಸಮರ್ಪಣೆಯ ಹಾಡಿರುವ ಪ್ರಾರ್ಥನೆಯನ್ನು ಹೇಳುವೆ." ಅದು ಆ ರೀತಿಯದಾಗಿದೆ. ಯಾರನ್ನಾದರೂ ಗುರಿಯಾಗಿರಿಸಿಕೊಂಡಾಗಲಿ, ಯಾರೊಬ್ಬರ ಬಳಿಗೆ ತಲುಪಲೆಂದಾಗಲಿ ಅಭೀಪ್ಸೆಪಡುವ ಆವಶ್ಯಕತೆ ಇಲ್ಲ. ಸತ್ತೆಯ ಒಂದು ಸ್ಥಿತಿಗಾಗಿ, ಜ್ಞಾನಕ್ಕಾಗಿ, ಸಿದ್ಧಿಗಾಗಿ, ಪ್ರಜ್ಞೆಯ ಸ್ಥಿತಿಗಾಗಿ ಮನುಷ್ಯನಲ್ಲಿ ಅಭೀಪ್ಸೆ ಇರುತ್ತದೆ, ಏನೋ ಒಂದನ್ನು ದೊರಕಿಸಲು ಮನುಷ್ಯ ಅಭೀಪ್ಸೆಪಡುತ್ತಾನೆ, ಆದರೆ ಅದು ಅವಶ್ಯವಾಗಿ ಪ್ರಾರ್ಥನೆಯಾಗಿರಬೇಕಿಲ್ಲ, ಪ್ರಾರ್ಥನೆ ಅಧಿಕವಾದ ಏನೋ ಒಂದು.

ಪ್ರಾರ್ಥನೆ ವೈಯಕ್ತಿಕ ವಿಷಯ, ವ್ಯಕ್ತಿಗತ ಸತ್ತೆಯೊಂದನ್ನು ಉದ್ದೇಶಿಸಿ ಕೈಕೊಂಡದ್ದಾಗಿರುತ್ತದೆ, ಎಂದರೆ ನಿಮ್ಮ ಪ್ರಾರ್ಥನೆಯನ್ನು ಕೇಳಿಸಿಕೊಳ್ಳುವ ಹಾಗೂ ಅದಕ್ಕೆ ಉತ್ತರ ನೀಡುವ ಒಂದು ಶಕ್ತಿ ಅಥವಾ ಸತ್ತೆಯಾಗಿರುವುದರತ್ತ



ಪ್ರಾರ್ಥನೆಯಿರುತ್ತದೆ ಹಾಗಿಲ್ಲದಿದ್ದರೆ ನೀವು ಏನನ್ನೂ ಬೇಡಲಾರಿರಿ. ನಿಮಗೆ ಅರ್ಥವಾಯಿತೆ?

**(5/141–45)** – **ಶ್ರೀಮಾತೆ**

*

## ಪ್ರಾರ್ಥನೆಯ ಯಶಸ್ಸಿಗಾಗಿ ನಿಬಂಧನೆ

ಅತ್ಯಂತ ಮಹತ್ವದ ನಿಬಂಧನೆ ಎಂದರೆ ಬಹುಮಟ್ಟಿಗೆ ಶಿಶು ಸದೃಶ ವಿಶ್ವಾಸ ವಿರುವುದು, ಮಗುವೊಬ್ಬನ ಬಿಚ್ಚು ಮನಸ್ಸಿನ ವಿಶ್ವಾಸ, ಅವನಿಗೆ ಏನಾದರೂ ಬೇಕಾದಾಗ ಅದು ಬರುವುದೆಂಬ ನಿಶ್ಚಿತತೆ ಅವನಲ್ಲಿರುತ್ತದೆ, ಅದನ್ನು ಕುರಿತು ತನಗೇ ಪ್ರಶ್ನೆ ಕೇಳುವುದಿಲ್ಲ. ಸರಿ, ಇದು ಈ ಬಗೆಯ ವಿಶ್ವಾಸವಿರುವುದು – ಇದು ನಿಜವಾಗಿ ಬಹಳ ಮಹತ್ವದ ನಿಬಂಧನೆ.

ಅಭೀಪ್ಸೆ ಪಡುವುದು ಅತ್ಯಗತ್ಯವಾದದ್ದು, ಆದರೆ ಕೆಲವು ಜನರು ನಂಬಿಕೆ ಮತ್ತು ಅಪನಂಬಿಕೆ, ವಿಶ್ವಾಸ ಮತ್ತು ಅವಿಶ್ವಾಸ, ಜಯ ನಿಶ್ಚಿತವೆಂಬ ಆಶಾವಾದ ಮತ್ತು ಅನಾಹುತ ಯಾವಾಗ ಬರಬಹುದು ಎಂಬ ನಿರಾಶಾವಾದ ಇವುಗಳ ನಡುವೆ ಸಂಘರ್ಷವನ್ನಿರಿಸಿಕೊಂಡು ಅಭೀಪ್ಸೆ ಪಡುತ್ತಾರೆ. ಇದು ಸತ್ತೆಯಲ್ಲಿದ್ದರೆ ನೀವು ಅಭೀಪ್ಸೆ ಪಡಬಹುದು, ಆದರೆ ನೀವು ಏನನ್ನೂ ದೊರಕಿಸಲಾರಿರಿ. ಮತ್ತು ನೀವು "ನಾನು ಅಭೀಪ್ಸೆಪಟ್ಟೆ, ಆದರೆ ಏನನ್ನೂ ದೊರಕಿಸಲಾಗಲಿಲ್ಲ" ಎಂದು ಹೇಳುತ್ತೀರಿ. ಅದು ಹಾಗಿರುವುದು ಏಕೆಂದರೆ ನೀವು ಎಲ್ಲ ಕಾಲದಲ್ಲಿ ನಿಮ್ಮ ಗಾಢ ನಂಬಿಕೆಯಲ್ಲಿರುವ ಕೊರತೆಯಿಂದ ಅಭೀಪ್ಸೆಯನ್ನು ನಾಶ ಮಾಡುತ್ತೀರಿ. ಆದರೆ ನಿಜವಾಗಿ ನಿಮ್ಮಲ್ಲಿ ವಿಶ್ವಾಸವಿದ್ದರೆ... ಮಕ್ಕಳನ್ನು ಅವರಷ್ಟಕ್ಕೆ ಅವರಿರುವಂತೆ ಬಿಟ್ಟುಕೊಟ್ಟರೆ ಮತ್ತು ಅವರು ಹಿರಿಯರಿಂದ ವಿರೂಪಕ್ಕೊಳಗಾಗದಿದ್ದರೆ ಅವರಲ್ಲಿ ಎಂತಹ ಶ್ರೇಷ್ಠ ವಿಶ್ವಾಸವಿರುತ್ತದೆಂದರೆ ಎಲ್ಲವೂ ಒಳ್ಳೆಯದಾಗುವುದು. ಉದಾಹರಣೆಗೆ ಅವರು ಚಿಕ್ಕದೊಂದು ಅಪಘಾತಕ್ಕೀಡಾದಾಗ, ಅದು ಗಂಭೀರವಾದ ಏನೋ ಒಂದೆಂದು ಅವರು ಯೋಚಿಸುವುದಿಲ್ಲ, ಅದು ಅಲ್ಪ ಕಾಲದಲ್ಲಿ ವಾಸಿಯಾಗುತ್ತದೆಂಬ ಸ್ವಯಂಪ್ರೇರಿತ ಮನವರಿಕೆ ಹೊಂದಿರುತ್ತಾರೆ ಮತ್ತು ಇದು ಆ ವಿಷಯಕ್ಕೆ ಕೊನೆ ಹೇಳುವುದಕ್ಕೆ ಸಾಮರ್ಥ್ಯಪೂರ್ಣವಾಗಿ ಸಹಾಯ ಮಾಡುತ್ತದೆ.

ಸರಿ, ಮನುಷ್ಯ ದೈವೀಶಕ್ತಿಗಾಗಿ ಆಭೀಪ್ಸೆಪಟ್ಟಾಗ, ಭಗವಂತನಿಂದ ಸಹಾಯ ಕೇಳಿದಾಗ, ಅದು ಬರುವುದೆಂಬ ಅಲುಗಾಡದ ನಿಶ್ಚಿತತೆಯಿಂದ ಕೇಳಿಕೊಂಡದ್ದಾದರೆ ಅದು ಬರದೆ ಇರುವುದು ಅಸಾಧ್ಯವಾದದ್ದು, ಅದು ನಿಶ್ಚಿತವಾಗಿ ಬರುತ್ತದೆ. ಅದು ಈ ಬಗೆಯದು ... ಹೌದು, ಇದು ನಿಜವಾಗಿ ಆಂತರಿಕ ತೆರೆದಿರಿಸಿಕೊಳ್ಳುವಿಕೆ, ಅದು ವಿಶ್ವಾಸದಿಂದ ಇರುವುದಾಗಿರುತ್ತದೆ. ಕೆಲವು ಜನರು ಸತತ ಈ ಸ್ಥಿತಿಯಲ್ಲಿಯೇ ಇರುತ್ತಾರೆ, ಸ್ವೀಕರಿಸಬೇಕಾದ ಏನೋ ಒಂದಿದ್ದಾಗ, ಅದನ್ನು ಸ್ವೀಕರಿಸಲು ಅವರು ಅಲ್ಲಿರುತ್ತಾರೆ. ಇನ್ನಿತರರಿದ್ದಾರೆ, ಹೊಂದಬೇಕಾದ ಏನೋ ಒಂದಿದ್ದಾಗ, ಶಕ್ತಿಯೊಂದು ಅವತರಣ ಮಾಡುತ್ತಿದ್ದಾಗ ಅವರು ಅಲ್ಲಿ ಉಪಸ್ಥಿತರಿರುವುದಿಲ್ಲ. ಆ ಕ್ಷಣದಲ್ಲಿ ಅವರು ಯಾವಾಗಲೂ ತಮ್ಮಲ್ಲಿ ಮುಚ್ಚಿ ಹಾಕಿಕೊಂಡಿರುತ್ತಾರೆ, ಅದು ಹಾಗಿರುವಾಗ ಶಿಶು ಸದೃಶ ವಿಶ್ವಾಸವಿದ್ದವರು ಯಾವಾಗಲೂ ಸರಿಯಾದ ಸಮಯದಲ್ಲಿ ಹಾಜರಿರುತ್ತಾರೆ.

ಇದು ವಿಚಿತ್ರವಾದದ್ದು, ಅಲ್ಲವೆ? ಬಾಹ್ಯದಲ್ಲಿ ಯಾವ ವ್ಯತ್ಯಾಸವೂ ಇರುವುದಿಲ್ಲ. ಅವರಲ್ಲಿ ನಿಖರವಾಗಿ ಅದೇ ಸದ್ಭಾವನೆ, ಅದೇ ಬಗೆಯ ಅಭೀಪ್ಸೆ ಇರಬಹುದು, ಒಳ್ಳೆಯದನ್ನು ಮಾಡುವ ಒಂದೇ ಬಗೆಯ ಅಭೀಪ್ಸೆ ಇರಬಹುದು. ಆದರೆ ಈ ಹಸನ್ಮುಖದ ಗಾಢ ನಂಬಿಕೆಯನ್ನು ತಮ್ಮ ಅಂತರಂಗದಲ್ಲಿ ಇರಿಸಿಕೊಂಡವರು ಪ್ರಶ್ನೆ ಕೇಳುವುದಿಲ್ಲ, ತಮಗೆ ಅದು ದೊರಕುವುದೋ, ಇಲ್ಲವೋ ಎಂದು ತಮ್ಮನ್ನೇ ಕೇಳುವುದಿಲ್ಲ, ಭಗವಂತ ಉತ್ತರ ನೀಡುವನೋ ಇಲ್ಲವೋ – ಆ ಪ್ರಶ್ನೆ ಉದ್ಭವಿಸುವುದಿಲ್ಲ, ಅದು ಅರ್ಥಮಾಡಿಕೊಂಡ ವಿಷಯವಾಗಿರುತ್ತದೆ.... "ನನಗೆ ಅವಶ್ಯವಿದ್ದದ್ದನ್ನು ಕೊಡಲಾಗುತ್ತದೆ, ನಾನು ಪ್ರಾರ್ಥನೆ ಮಾಡಿದರೆ ನನಗೆ ಉತ್ತರ ದೊರಕುತ್ತದೆ, ನಾನು ತೊಂದರೆಯಲ್ಲಿದ್ದಾಗ ಮತ್ತು ಸಹಾಯ ಯಾಚಿಸಿದಾಗ ಅದು ದೊರಕುತ್ತದೆ–ಅದು ಬರುವುದಷ್ಟೇ ಅಲ್ಲ, ಪ್ರತಿಯೊಂದನ್ನೂ ನಿರ್ವಹಿಸುತ್ತದೆ." ಸ್ವಯಂಪ್ರೇರಣೆಯ, ಬಿಚ್ಚು ಮನಸ್ಸಿನ, ಪ್ರಶ್ನಿಸದ ವಿಶ್ವಾಸವಿದ್ದರೆ, ಅದು ಬೇರೆ ಯಾವುದಕ್ಕಿಂತಲೂ ಹೆಚ್ಚು ಒಳ್ಳೆಯ ರೀತಿಯಲ್ಲಿ ಕಾರ್ಯ ಮಾಡುತ್ತದೆ ಮತ್ತು ಪರಿಣಾಮಗಳು ಅದ್ಭುತವಾಗಿರುತ್ತವೆ. ಮನಸ್ಸಿನ ವೈರುಧ್ಯಗಳು, ಸಂಶಯಗಳು ಇವುಗಳಿಂದ ಮನುಷ್ಯ ಎಲ್ಲವನ್ನೂ ಹಾಳುಮಾಡುತ್ತಾನೆ. ತೊಂದರೆಗಳಲ್ಲಿದ್ದಾಗ ಬರುವ ಯೋಚನೆಗಳು:– "ಓ, ಇದು ಅಸಾಧ್ಯವಾದದ್ದು! ಅದನ್ನು ನಾನೆಂದಿಗೂ ನಿರ್ವಹಿಸಲಾರೆ. ಅದು ಉಲ್ಬಣಗೊಳ್ಳುವುದಿದ್ದರೆ, ನನಗಿಷ್ಟವಿರದ ಈ ಸ್ಥಿತಿ ಇನ್ನೂ ಹೆಚ್ಚು ಕೆಟ್ಟದಾಗಿ ಬೆಳೆಯುತ್ತ ಹೋಗುವುದು, ನಾನು ಮುಂದೆ, ಮುಂದೆ ಜಾರಿಹೋಗುವುದು ಮುಂದುವರಿದರೆ ..." ಈ ಬಗೆಯವಾಗಿದ್ದರೆ ಮನುಷ್ಯ ತನ್ನ ಹಾಗೂ ತಾನು ಸ್ವೀಕರಿಸಬೇಕಾದ ಶಕ್ತಿಯ ನಡುವೆ ಗೋಡೆಯೊಂದನ್ನು ನಿರ್ಮಿಸುತ್ತಾನೆ. ಚೈತ್ಯಸತ್ತೆಯಲ್ಲಿ ಈ ಬಗೆಯ ಅದ್ಭುತ ರೀತಿಯ, ಛಾಯೆ ಇರದ, ವಿವಾದವಿರದ, ವೈರುಧ್ಯವಿರದ ವಿಶ್ವಾಸವಿರುತ್ತದೆ. ಮತ್ತು ಅದು ಆ ರೀತಿಯದಾಗಿದ್ದಾಗ ಉತ್ತರ ದೊರಕಿಸದ ಪ್ರಾರ್ಥನೆ ಇರುವುದಿಲ್ಲ, ಸಿದ್ಧಿಸಿಕೊಳ್ಳಲಾಗದ ಅಭೀಪ್ಸೆ ಇರುವುದಿಲ್ಲ.



**(6/403–04)** – **ಶ್ರೀಮಾತೆ**

**ಪ್ರಾರ್ಥನೆಗಾಗಿ ಉತ್ಕಟೇಚ್ಛೆ :** ಒಮ್ಮೆಗೆ ಜ್ವಾಲೆಯೊಂದು ಹೊತ್ತಿಕೊಳ್ಳುತ್ತದೆ. ನೀವು ಉತ್ಸಾಹಭರಿತ ಲವಲವಿಕೆಯ ಭಾವನೆ ತಂದುಕೊಳ್ಳುತ್ತೀರಿ, ಅದು ಉತ್ಕಟ ಆಸಕ್ತಿ, ಅದನ್ನು ನೀವು ಶಬ್ದಗಳಲ್ಲಿ ಅಭಿವ್ಯಕ್ತಪಡಿಸುತ್ತೀರಿ, ಅದು ನಿಜವಾದದ್ದಾಗಬೇಕಾದರೆ ಸ್ವಯಂಪ್ರೇರಿತವಾಗಿರಬೇಕು. ಅದು ಹೃದಯದಿಂದ ಬರಬೇಕು, ತಲೆಯ ಮೂಲಕ ಹಾದು ಹೋಗದೆ, ನೇರವಾಗಿ ಉತ್ಸಾಹದಿಂದ ಬರಬೇಕು. ಅದು ಪ್ರಾರ್ಥನೆ.

**(8/227)** – **ಶ್ರೀಮಾತೆ**

*

## ಸಾಮೂಹಿಕ ಪ್ರಾರ್ಥನೆಯ ಪರಿಣಾಮ ಹಾಗೂ ಮೌಲ್ಯ

ಭಿನ್ನ ಬಗೆಯ ಸಮುದಾಯಗಳಿರುವ ರೀತಿಯಲ್ಲಿ ಭಿನ್ನ ಬಗೆಯ ಸಾಮೂಹಿಕ ಪ್ರಾರ್ಥನೆಗಳಿವೆ. ಅಕಸ್ಮಾತ್ತಾದ ಪರಿಸ್ಥಿತಿಗಳಿಂದಾಗಿ, ಯಾವುದೇ ಬಗೆಯ ಆಂತರಿಕ ಹೊಂದಾಣಿಕೆಯಿಲ್ಲದ, ಪರಿಸ್ಥಿತಿಗಳ ಒತ್ತಡಕ್ಕೊಳಗಾಗಿ ಒಂದೆಡೆ ಸೇರಿದ, ಹೆಸರು ದೆಶೆಯಿಲ್ಲದ ಜನಸಮೂಹವಿರುತ್ತದೆ, ಗುಂಪಿರುತ್ತದೆ. ಉದಾಹರಣೆಗೆ ರಾಜನೊಬ್ಬ ಇಲ್ಲವೆ ಸಾರ್ವಜನಿಕರ ಲಕ್ಷ್ಯವನ್ನು ಸೆಳೆದ ವ್ಯಕ್ತಿಯೊಬ್ಬ ವಿಷಮ ಪರಿಸ್ಥಿತಿಯಲ್ಲಿದ್ದಾಗ ಅಸ್ವಸ್ಥನಾಗಿದ್ದಾಗ ಇಲ್ಲವೆ ಅಪಘಾತಕ್ಕೊಳಗಾಗಿದ್ದಾಗ ಜನರು ಅದರ ಬಗ್ಗೆ ಸುದ್ದಿ ಸಂಗ್ರಹಿಸಲು ಹಾಗೂ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಒಂದೆಡೆ ಸೇರಿರುತ್ತಾರೆ, ಅಲ್ಲಿ ಅವರು ಅಕಸ್ಮಾತ್ತಾಗಿ ಬಂದಿರುತ್ತಾರೆ, ಎಂದರೆ ಅಲ್ಲಿ ಆಂತರಿಕ ಜೋಡಣೆ ಇರುವುದಿಲ್ಲ, ಕೇವಲ ಒಂದೇ ಬಗೆಯ ಭಾವನೆ ಇಲ್ಲವೆ ಆಸಕ್ತಿ ಇರುತ್ತದೆ. ಜನ ಸಮೂಹಗಳು

ತಮಗೆ ವಿಶೇಷವಾಗಿ ಬೇಕಾಗಿದ್ದ ವ್ಯಕ್ತಿ ರೋಗಮುಕ್ತನಾಗಲೆಂದು ಸ್ವಯಂಪ್ರೇರಿತರಾಗಿ ಪ್ರಾರ್ಥನೆ ಮಾಡಲು ಪ್ರಾರಂಭಿಸಿದ ಸಂದರ್ಭಗಳಿವೆ. ಸಹಜವಾಗಿ ಇದೇ ಬಗೆಯಲ್ಲಿ ಜನ ಸಮೂಹಗಳು ಸಂಪೂರ್ಣವಾಗಿ ಭಿನ್ನ ಉದ್ದೇಶಕ್ಕಾಗಿ ಒಟ್ಟಿಗೆ ಸೇರಿರಬಹುದು, ದ್ವೇಷದ ವಿಷಯವಿರಬಹುದು ಅವರ ಕೂಗುಗಳೂ ಕೂಡ ಒಂದು ಬಗೆಯ ಪ್ರಾರ್ಥನಾರೂಪದಲ್ಲಿರಬಹುದು, ಆ ಪ್ರಾರ್ಥನೆ ವಿರೋಧೀ ಹಾಗೂ ವಿನಾಶಕಾರಕ ಶಕ್ತಿಗಳನ್ನು ಕುರಿತಾಗಿರಬಹುದು.

ಆ ಚಲನೆಗಳು ಸ್ವಯಂಪ್ರೇರಿತವಾಗಿರುತ್ತವೆ, ಸಂಘಟಿತವಾದವುಗಳಲ್ಲ, ಅನಿರೀಕ್ಷಿತವಾದವುಗಳು.

ಒಂದು ಆದರ್ಶ ಇಲ್ಲವೆ ಬೋಧನೆ ಇಲ್ಲವೆ ಒಂದು ಕ್ರಿಯೆಯ ಸುತ್ತ ಒಟ್ಟುಗೂಡಿದ ವ್ಯಕ್ತಿಗಳಿಂದ ರೂಪುಗೊಂಡ ಸಮುದಾಯವಿರುತ್ತದೆ, ಆ ವ್ಯಕ್ತಿಗಳು ಅದನ್ನು ಕಾರ್ಯಗತಗೊಳಿಸಲು ಬಯಸುತ್ತಾರೆ, ಅವರ ನಡುವೆ ಸಂಘಟಿಸುವ ಸಂಬಂಧ ಸಾಧನ (link) ವಿರುತ್ತದೆ, ಆ ಸಂಬಂಧ ಅದೇ ಉದ್ದೇಶಕ್ಕಾಗಿ, ಅದೇ ಸಂಕಲ್ಪಕ್ಕಾಗಿ ಮತ್ತು ಅದೇ ನಂಬಿಕೆಗಾಗಿ ಇರುತ್ತದೆ. ಅವರು ಪ್ರಾರ್ಥನೆ, ಧ್ಯಾನಗಳ ಆಚರಣೆಗೆಂದು ವಿಧಾನವೊಂದನ್ನು ಅನುಸರಿಸುವುದಕ್ಕಾಗಿ ಒಟ್ಟಿಗೆ ಸೇರಬಲ್ಲರು ಮತ್ತು ಅವರ ಗುರಿ ಉಚ್ಚವಾದದ್ದಾಗಿದ್ದರೆ, ಆದರ್ಶ ಸಾಮರ್ಥ್ಯಪೂರ್ಣವಾಗಿದ್ದರೆ, ತಮ್ಮ ಪ್ರಾರ್ಥನೆ, ಧ್ಯಾನಗಳ ಮೂಲಕ, ಈ ಗುಂಪುಗಳು ಜಗತ್ತಿನ ಘಟನೆಗಳ ಮೇಲೆ ಅಸಾಧಾರಣ ಪರಿಣಾಮ ಬೀರಬಲ್ಲವು ಇಲ್ಲವೆ ತಮ್ಮದೇ ಆಂತರಿಕ ಅಭಿವೃದ್ಧಿ ಹಾಗೂ ಸಾಮೂಹಿಕ ಪ್ರಗತಿ ಸಾಧಿಸಬಲ್ಲವು. ಈ ಗುಂಪುಗಳು, ಅವಶ್ಯವಾಗಿ, ಇತರ ಗುಂಪುಗಳಿಗಿಂತ ಬಹಳ ಶ್ರೇಷ್ಠವಾಗಿರುತ್ತವೆ, ಆದರೆ ಅವುಗಳಿಗೆ ಜನಜಂಗುಳಿಯ ಕುರುಡು ಬಲವಾಗಲಿ ಇಲ್ಲವೆ ಸಾಮೂಹಿಕ ಕ್ರಿಯೆ ಕೈಕೊಳ್ಳುವುದಾಗಲಿ ಇರುವುದಿಲ್ಲ. ಇಂತಹ ಗುಂಪಿನ ಜನರು ಜನಜಂಗುಳಿಯ ಭಾವವೇಶದ ಸ್ಥಾನದಲ್ಲಿ ವಿವೇಚನೆಯಿಂದ ಕೂಡಿದ, ಪ್ರಜ್ಞಾಪೂರ್ಣವಾದ ಸಂಘಟನೆಯ ಬಲವನ್ನಿರಿಸುತ್ತಾರೆ.

ಪೃಥ್ವಿಯ ಮೇಲೆ, ಎಲ್ಲ ಕಾಲದಲ್ಲಿ, ಈ ರೀತಿಯಲ್ಲಿ ಸಂಘಟಿತವಾಗಿದ್ದ ಗುಂಪುಗಳಿದ್ದುದು ಕಂಡುಬರುತ್ತದೆ. ಅವುಗಳಲ್ಲಿ ಕೆಲವೊಂದಕ್ಕೆ ಐತಿಹಾಸಿಕ ಜೀವನವಿದೆ, ಜಗತ್ತಿನಲ್ಲಿ ಕೈಕೊಂಡ ಐತಿಹಾಸಿಕ ಕ್ರಿಯೆಯಿದೆ. ಆದರೆ ಅದೊಂದು ನಿಯಮವೇನೋ ಎನ್ನುವ ರೀತಿಯಲ್ಲಿ ಆ ಗುಂಪುಗಳು ಅಸಾಧಾರಣ



ವ್ಯಕ್ತಿಗಳೊಂದಿಗೆ ಸಾಧಿಸಿದ ಯಶಸ್ಸಿನ ರೀತಿಯಲ್ಲಿ ಜನಜಂಗುಳಿಯೊಡನೆ ಹೆಚ್ಚು ಒಳ್ಳೆಯ ರೀತಿಯಲ್ಲಿ ಯಶಸ್ವಿಯಾಗಿಲ್ಲ. ಅಂತಹ ಗುಂಪುಗಳು ಯಾವಾಗಲೂ ಸಂದೇಹಕ್ಕೆ ಒಳಗಾಗಿವೆ, ಆಕ್ರಮಣಕ್ಕೊಳಗಾಗಿವೆ, ಉಪದ್ರವಕ್ಕೊಳಗಾಗಿವೆ ಮತ್ತು ಬಹಳಷ್ಟು ಸಲ ಅವುಗಳನ್ನು ಕ್ರೂರ ರೀತಿಯಲ್ಲಿ, ಮಬ್ಬಾದ ಹಾಗೂ ಅಜ್ಞಾನದ ರೀತಿಯಲ್ಲಿ ವಿಭಜನೆಗೊಳಗಾಗುವಂತೆ ಮಾಡಲಾಗಿದೆ. ಯಾವುದೊಂದು ನಂಬಿಕೆಯ ಸುತ್ತ ಒಂದುಗೂಡಿದ ಅರೆ–ಧಾರ್ಮಿಕ, ಅರೆ–ವೀರೋಚಿತ ಗುಂಪುಗಳಿದ್ದವು ಇಲ್ಲವೆ ಅದಕ್ಕೂ ಹೆಚ್ಚಾಗಿ ನಿಶ್ಚಿತ ಗುರಿಯನ್ನಿರಿಸಿಕೊಂಡಿದ್ದ ಪಂಥಗಳಿದ್ದವು, ಜಗತ್ತಿನಲ್ಲಿ ಅವುಗಳನ್ನು ಕುರಿತಾದ ಸ್ವಾರಸ್ಯಕರ ಇತಿಹಾಸವಿದೆ. ಅವು, ನಿಶ್ಚಿತವಾಗಿ, ತಮ್ಮ ವ್ಯಕ್ತಿಗತ ಪ್ರಯತ್ನದ ಮೂಲಕ, ಸಾಮೂಹಿಕ ಪ್ರಗತಿಗಾಗಿ ಹೆಚ್ಚಿನದನ್ನು ಕೈಕೊಂಡಿವೆ.

ಆದರ್ಶ ಸಂಘಟನೆಯೊಂದಿದೆ, ಅದನ್ನು ಪೂರ್ತಿಯಾಗಿ ಸಿದ್ಧಿಸಿಕೊಂಡರೆ ಅದು ಒಂದು ಬಗೆಯ ಬಹಳ ಸಾಮರ್ಥ್ಯಪೂರ್ಣ ಏಕತೆಯನ್ನು ಸೃಷ್ಟಿಸಬಲ್ಲದು. ಅದರಲ್ಲಿ ಸೇರಿರುವ ಅಂಶಗಳಲ್ಲಿ ಎಲ್ಲದಕ್ಕೂ ಒಂದೇ ಗುರಿ, ಒಂದೇ ಸಂಕಲ್ಪ ಮತ್ತು ಸಾಕಷ್ಟಾದ ಆಂತರಿಕ ಅಭಿವೃದ್ಧಿ ಇರಬೇಕು, ಆ ಅಭಿವೃದ್ಧಿಯು ಉದ್ದೇಶ, ಪ್ರೇರಣೆ, ಅಭೀಪ್ಸೆ ಮತ್ತು ಕ್ರಿಯೆಗಳ ಈ ಆಂತರಿಕ ಒಂದುಗೂಡುವಿಕೆಗೆ ಸುಸಂಗತ ಕಾಯವನ್ನು ಒದಗಿಸಲು ಶಕ್ತವಾಗಿರಬೇಕು.

ಎಲ್ಲ ಕಾಲದಲ್ಲಿ ದೀಕ್ಷೆ ನೀಡುವ ಕೇಂದ್ರಗಳು ಇದನ್ನು ಆಚರಣೆಯಲ್ಲಿ ತರಲು ಪ್ರಯತ್ನಿಸಿವೆ, ಹೆಚ್ಚು ಕಡಿಮೆ ಯಶಸ್ಸನ್ನು ಕಂಡಿವೆ ಮತ್ತು ಇದು ಕ್ರಿಯೆಗಾಗಿ ಅತ್ಯಂತ ಸಾಮರ್ಥ್ಯಪೂರ್ಣ ಸಾಧನ ಎಂದು ರಹಸ್ಯ ವಿಜ್ಞಾನದ ಸಂಪ್ರದಾಯಗಳಲ್ಲಿ ಯಾವಾಗಲೂ ಹೇಳಲಾಗಿರುತ್ತದೆ.

ವ್ಯಕ್ತಿಗತ ಘಟಕ (unit) ಸಿದ್ಧಿಸಿಕೊಳ್ಳಬಹುದಾದ ಸುಸಂಗತತೆಯನ್ನು ಸಾಮೂಹಿಕ ಘಟಕ ಸಿದ್ಧಿಸಿಕೊಳ್ಳಬಲ್ಲದಾದರೆ, ಅದು ಬಲ ಮತ್ತು ಕ್ರಿಯೆ ಬಹುವಾಗಿ ಅಭಿವೃದ್ಧಿಗೊಳ್ಳುವಂತೆ ಮಾಡಬಹುದು.

ಸಾಮಾನ್ಯವಾಗಿ, ಅನೇಕ ವ್ಯಕ್ತಿಗಳನ್ನು ಒಟ್ಟಿಗೆ ತಂದು ಗುಂಪುಗೂಡಿಸಿದಾಗ ಆ ಗುಂಪಿನ ಸಾಮೂಹಿಕ ಗುಣಮಟ್ಟ, ಪ್ರತಿಯೊಬ್ಬ ವ್ಯಕ್ತಿಯನ್ನು ಪ್ರತ್ಯೇಕವಾಗಿ ಗಮನಿಸಿದಾಗ, ಅವನಲ್ಲಿರುವ ಮೌಲ್ಯಕ್ಕಿಂತ ಕಡಿಮೆಯಾಗಿರುತ್ತದೆ. ಆದರೆ ಸಾಕಷ್ಟು

ಪ್ರಜ್ಞೆಯುಳ್ಳ ಹಾಗೂ ಸಹಯೋಜಿತ ಸಂಘಟನೆಯೊಂದಿಗೆ, ತದ್ವಿರುದ್ಧವಾಗಿ, ವ್ಯಕ್ತಿಗತ ಕ್ರಿಯೆಯ ಸಾಮರ್ಥ್ಯ ಹೆಚ್ಚು ಅಭಿವೃದ್ಧಿ ಹೊಂದುವಂತೆ ಮಾಡಬಹುದು.

**(9/369–70)** **– ಶ್ರೀಮಾತೆ**

*

## ಪ್ರಾರ್ಥನೆಗಳು – ಭಗವಂತನತ್ತ ಹೊರಳಿದ ಭಾವಗಳು

ಮನುಷ್ಯನ ಜೀವನ ಬಯಕೆಗಳ, ಆವಶ್ಯಕತೆಗಳ ಮತ್ತು ಆ ಕಾರಣದಿಂದಾಗಿ ಆಸೆಗಳ ಜೀವನವಾಗಿದೆ, ಕೇವಲ ಭೌತಿಕ, ಪ್ರಾಣಿಕ ಜೀವನ ಹಾಗಿದೆಯಷ್ಟೇ ಅಲ್ಲ, ಆದರೆ ಅವನ ಮಾನಸಿಕ ಹಾಗೂ ಆಧ್ಯಾತ್ಮಿಕ ಸತ್ತೆಯಲ್ಲೂ ಕೂಡ ಅಂತಹದೇ ಆಗಿದೆ. ಜಗತ್ತನ್ನಾಳುವ ಶ್ರೇಷ್ಠತರ ಸಾಮರ್ಥ್ಯದ ಬಗ್ಗೆ ಅವನಲ್ಲಿ ಅರಿವುಂಟಾದಾಗ ಅವನು ಅದನ್ನು ತನ್ನ ಆವಶ್ಯಕತೆಗಳ ನೆರವೇರಿಕೆಗಾಗಿ, ಒರಟು ಮಾರ್ಗದ ಮೇಲೆ ಪ್ರಯಾಣದ ನೆರವಿಗಾಗಿ, ಸಂರಕ್ಷಣೆಗಾಗಿ, ಮತ್ತು ತನ್ನ ಹೆಣಗುವಿಕೆಗಳಲ್ಲಿ ಸಹಾಯಕ್ಕಾಗಿ ಪ್ರಾರ್ಥನೆಯ ಮೂಲಕ ಸಮೀಪಿಸುತ್ತಾನೆ. ಸಾಮಾನ್ಯ ಧಾರ್ಮಿಕ ರೀತಿಯಲ್ಲಿ ಭಗವಂತನ ಬಳಿ ಸಾಗುವುದರಲ್ಲಿ ಒರಟುತನಗಳೇನೇ ಇರಲಿ, ಅವು ಹಲವಾರಿರುತ್ತವೆ, ಅವುಗಳಲ್ಲಿ ವಿಶೇಷವಾದದ್ದೆಂದರೆ ಅವನನ್ನು ಪ್ರಸನ್ನಗೊಳಿಸುವುದರ ಮೂಲಕ, ಅವನಲ್ಲಿ ಮೊರೆಯಿಡುವುದರಿಂದ, ಅವನಿಗೆ ಕಾಣಿಕೆಗಳನ್ನು ಅರ್ಪಿಸುವುದರಿಂದ ಅವನು ಹೊಗಳಿಕೆ ಸ್ವೀಕರಿಸುವುದಕ್ಕೆ ಲಂಚ ಪಡೆಯುವುದಕ್ಕೆ ಮೌನ ಸಮ್ಮತಿ ನೀಡಬಹುದು, ಲೋಲುಪತೆ ತೋರಿಸಬಹುದು ಎಂಬ ಧೋರಣೆ ಹೊಂದಿರುವುದಾಗಿದೆ. ಮತ್ತು ಬಹಳಷ್ಟು ಸಲ, ಅವನನ್ನು ಸಮೀಪಿಸುವಾಗ ಇರಿಸಿಕೊಳ್ಳಬೇಕಾದ ಮನೋಭಾವಕ್ಕೆ ಕಡಿಮೆ ಲಕ್ಷ್ಯಗೊಡಲಾಗುತ್ತದೆ. ಆದಾಗ್ಯೂ ಭಗವಂತನೆಡೆಗೆ ಈ ಬಗೆಯ ಹೊರಳುವಿಕೆ ನಮ್ಮ ಧಾರ್ಮಿಕ ಸತ್ತೆಗೆ ಅವಶ್ಯವಾದ ಚಲನೆ ಮತ್ತು ಅದು ವಿಶ್ವಂಭರ ಸತ್ಯದ ಆಶ್ರಯ ಪಡೆದಿರುತ್ತದೆ.

ಪ್ರಾರ್ಥನೆಯ ಪರಿಣಾಮಕಾರಿತ್ವವನ್ನು ಬಹಳಷ್ಟು ಸಲ ಸಂದೇಹಕ್ಕೆ ಒಳಪಡಿಸಲಾಗುತ್ತದೆ ಮತ್ತು ಪ್ರಾರ್ಥನೆಯೇ ಸ್ವತಃ ತರ್ಕಬಾಹಿರವಾದ ವಿಷಯ, ಅದು ಅನಗತ್ಯ ಹಾಗೂ ಪರಿಣಾಮಕಾರಿಯಲ್ಲದ್ದು ಎಂದು ಭಾವಿಸಲಾಗುತ್ತದೆ. ವಿಶ್ವಂಭರ ಸಂಕಲ್ಪ, ಯಾವಾಗಲೂ, ತನ್ನ ಗುರಿಯ ನೆರವೇರಿಕೆಯನ್ನು



ನಿರ್ವಹಿಸುತ್ತದೆ ಮತ್ತು ಅಹಂಕಾರದಿಂದ ಕೂಡಿದ ಪ್ರಸನ್ನಗೊಳಿಸುವಿಕೆ, ಮೊರೆಯಿಡುವಿಕೆ ಅದು ದಾರಿ ತಪ್ಪುವಂತೆ ಮಾಡಲಾಗದು ಎಂಬುದು ಸತ್ಯ. ವಿಶ್ವಾತೀತನಾದವನು ಸರ್ವಜ್ಞವಾದ ವಿಶ್ವಂಭರ ವ್ಯವಸ್ಥೆಯಲ್ಲಿ ತನ್ನನ್ನು ಅಭಿವ್ಯಕ್ತಗೊಳಿಸುತ್ತಾನೆ, ಅವನಲ್ಲಿರುವ ಹೆಚ್ಚಿನ ಜ್ಞಾನ ಕೈಕೊಳ್ಳಬೇಕಾದುದನ್ನು ಕುರಿತು ಮೊದಲೇ ಕಂಡುಕೊಂಡಿರಬೇಕು ಮತ್ತು ಅದಕ್ಕೆ ಮಾನವ ಯೋಚನೆಯಿಂದ ನಿರ್ದೇಶನವಾಗಲಿ, ಉತ್ತೇಜನವಾಗಲಿ ಅವಶ್ಯವಿರುವುದಿಲ್ಲ ಮತ್ತು ವ್ಯಕ್ತಿಗತ ಆಸೆಗಳು ಜಗತ್ತಿನ ವ್ಯವಸ್ಥೆಯಲ್ಲಿ ನಿರ್ಧಾರಕ ಅಂಶಗಳಾಗಿರುವುದಿಲ್ಲ, ನಿರ್ಧಾರಕ ಅಂಶಗಳಾಗಲಾರವು ಎಂಬುದು ಸತ್ಯ. ಆದರೆ ಹಾಗೆಯೇ ವಿಶ್ವಂಭರ ಸಂಕಲ್ಪದ ಕಾರ್ಯನಿರ್ವಹಣೆ ಅಥವಾ ವ್ಯವಸ್ಥೆ ಯಾಂತ್ರಿಕ ನಿಯಮದಿಂದ ಕಾರ್ಯಗತಗೊಳ್ಳುವುದಿಲ್ಲ, ಮಾನವ ಸಂಕಲ್ಪ, ಅಭೀಪ್ಸೆ, ನಂಬಿಕೆ ಇವುಗಳೂ ಕೂಡ ಮಹತ್ವ ಪಡೆದಿರುವ ಸಾಮರ್ಥ್ಯಗಳಿಂದ ಹಾಗೂ ಶಕ್ತಿಗಳಿಂದ ಕಾರ್ಯರೂಪಕ್ಕೆ ಬರುತ್ತವೆ. ಪ್ರಾರ್ಥನೆ ಆ ಸಂಕಲ್ಪ, ಅಭೀಪ್ಸೆ ಮತ್ತು ನಂಬಿಕೆಗಳಿಗೆ ಕೊಟ್ಟ ಒಂದು ರೂಪ ಮಾತ್ರ. ಬಹಳಷ್ಟು ಸಲ ಅದರ ರೂಪಗಳು ಒರಟಾಗಿರುತ್ತವೆ. ಶಿಶು ಸದೃಶವಾಗಿರುತ್ತವೆ (ಅದೊಂದು ದೋಷವಲ್ಲ)ಯಷ್ಟೇ ಅಲ್ಲ, ಆದರೆ ಬಾಲಿಶವೂ ಆಗಿರುತ್ತವೆ, ಆದಾಗ್ಯೂ ಅದಕ್ಕೆ ನಿಜವಾದ ಸಾಮರ್ಥ್ಯ ಹಾಗೂ ಪ್ರಾಮುಖ್ಯತೆ ಇರುತ್ತದೆ. ಪ್ರಾರ್ಥನೆಯ ಸಾಮರ್ಥ್ಯ ಮತ್ತು ಅರ್ಥವೆಂದರೆ ಮನುಷ್ಯನ ಸಂಕಲ್ಪ, ಅಭೀಪ್ಸೆ ಮತ್ತು ನಂಬಿಕೆಗಳನ್ನು ದೈವೀ ಸಂಕಲ್ಪದ ಸ್ಪರ್ಶದಲ್ಲಿ ಇರಿಸುವುದಾಗಿದೆ, ಆ ದೈವೀ ಸಂಕಲ್ಪ ಪ್ರಜ್ಞಾಪೂರ್ಣ ದೈವೀ ಸತ್ತೆಯದಾಗಿದ್ದು, ಆ ಸತ್ತೆಯೊಡನೆ ನಾವು ಪ್ರಜ್ಞಾಪೂರ್ಣ ಹಾಗೂ ಜೀವಂತ ಸಂಬಂಧಗಳಲ್ಲಿ ಪ್ರವೇಶಿಸಬಲ್ಲೆವು. ಏಕೆಂದರೆ ನಮ್ಮ ಸಂಕಲ್ಪ ಹಾಗೂ ಅಭೀಪ್ಸೆ, ನಿಸ್ಸಂಶಯವಾಗಿ, ಅಂತಹದನ್ನು ನಿಮ್ನತರ ಇಲ್ಲವೆ ಉಚ್ಚತರ ಉದ್ದೇಶಕ್ಕಾಗಿ ತಮ್ಮದೇ ಬಲದಿಂದ ಹಾಗೂ ಪ್ರಯತ್ನದಿಂದ ಕೈಕೊಳ್ಳಬಲ್ಲವು – ಮತ್ತು ಅದನ್ನು ಉಪಯೋಗಿಸ–ಬಹುದಾದ ಏಕೈಕ ಶಕ್ತಿಯೆಂದು ಮುಂದಿರಿಸುವ ಹಲವಾರು ಶಿಸ್ತುಪಾಲನೆಗಳಿವೆ, – ಇಲ್ಲವೆ ದೈವೀ ಅಥವಾ ವಿಶ್ವಂಭರ ಸಂಕಲ್ಪಕ್ಕೆ ಅಧೀನವಾಗಿ, ಅದರ ಮೇಲಿನ ಅವಲಂಬನೆಯಿಂದ ಆ ಶಕ್ತಿ ಕಾರ್ಯಕೈಕೊಳ್ಳಬಹುದು. ಮತ್ತು ಈ ಎರಡನೆಯ ರೀತಿ, ಆ ದೈವೀ ಸಂಕಲ್ಪ ನಮ್ಮ ಅಭೀಪ್ಸೆಗೆ ಸ್ಪಂದಿಸುತ್ತದೆ ಎಂದು ಭಾವಿಸಬಹುದು, ಆದರೆ ಹಾಗಾಗುವುದು ಬಹುಮಟ್ಟಿಗೆ ಯಾಂತ್ರಿಕವಾಗಿ, ಚೈತನ್ಯದ ಒಂದು ನಿಯಮವೆಂದಾಗಿ ಇಲ್ಲವೆ ಯಾವುದೇ ಸಂದರ್ಭದಲ್ಲಿ ಅವೈಯಕ್ತಿಕವಾಗಿ, ಇಲ್ಲವೆ

ಆ ರೀತಿ ದೈವೀ ಸಂಕಲ್ಪ ದೈವೀ ಅಭೀಪ್ಸೆಗೆ ಮತ್ತು ಮಾನವ ಆತ್ಮದ ನಂಬಿಕೆಗೆ ಪ್ರಜ್ಞಾಪೂರ್ವಕವಾಗಿ ಸಹಾಯವನ್ನು, ಮಾರ್ಗದರ್ಶನವನ್ನು, ಬೇಡಿಕೊಂಡ ರಕ್ಷಣೆ ಮತ್ತು ಫಲಪ್ರದತೆಯನ್ನು ತರುತ್ತ, ಪ್ರತಿಸ್ಪಂದಿಸುತ್ತದೆ ಎಂದು ಭಾವಿಸಬಹುದು: "ಯೋಗಕ್ಷೇಮಮ್ ವಹಾಮ್ಯಹಂ".

ಪ್ರಾರ್ಥನೆ, ನಮಗಾಗಿ ಈ ಸಂಬಂಧವನ್ನು ಏರ್ಪಡಿಸುವುದಕ್ಕೆ ಸಹಾಯ ಮಾಡುತ್ತದೆ. ಮೊದಲಿಗೆ ಆ ಸಹಾಯ ನಿಮ್ನಸ್ತರದಲ್ಲಿರಬಹುದು, ಅಲ್ಲಿ ಅದು ಕೇವಲ ಅಹಂಕಾರಯುಕ್ತವಾದದ್ದು, ಸ್ವ–ಭ್ರಮೆಗೊಳಗಾದದ್ದು ಎಂಬುದರ ಜೊತೆಗೆ ಹೊಂದಾಣಿಕೆ ಮಾಡಿಕೊಂಡದ್ದಾಗಿರಬಹುದು, ಆದರೆ ನಂತರ ಅದರ ಹಿಂದಿರುವ ಆಧ್ಯಾತ್ಮಿಕ ಸತ್ಯದ ಎಳೆತಕ್ಕೆ ಒಳಗಾಗಬಹುದು. ಅನಂತರ ಬೇಡಲಾದ ವಸ್ತುವನ್ನು ಕೊಡುವುದು ಮುಖ್ಯ ವಿಷಯವಾಗಿರುವುದಿಲ್ಲ, ಆದರೆ ಆ ಸಂಬಂಧ, ಭಗವಂತನೊಡನೆ ಮನುಷ್ಯ ಜೀವನದ ಪ್ರಜ್ಞಾಪೂರ್ಣ ವಿನಿಮಯ ಮಹತ್ವದ್ದಾಗಿರುತ್ತವೆ. ಆಧ್ಯಾತ್ಮಿಕ ವಿಷಯದಲ್ಲಿ ಹಾಗೂ ಆಧ್ಯಾತ್ಮಿಕ ಲಾಭಗಳನ್ನು ಅರಸುವುದರಲ್ಲಿ ಈ ಪ್ರಜ್ಞಾಪೂರ್ಣ ಸಂಬಂಧ ಶ್ರೇಷ್ಠ ಸಾಮರ್ಥ್ಯವಾಗಿರುತ್ತದೆ. ಇಡಿಯಾಗಿ ನಮ್ಮದೇ ಸ್ವ–ಅವಲಂಬನೆಯ ಆಧಾರವಿರುವ ಹೋರಾಟ ಮತ್ತು ಪ್ರಯತ್ನಗಳಿಗಿಂತ ಅದು ಬಹಳ ಶ್ರೇಷ್ಠ ಸಾಮರ್ಥ್ಯವಾಗಿರುತ್ತದೆ ಮತ್ತು ಅದು ಹೆಚ್ಚು ಪೂರ್ಣವಾದ ಆಧ್ಯಾತ್ಮಿಕ ಬೆಳವಣಿಗೆ ಹಾಗೂ ಅನುಭವ ತಂದುಕೊಡುತ್ತದೆ. ಕೊನೆಯಲ್ಲಿ ಅವಶ್ಯವಾಗಿ ಪ್ರಾರ್ಥನೆ ನಮ್ಮನ್ನು ತಯಾರಿಸುತ್ತಿದ್ದ ಶ್ರೇಷ್ಠ ವಿಷಯದಲ್ಲಿ ನಿಂತುಹೋಗುತ್ತದೆ–ವಾಸ್ತವದಲ್ಲಿ ನಾವು ಪ್ರಾರ್ಥನೆ ಎಂದು ಕರೆಯುವುದರ ರೂಪವು ನಂಬಿಕೆ, ಸಂಕಲ್ಪ ಹಾಗೂ ಅಭೀಪ್ಸೆಗಳಿದ್ದಾಗ, ಅವಶ್ಯವಾಗಿ ಉಳಿದುಕೊಳ್ಳುವುದಿಲ್ಲ – ಇಲ್ಲವೆ ಸಂಬಂಧದ ಸಂತೋಷಕ್ಕಾಗಿ ಉಳಿದುಕೊಳ್ಳುತ್ತದೆ ಮತ್ತು ಹಾಗೆಯೇ ಅದರ ಉದ್ದೇಶಗಳು, ಅದು ಸಿದ್ಧಿಸಿಕೊಳ್ಳಲು ಅರಸುತ್ತಿರುವ ಅರ್ಥ ಇಲ್ಲವೆ ಆಸಕ್ತಿಗಳು ನಾವು ಉದ್ದೇಶರಹಿತ ಭಕ್ತಿಯನ್ನು ತಲುಪುವವರೆಗೆ ಹೆಚ್ಚು ಹೆಚ್ಚಾಗಿ ಉಚ್ಚವಾಗುತ್ತ ಹೋಗುತ್ತವೆ, ಉದ್ದೇಶರಹಿತ ಭಕ್ತಿ ಎಂದರೆ ಒತ್ತಾಯದ ಬೇಡಿಕೆ ಇಲ್ಲವೆ ಹಾತೊರೆತ ಇಲ್ಲದ ಪರಿಶುದ್ಧ ಮತ್ತು ಸರಳ ದೈವೀಪ್ರೇಮವಾಗಿರುತ್ತದೆ.

ಭಗವಂತನೆಡೆಗಿರುವ ಈ ಮನೋಭಾವದಿಂದ ಉದ್ಭವಿಸುವ ಸಂಬಂಧಗಳು ದೈವೀ ತಂದೆ–ತಾಯಿಗಳು ಮಗುವಿನೊಂದಿಗಿರುವ ಸಂಬಂಧ ಇಲ್ಲವೆ ದೈವೀ



ಮಿತ್ರನೊಂದಿಗೆ ಇರುವ ಸಂಬಂಧದ ಹಾಗಿರುತ್ತವೆ,–ಇಲ್ಲವೆ ಜ್ಞಾನ ಸಂಪಾದನೆ ಗುರಿಯಾಗಿದ್ದರೆ ದೈವೀ ಮಾರ್ಗದರ್ಶಕ, ಬೋಧಕ, ದೈವೀ ಪ್ರಕಾಶ ನೀಡುವವನೆಡೆಗೆ ಮಾನವ ಆತ್ಮ ಬರುತ್ತದೆ, ಏಕೆಂದರೆ ಭಗವಂತ ಜ್ಞಾನ ನೀಡುವ ಸೂರ್ಯನಿದ್ದ ಹಾಗೆ–ಇಲ್ಲವೆ ಅದು ನೋವಿನಿಂದ, ವೇದನೆಯಿಂದ ಆಗುವ ತೊಂದರೆಯ ನಿವಾರಣೆಗಾಗಿ, ಸಾಂತ್ವನಕ್ಕಾಗಿ ಮತ್ತು ಮುಕ್ತಿಗಾಗಿ ಇಲ್ಲವೆ ಅದರ ಎಲ್ಲ ಆಂತರಿಕ ಮತ್ತು ನೈಜ ಕಾರಣಗಳಿಂದ ಮುಕ್ತಿಗಾಗಿ ಭಗವಂತನತ್ತ ಬರುತ್ತದೆ.* ಈ ವಿಷಯಗಳಲ್ಲಿ ಒಂದು ವಿಶಿಷ್ಟ ವರ್ಗ ಶ್ರೇಣಿ ಇರುವುದನ್ನು ಕಂಡುಕೊಳ್ಳುತ್ತೇವೆ, ಏಕೆಂದರೆ ಪಿತೃತ್ವ, ಯಾವಾಗಲೂ, ಕಡಿಮೆ ಹತ್ತಿರದ್ದು, ಕಡಿಮೆ ಗಾಢವಾದದ್ದು, ಭಾವಾವೇಶವುಳ್ಳದ್ದು, ನಿಕಟವಾಗಿರದೆ ಇದ್ದದ್ದು ಆಗಿರುವ ಕಾರಣದಿಂದಾಗಿ ಯೋಗದಲ್ಲಿ ಅದನ್ನು ಆಶ್ರಯಿಸುವುದು ಬಹಳ ಕಡಿಮೆ, ಹಾಗೂ ಯೋಗ ಅತಿ ಹೆಚ್ಚು ಹತ್ತಿರವಾಗಿರುವ ಏಕತೆಯನ್ನು ಅರಸುತ್ತದೆ. ದೈವೀ ಮಿತ್ರನೊಡನಿರುವ ಸಂಬಂಧ ಹೆಚ್ಚು ಮಧುರವಾದ ಹಾಗೂ ನಿಕಟವಾದ ವಿಷಯ, ಅಸಮಭಾವದಲ್ಲೂ ಒಂದು ಬಗೆಯ ಸಮಭಾವಕ್ಕೆ ಮತ್ತು ನಿಕಟತೆಗೆ ಮತ್ತು ಪರಸ್ಪರ ಸ್ವ–ಅರ್ಪಣೆಗೆ ಅವಕಾಶ ನೀಡುತ್ತದೆ. ಕೊಡುವ, ತೆಗೆದುಕೊಳ್ಳುವ ವಿಚಾರ ಮಾಯವಾಗುವಷ್ಟು ಆ ಸಂಬಂಧ ಹತ್ತಿರವಾದಾಗ, ಎಲ್ಲದಕ್ಕೂ ಸಾಕಾಗುವ ಪ್ರೇಮದ ಉದ್ದೇಶದ ಹೊರತಾಗಿ ಬೇರೆ ಯಾವ ಉದ್ದೇಶವಿರದಂತಾದಾಗ ಅದು ಅಸ್ತಿತ್ವದ ಲೀಲೆಯಲ್ಲಿ ಜೊತೆ ಆಟಗಾರನ ಮುಕ್ತ ಹಾಗೂ ಸಂತೋಷಕರ ಸಂಬಂಧವಾಗುವ ತಿರುವು ಪಡೆಯುತ್ತದೆ. ಆದರೆ ತಾಯಿ ಮತ್ತು ಮಗು ಇವರ ನಡುವಿರುವ ಸಂಬಂಧ ಇನ್ನೂ ಹೆಚ್ಚು ಹತ್ತಿರವಾದದ್ದು ಹಾಗೂ ಹೆಚ್ಚು ಆತ್ಮೀಯವಾದದ್ದು. ಹಾಗಾಗಿ ಧಾರ್ಮಿಕ ಪ್ರಚೋದನೆ ಹೆಚ್ಚು ಸಮೃದ್ಧವಾಗಿ ಉತ್ಸಾಹಪೂರಿತವಾಗಿದ್ದಾಗ ಆ ಸಂಬಂಧ ಬಹಳ ಹೆಚ್ಚಿನ ಪಾತ್ರ ವಹಿಸುತ್ತದೆ ಮತ್ತು ಮನುಷ್ಯನ ಹೃದಯದಿಂದ ಪುಟಿದೆದ್ದು ಬರುತ್ತದೆ. ಆತ್ಮ ತನ್ನ ಎಲ್ಲ ಆಸೆಗಳು, ತೊಂದರೆಗಳೊಂದಿಗೆ ಮಾತೃ–ಆತ್ಮದತ್ತ ಹೋಗುತ್ತದೆ, ದೈವೀಮಾತೆ ಅದು ಹಾಗಿರಲಿ ಎಂದು ಬಯಸುತ್ತಾಳೆ, ಅದರಿಂದಾಗಿ ಅವಳು ತನ್ನ ಪ್ರೇಮಪೂರ್ಣ ಹೃದಯ ಹೊರಹರಿಯುವಂತೆ ಮಾಡುವಳು. ಅದು (ಆತ್ಮ)

* ಇವು ಗೀತೆ ಗುರುತಿಸಿದ ಭಕ್ತರ ನಾಲ್ಕು ವರ್ಗಗಳಲ್ಲಿ ಮೂರು ಎಂದರೆ ಆರ್ತ (ತೊಂದರೆಗೊಳಗಾದವನು), ಅರ್ಥಾರ್ಥಿ (ವೈಯಕ್ತಿಕ ವಿಷಯಗಳನ್ನು ಅರಸುವವನು), ಜಿಜ್ಞಾಸು (ದೈವೀ ಜ್ಞಾನವನ್ನು ಅರಸುವವನು).

ಅವಳತ್ತ ಹೊರಳುತ್ತದೆ ಏಕೆಂದರೆ ಈ ಪ್ರೇಮದ ಸ್ವ–ಅಸ್ತಿತ್ವದಲ್ಲಿರುವ ಸ್ವಭಾವದಿಂದಾಗಿ ಮತ್ತು ಏಕೆಂದರೆ ಜಗತ್ತಿನಲ್ಲಿ ನಮ್ಮ ಅಲೆದಾಟಗಳಿಂದ ನಮ್ಮ ಮನೆಯಿರುವುದರತ್ತ ಮತ್ತು ಯಾರ ಹೃದಯದಲ್ಲಿ ನಾವು ವಿಶ್ರಾಂತಿಯನ್ನು ಕಂಡುಕೊಳ್ಳುತ್ತೇವೆಯೋ ಅದರತ್ತ ಬೆರಳು ಮಾಡಿ ಅದು ತೋರಿಸುವುದರಿಂದಾಗಿ.

ಆದರೆ ಅತ್ಯುಚ್ಚ ಮತ್ತು ಶ್ರೇಷ್ಠತಮ ಸಂಬಂಧ ಯಾವುದೇ ಸಾಮಾನ್ಯ ಧಾರ್ಮಿಕ ಪ್ರೇರಣೆಯಿಂದ ಪ್ರಾರಂಭಗೊಳ್ಳುವಂತಹದಲ್ಲ, ಆದರೆ ಅದಕ್ಕೂ ಹೆಚ್ಚಾಗಿ ಅದು ಯೋಗದ ಸಾರಸತ್ವವಾಗಿರುತ್ತದೆ, ಪ್ರೇಮದ ಸ್ವಭಾವದಿಂದಲೇ ಪುಟಿದೆದ್ದು ಬರುತ್ತದೆ, ಅದು ಪ್ರೇಮಿಯ ಹಾಗೂ ಪ್ರೇಮಪಾತ್ರರ ನಡುವಿರುವ ಭಾವೋದ್ರೇಕ. ಭಗವಂತನೊಡನೆ ಸಂಪೂರ್ಣವಾಗಿ ಏಕತೆ ಪಡೆಯಬೇಕೆಂಬ ಆತ್ಮದ ಆಸೆಯಿರುವ ಎಲ್ಲೆಡೆಯಲ್ಲಿ ಈ ರೂಪದ ದೈವೀ ಹಾತೊರೆತ ಧಾರ್ಮಿಕವಾದವುಗಳಲ್ಲಿಯೂ ಕೂಡ ತನ್ನ ಮಾರ್ಗ ಕಂಡುಕೊಳ್ಳುತ್ತದೆ, ಧಾರ್ಮಿಕವಾದ ರೀತಿಗಳು ಇದನ್ನು ಒಳಗೊಂಡಿರುವುದಿಲ್ಲ ಎಂದು ತೋರಿಬರುತ್ತದೆ ಮತ್ತು ಸಾಮಾನ್ಯ ಪದ್ಧತಿಯಲ್ಲಿ ಅದಕ್ಕೆ ಸ್ಥಾನ ನೀಡಿರುವುದಿಲ್ಲ. ಇಲ್ಲಿ ಬೇಡಲಾದ ಒಂದು ವಿಷಯ ಪ್ರೇಮವಾಗಿರುತ್ತದೆ, ಹೆದರಿಕೊಳ್ಳುವ ಒಂದು ವಿಷಯ ಆ ಪ್ರೇಮವನ್ನು ಕಳೆದುಕೊಳ್ಳುವುದಾಗಿರುತ್ತದೆ, ಪ್ರತ್ಯೇಕತೆಯಿಂದಾಗುವ ವೇದನೆಯೇ ಏಕ ಮಾತ್ರ ವೇದನೆ, ಏಕೆಂದರೆ ಉಳಿದೆಲ್ಲ ವಿಷಯಗಳು ಪ್ರೇಮಿಗೆ ಅಸ್ತಿತ್ವದಲ್ಲಿರುವುದಿಲ್ಲ, ಇಲ್ಲವೆ ಪ್ರಾಸಂಗಿಕವಾಗಿ, ಪರಿಣಾಮ ಸ್ವರೂಪದಲ್ಲಿ ಬರುತ್ತವೆ, ಪ್ರೇಮದ ಉದ್ದೇಶವೆಂದಾಗಿ ಇಲ್ಲವೆ ನಿಬಂಧನೆಗಳೆಂದಾಗಿ ಬರುವುದಿಲ್ಲ. ಎಲ್ಲ ಪ್ರೇಮ, ಅದರ ಸ್ವಭಾವದಲ್ಲಿ, ಸ್ವ–ಅಸ್ತಿತ್ವದಲ್ಲಿರುವಂತಹದು, ಏಕೆಂದರೆ ಅದು ಏಕತೆಯಲ್ಲಿರುವ ರಹಸ್ಯ ಒಂದುಗೂಡುವಿಕೆಯಿಂದ ಮತ್ತು ಆ ಒಂದಾಗಿರುವಿಕೆಯ ಭಾವನೆಯಿಂದ ಪುಟಿದೆದ್ದು ಬರುತ್ತದೆ, ಇಲ್ಲವೆ ಇನ್ನೂ ಒಂದರಿಂದ ಇನ್ನೊಂದು ಬೇರೆ ಹಾಗೂ ವಿಭಜಿತಗೊಂಡಿರುವವು ಎಂದು ಕಲ್ಪನೆ ಮಾಡಿಕೊಳ್ಳಬಲ್ಲ ಆತ್ಮಗಳ ನಡುವೆ ಹೃದಯದಲ್ಲಿ ಒಂದಾಗಿರುವಿಕೆಗಾಗಿ ಇರುವ ಆಸೆಯಿಂದ ಆ ಪ್ರೇಮ ಮೇಲೆದ್ದು ಬರುತ್ತದೆ. ಆದ್ದರಿಂದ ಈ ಎಲ್ಲ ಇತರ ಸಂಬಂಧಗಳು ಕೂಡ, ಸ್ವ–ಅಸ್ತಿತ್ವದಲ್ಲಿರುವ, ಉದ್ದೇಶರಹಿತ ತಮ್ಮ ಸತ್ತೆಯ ಸಂತೋಷದತ್ತ, ಕೇವಲ ಪ್ರೇಮಕ್ಕಾಗಿ ಬರಬಲ್ಲವು. ಹಾಗಿದ್ದಾಗ್ಯೂ ಇತರ ಉದ್ದೇಶಗಳಲ್ಲಿರುವ ತಮ್ಮ ಲೀಲೆಯಿಂದ ಪ್ರಾರಂಭಿಸುತ್ತವೆ ಮತ್ತು ಕೊನೆಯವರೆಗೆ ಅದರಲ್ಲಿ ಸಮಾಧಾನವನ್ನು ಸ್ವಲ್ಪ ಮಟ್ಟಿಗೆ ಕಂಡುಕೊಳ್ಳುತ್ತವೆ. ಆದರೆ ಇಲ್ಲಿ ಪ್ರಾರಂಭ ಪ್ರೇಮ, ಕೊನೆ ಪ್ರೇಮ,



ಇಡೀ ಗುರಿ ಪ್ರೇಮವಾಗಿರುತ್ತದೆ. ವಶದಲ್ಲಿಟ್ಟುಕೊಳ್ಳುವುದಕ್ಕೆ ನಿಜವಾಗಿ ಅಲ್ಲಿ ಆಸೆಯಿರುತ್ತದೆ, ಆದರೆ ಸ್ವ–ಅಸ್ತಿತ್ವದಲ್ಲಿರುವ ಪ್ರೇಮದ ಪೂರ್ಣತೆಯಲ್ಲಿ ಇದರ ಮೇಲೂ ಕೂಡ ಜಯ ಸಾಧಿಸಲಾಗುತ್ತದೆ ಮತ್ತು ಭಕ್ತನ ಕೊನೆಯ ಬೇಡಿಕೆ, ಸರಳವಾಗಿ, ತನ್ನ ಭಕ್ತಿ ಎಂದಿಗೂ ನಿಂತು ಹೋಗದಿರಲಿ, ಇಲ್ಲವೆ ಕಡಿಮೆಯಾಗದಿರಲಿ ಎಂದಿರುತ್ತದೆ. ಅವನು ಸ್ವರ್ಗಸುಖವನ್ನಾಗಲಿ, ಜನ್ಮ ತಾಳುವುದರಿಂದ ಮುಕ್ತಿಯನ್ನಾಗಲಿ, ಇಲ್ಲವೆ ಬೇರೆ ಯಾವ ವಸ್ತುವನ್ನಾಗಲಿ ಬೇಡುವುದಿಲ್ಲ, ಆದರೆ ತನ್ನ ಪ್ರೇಮ ಶಾಶ್ವತವಾಗಿರಲಿ, ಪರಿಪೂರ್ಣವಾಗಿರಲಿ ಎಂಬುದನ್ನು ಬೇಡುತ್ತಾನೆ.

**(21/542–44)** **– ಶ್ರೀ ಅರವಿಂದರು**

*

## ಪ್ರಾರ್ಥನೆಯನ್ನು ಹೇಗೆ ಮಾಡಬೇಕು?

ಪ್ರಾರ್ಥನೆ ಹೃದಯದಿಂದ ಚಿಮ್ಮಿ, ಭಾವದ ಇಲ್ಲವೆ ಅಭೀಪ್ಸೆಯ ಶಿಖರದ ಮೇಲಿಂದ ಹರಿದು ಬರಬೇಕು.

*

ಭಗವಂತ ಹೃದಯದಲ್ಲಿ ಇಣುಕಿ ನೋಡುತ್ತಾನೆ ಮತ್ತು ಕೈಕೊಳ್ಳಲು ಅವನು ತಿಳಿದಿರುವ ಸರಿಯಾದ ಕ್ಷಣ ಬಂದಾಗ ಪರದೆಯನ್ನು ಸರಿಸುತ್ತಾನೆ. ನೀನು ಭಕ್ತಿ–ಸಿದ್ಧಾಂತದ ಮೇಲೆ ಒತ್ತುಕೊಟ್ಟು ಹೇಳಿರುವಿ, ಅದರ ಪ್ರಕಾರ ಮನುಷ್ಯ ಭಗವಂತನನ್ನು ಅವನ ನಾಮದಿಂದ ಕರೆಯಬೇಕು ಮತ್ತು ಅವನು ಅದಕ್ಕೆ ಉತ್ತರ ನೀಡಬೇಕು, ಅವನು ಕೂಡಲೆ ಅಲ್ಲಿರಬೇಕು. ಬಹುಶಃ ಅದು ಹಾಗಿರಬಹುದು, ಆದರೆ ಯಾರಿಗಾಗಿ ಇದು ನಿಜವಾಗಿದೆ? ನಾಮದ ಸಾಮರ್ಥ್ಯದ ಬಗ್ಗೆ ನಿಶ್ಚಿತ ಭಾವನೆ ತಂದುಕೊಂಡ ಒಂದು ಬಗೆಯ ಭಕ್ತನಿಗೆ, ನಾಮದ ಭಾವಾವೇಶವುಳ್ಳವನಿಗೆ ಮತ್ತು ಆ ಆವೇಶವನ್ನು ಕರೆಯಲ್ಲಿ ಇರಿಸಿದವನಿಗೆ ಅದು ಸತ್ಯವಾಗಿರಬಹುದು. ಮನುಷ್ಯ ಹಾಗಿದ್ದರೆ ಕೂಡಲೆ ಉತ್ತರ ದೊರಕಿಸಬಹುದು.–ಹಾಗಿರದಿದ್ದರೆ ಮನುಷ್ಯ ಆ ಭಕ್ತನ ಹಾಗಾಗಬೇಕು, ಆಗ ಅವನಿಗೆ ಕೂಡ ಉತ್ತರ ದೊರಕುತ್ತದೆ.

*

ಪೂರ್ತಿ ಹೃತ್ಪೂರ್ವಕವಾಗಿ ಹಾಗೂ ನಿನ್ನ ಎಲ್ಲ ಬಲವನ್ನೊಟ್ಟುಗೂಡಿಸಿ ನಿನ್ನನ್ನು ಭಗವಂತನ ಕೈಗಳಲ್ಲಿರಿಸು. ಯಾವ ಷರತ್ತನ್ನೂ ಇರಿಸಬೇಡ. ಯೋಗದಲ್ಲಿ ಸಿದ್ಧಿ ದೊರಕಲಿ ಎಂದು ಕೂಡ ಬೇಡುವುದು ಬೇಡ. ಅವನ ಸಂಕಲ್ಪ ನಿನ್ನಲ್ಲಿ ಹಾಗೂ ನಿನ್ನ ಮೂಲಕ ನೇರವಾಗಿ ಕಾರ್ಯಮಾಡಲಿ ಎಂಬುದರ ಹೊರತಾಗಿ ಬೇರಾವುದನ್ನೂ ಬೇಡುವುದು ಬೇಡ. ಯಾರು ಭಗವಂತನಲ್ಲಿ ಯಾವುದಕ್ಕಾಗಿ ಬೇಡಿಕೊಳ್ಳುತ್ತಾರೆಯೋ, ಅವನು ಅದನ್ನು ಅವರಿಗೆ ಕೊಡುತ್ತಾನೆ, ಆದರೆ ಯಾರು ತಮ್ಮನ್ನೇ ಭಗವಂತನಿಗೆ ಕೊಟ್ಟುಕೊಳ್ಳುತ್ತಾರೋ ಮತ್ತು ಅವನಿಂದ ಏನನ್ನೂ ಬೇಡುವುದಿಲ್ಲವೋ ಅವರಿಗೆ ಅವನು ಅವಶ್ಯವಾಗಿದ್ದ, ಬೇಡಬಹುದಾಗಿದ್ದ ಪ್ರತಿಯೊಂದನ್ನೂ ಕೊಡುತ್ತಾನೆ ಮತ್ತು ಅದಕ್ಕೆ ಅಧಿಕವಾಗಿ ತನ್ನನ್ನೇ ಕೊಟ್ಟುಕೊಳ್ಳುತ್ತಾನೆ ಮತ್ತು ಸ್ವಯಂ ಪ್ರೇರಿತ ಪ್ರೇಮದ ವರಗಳನ್ನು ಕೊಡುತ್ತಾನೆ.

**(23/533, 788, 16/414)** **– ಶ್ರೀ ಅರವಿಂದರು**

*

ಸರಿಯಾದ ರೀತಿಯಲ್ಲಿ ಅರ್ಪಿಸಿದ ಎಲ್ಲ ಪ್ರಾರ್ಥನೆ ನಮ್ಮನ್ನು ಭಗವಂತನ ಹತ್ತಿರಕ್ಕೆ ಕರೆದೊಯ್ಯುತ್ತದೆ ಮತ್ತು ಅವನೊಂದಿಗೆ ಸರಿಯಾದ ಸಂಬಂಧವನ್ನು ಸ್ಥಾಪಿಸುತ್ತದೆ.

**(22:145)** **– ಶ್ರೀ ಅರವಿಂದರು**

*



## ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 3ನೇ ಮೇ 2013ರ ಶುಕ್ರವಾರದಂದು ಡಾ. ಅಲೋಕ್ ಪಾಂಡೆ, ಶ್ರೀ ಅರವಿಂದಾಶ್ರಮ, ಪುದುಚೇರಿ ಇವರಿಂದ "ಸಪ್ತಚತುಷ್ಟಯಾಸ್" ಎಂಬ ವಿಷಯದ ಬಗ್ಗೆ ಸಾಯಂಕಾಲ 5 ರಿಂದ 6 ಗಂಟೆಯವರೆಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರುಬಂಧುಗಳು ಹಾಗೂ ಇತರರು ಹಾಜರಿದ್ದರು.

ದಿನಾಂಕ 11ನೇ ಮೇ 2013ರ ಶನಿವಾರದಂದು ಡಾ. ಆರ್.ಎಲ್. ಕಶ್ಯಪ್, ಬೆಂಗಳೂರು ಇವರಿಂದ "ದ ಉಪನಿಷತ್" ಕುರಿತು ಬೆಳಿಗ್ಗೆ 10.30 ರಿಂದ 12 ಗಂಟೆಯವರೆಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರುಬಂಧುಗಳು ಹಾಗೂ ಇತರರು ಹಾಜರಿದ್ದರು.

ದಿನಾಂಕ 18ನೇ ಮೇ 2013ರ ಶನಿವಾರದಂದು ಬೆಳಿಗ್ಗೆ 10.30 ರಿಂದ 12.15 ರ ವರೆಗೆ ಶ್ರೀಯುತ ಶ್ರದ್ಧಾಳು ರಾನಡೆಯವರ ವಿರಚಿತ "Science, Religion & Spirituality" ಎಂಬ ವಿಷಯದ ಬಗ್ಗೆ ಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರುಬಂಧುಗಳು ಹಾಜರಿದ್ದರು.

ದಿನಾಂಕ 25ನೇ ಮೇ 2013 ರಂದು ಪ್ರಾರಂಭವಾಗಿ ಒಂದು ವಾರದವರೆಗೂ "LIGHT – Words of Sri Aurobindo and The Mother" ಎಂಬ ವಿಷಯದ ಬಗ್ಗೆ ವಸ್ತು ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಸಾರ್ವಜನಿಕರು ಮತ್ತು ಶ್ರೀಮಾತಾರವಿಂದರ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬಂದು ವೀಕ್ಷಿಸಿದರು.



*“Never seek satisfaction elsewhere than in the Divine.”*

- The Mother

**RNI No. 22511/1971**
No. of Pages **48 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು – 560 078
ದೂರವಾಣಿ : 080–22449882, 22459268

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.